ಮಾನವಿಕ ಕರ್ಣಾಟಕ

ಸಂಪುಟ ೩೩

ಸಂಚಿಕೆ ೧

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು ೫೭೦ ೦೦೬
೨೦೦೩

ಮಾನವಿಕ ಕರ್ನಾಟಕ

ಸಂಪುಟ ೩೩ ಸಂಚಿಕೆ ೧

ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು

೨೦೦೩

MANAVIKA KARNATAKA : A Kannada Quarterly of the University of Mysore, Volume 33, Number 1, Edited by Prof. Ambalike Hiriyanna and Dr. R. Ramakrishna, Published by the Director, Prasaranga, University of Mysore, Manasagangotri, Mysore - 570 006

ಪ್ರಧಾನ ಸಂಪಾದಕರು

ಪ್ರೊ. ಲಕ್ಷ್ಮೀನಾರಾಯಣ ಅರೋರಾ

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

ಸಂಪಾದಕರು

ಪ್ರೊ. ಅಂಬಳಿಕೆ ಹಿರಿಯಣ್ಣ

ಡಾ. ಆರ್. ರಾಮಕೃಷ್ಣ

ಮುದ್ರಕರು

ನಿರ್ದೇಶಕರು

ಮೈ.ವಿ.ವಿ. ಮುದ್ರಣಾಲಯ, ಮೈಸೂರು ೫೭೦ ೦೦೬

ಪ್ರಕಾಶಕರ ಮಾತು

'ಮಾನವಿಕ ಕರ್ನಾಟಕ' ದ ೩೩ನೇ ಸಂಪುಟದ ಮೊದಲನೆಯ ಸಂಚಿಕೆ ಇದೀಗ ಓದುಗರ ಕೈ ಸೇರುತ್ತಿದೆ. ಮಾನವಿಕ ವಿಭಾಗದ ಕೆಲವಾರು ಕ್ಷೇತ್ರಗಳಿಗೆ ಸಂಬಂಧಪಟ್ಟ ೧೦ ಲೇಖನಗಳು ಈ ಹೊತ್ತಗೆಯಲ್ಲಿ ಅಡಕವಾಗಿವೆ. ಸಂಶೋಧನಾತ್ಮಕ ದೃಷ್ಟಿಯಿಂದ ಲೇಖನಗಳು ಜಿಜ್ಞಾಸು ಓದುಗರ ಕುತೂಹಲವನ್ನು ತಣಿಸುವಲ್ಲಿ ಸಾಕಷ್ಟು ನೆರವಾಗುತ್ತವೆ.

ವಿಶ್ವವಿದ್ಯಾನಿಲಯದಲ್ಲಿ ಮಾತ್ರವಲ್ಲದೆ ಹೊರಗಡೆಯ ಬಗೆಬಗೆಯ ಕ್ಷೇತ್ರಗಳಲ್ಲಿ ಕಾರ್ಯನಿರತರಾಗಿರುವ ವಿದ್ವಾಂಸರಿಗೆ ಮತ್ತು ಸಂಶೋಧಕರಿಗೆ 'ಮಾನವಿಕ ಕರ್ನಾಟಕ' ಒಂದು ಮಹತ್ವದ ವೇದಿಕೆಯನ್ನು ಕಲ್ಪಿಸುವಲ್ಲಿ ಸಮರ್ಥವಾಗಿದೆ. ಈ ಸದಾವಕಾಶವನ್ನು ಸಮರ್ಥವಾಗಿ ಓದುಗರ ಬಂಧುಗಳು ಬಳಸಿಕೊಳ್ಳುತ್ತಾರೆಂದು ನಿರೀಕ್ಷಿಸಲಾಗಿದೆ.

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಯವರಾದ ಪ್ರೊ. ಎಸ್.ಎನ್. ಹೆಗ್ಡೆಯವರು ಹಾಗೂ ಕುಲಸಚಿವರಾದ ಶ್ರೀ ಎನ್.ಡಿ. ತಿವಾರಿಯವರು ಈ ಪತ್ರಿಕೆಗಳನ್ನು ಹೊರತರುವಲ್ಲಿ ವಿಶೇಷ ಆಸ್ಥೆ ವಹಿಸಿದ್ದಾರೆ. ಅವರಿಗೂ, ಈ ಹೊತ್ತಗೆಯನ್ನು ಸಂಪಾದಿಸಿಕೊಟ್ಟಿರುವ ಪ್ರೊ. ಅಂಬಳಿಕೆ ಹಿರಿಯಣ್ಣ ಮತ್ತು ಡಾ. ಆರ್. ರಾಮಕೃಷ್ಣ ಅವರಿಗೂ, ಲೇಖನಗಳನ್ನು ಬರೆದುಕೊಟ್ಟು, ಸಂಶೋಧನ ಕ್ಷೇತ್ರದಲ್ಲಿ ತಮ್ಮನ್ನು ವಿಶೇಷವಾಗಿ ತೊಡಗಿಸಿಕೊಂಡಿರುವ ಲೇಖಕಬಂಧುಗಳಿಗೂ, ಈ ಹೊತ್ತಗೆಯ ಡಿ.ಟಿ.ಪಿ. ಕೆಲಸವನ್ನು ನಿರ್ವಹಿಸಿಕೊಟ್ಟಿರುವ 'ಎಚ್. ಎಸ್. ಕಂಪ್ಯೂಟರ್ಸ್' ನ ಶ್ರೀಮತಿ ಮೀನಾ ಸುರೇಶ್ ಅವರಿಗೂ, ಅಚ್ಚಿಸಿಕೊಟ್ಟಿರುವ ವಿಶ್ವವಿದ್ಯಾನಿಲಯಮುದ್ರಣಾಲಯದ ನಿರ್ದೇಶಕರಿಗೂ, ಸಿಬ್ಬಂದಿ ವರ್ಗದವರಿಗೂ, ಎಂದಿನಂತೆ ಈ ಕೆಲಸ ಕಾರ್ಯಗಳಲ್ಲಿ ಸಹಕರಿಸುತ್ತಿರುವ ಪ್ರಸಾರಾಂಗದ ಉಪನಿರ್ದೇಶಕರಾದ ಶ್ರೀ ಬಾ. ವೇ. ಶ್ರೀಧರ ಮತ್ತು ಇತರ ಸಹದ್ಯೋಗಿಗಳಿಗೂ ನನ್ನ ಹಾರ್ದಿಕ ವಂದನೆಗಳು.

ಪ್ರೊ. ಲಕ್ಷ್ಮೀನಾರಾಯಣ ಅರೋರಾ
ಪ್ರಧಾನ ಸಂಪಾದಕರು

ಸಂಪಾದಕೀಯ

ಪ್ರಕೃತ ೩೩ನೆಯ ಸಂಪುಟದ ೧ನೆಯ ಸಂಚಿಕೆ ಮಾನವಿಕ ಹಾಗೂ ಸಮಾಜ ವಿಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿದ ವೈವಿಧ್ಯಪೂರ್ಣವಾದ ಹತ್ತು ಬರಹಗಳನ್ನು ತನ್ನ ಒಡಲೊಳಗೆ ಹುದುಗಿಸಿಕೊಂಡಿದೆ.

ಈ ಸಂಚಿಕೆಯ ಮೊದಲ ಬರಹ 'ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರ' ಪ್ರತಿಷ್ಠಿತ ಹಸ್ತ ಪ್ರತಿಭಂಡಾರವೊಂದರ ಪರಿಚಯ ಮತ್ತು ಮಹತ್ವವನ್ನು ಸಾದರಪಡಿಸುವ ಒಳ್ಳೆಯ ಪ್ರಯತ್ನವಾಗಿದೆ. ಪ್ರಸಕ್ತ ಕರ್ನಾಟಕದ ಬಹುತೇಕ ಎಲ್ಲ ವಿಶ್ವವಿದ್ಯಾಲಯಗಳೂ ತಮ್ಮವೇ ಆದ ಹಸ್ತಪ್ರತಿ ಭಂಡಾರಗಳನ್ನು ಹೊಂದಿದ್ದು ತಂತಮ್ಮ ಇತಿಮಿತಿಗಳಲ್ಲೇ ಅವನ್ನು ಪುನರ್ ನಿರ್ಮಿಸುವ ಕಾರ್ಯದಲ್ಲಿ ಮಗ್ನವಾಗಿವೆ. ವಿಶ್ವವಿದ್ಯಾಲಯಗಳಿಗೆ ಸರಿಸಮವಾಗಿ ಕೆಲವು ಖಾಸಗಿ ಸಂಶೋಧನಾ ಸಂಸ್ಥೆಗಳು ಮತ್ತು ಮಠಗಳು ಕೂಡ ಹಸ್ತಪ್ರತಿಗಳ ಭಂಡಾರವನ್ನು ಹೊಂದಿರುವ ನಿದರ್ಶನಗಳಿವೆ. ಆದರೂ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವಷ್ಟು ವೈವಿಧ್ಯಪೂರ್ಣವೂ ಮೌಲಿಕವೂ ಆದ ಹಸ್ತಪ್ರತಿಗಳು ಬೇರೆಡೆಗಳಲ್ಲಿ ಲಭ್ಯವಿಲ್ಲ ಎಂದು ಲೇಖಕಿ ವೈ.ಸಿ. ಭಾನುಮತಿ ಅವರು ಸಾಧಾರವಾಗಿ ನಿರೂಪಿಸಿದ್ದಾರೆ. ಈ ಕಾರಣಕ್ಕಾಗಿ ಕನ್ನಡ ಹಸ್ತಪ್ರತಿ ಭಂಡಾರಗಳ ಸಾಲಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರಕ್ಕೆ ಒಂದು ವಿಶಿಷ್ಟ ಸ್ಥಾನವಿದೆ ಎಂಬುದನ್ನು ಯಾರಾದರೂ ಒಪ್ಪಲೇಬೇಕು.

ಎಚ್.ಎಂ. ಹೇಮಲತ ಅವರ 'ಲಿಂಗ ವ್ಯವಸ್ಥೆಯ ಅಸಮಾನತೆಯನ್ನು ಅಳೆಯುವಿಕೆ' ಲೇಖನ ಮಾನವ ಅಭಿವೃದ್ಧಿ ವರದಿಯಾಧಾರಿತ ಅಂಕಿ ಅಂಶಗಳನ್ನಾಧರಿಸಿ ಸಿದ್ಧಪಡಿಸಿದ ಒಂದು ಮೌಲಿಕ ಬರಹ. ಲಿಂಗವ್ಯವಸ್ಥೆಯ ಅಸಮಾನತೆಯನ್ನು ಅಳೆಯುವ ಕ್ರಮವನ್ನು ಸಾದರಪಡಿಸುವ ಕುತೂಹಲಕರ ಅಧ್ಯಯನ ಇದು. ಯಾವುದೇ ದೇಶದ ಜನರ ಪರಿಸ್ಥಿತಿ ಹೇಗಿದೆ ಎಂಬುದನ್ನು ಪರಿಶೀಲಿಸಿ ವಿವಿಧ ವರ್ಗಗಳ ನಡುವೆ ಇರುವ ಅಸಮಾನ ಹಂಚಿಕೆಯನ್ನು ಮನವರಿಕೆ ಮಾಡಿಕೊಡುವ ಪ್ರಯತ್ನವೂ ಹೌದು. ಒಂದು ಗೊತ್ತಾದ ದೇಶದ ಜನರ ಸರಾಸರಿ ಮಾನವ ಸಾಮರ್ಥ್ಯ ಎಷ್ಟು ಎಂಬುದನ್ನು ತೋರಿಸುವ ಉದ್ದೇಶ ಈ ಅಧ್ಯಯನದ್ದು. ಈ ಕಾರಣಕ್ಕಾಗಿ ಇದು ಕೂಡ ಒಂದು ಉಪಯುಕ್ತ ಬರಹ ಎನಿಸಿದೆ.

ಎಲ್. ಮಂಜುಳಾಕ್ಷಿ ಅವರ 'ಮಹಿಳೆ ಮತ್ತು ಮಾಧ್ಯಮ' ಲೇಖನ ಮಾಧ್ಯಮಗಳಲ್ಲಿ ಮಹಿಳೆಯ ಪಾತ್ರ, ಸ್ಥಾನಮಾನ, ಆಸಕ್ತಿ ಮುಂತಾದವುಗಳ ಸ್ಥೂಲ ವಿವೇಚನೆ ನಡೆಸುತ್ತದೆ. ಸಮಾಜದ ಕಟ್ಟುಕಟ್ಟಳೆಗಳು, ನೀತಿನೇಮಗಳು, ವಿಧಿ ನಿಷೇಧಗಳು, ನಿರ್ಬಂಧಗಳ ಸಂಕೋಲೆಗಳಲ್ಲಿ ಸಿಲುಕಿ ನಲುಗಿರುವ ಹೆಣ್ಣಿನ ಸ್ಥಿತಿ ಕುರಿತು ಒಂದು ಸಂವಾದ ನಡೆಸುವ ಪ್ರಯತ್ನವಿದೆ. ಸಿನಿಮಾ, ದೂರದರ್ಶನ, ಜಾಹಿರಾತು, ಪತ್ರಿಕೋದ್ಯಮ-ಇವು ಅಧಿಕಾರ ಹೊಂದಲು ಮಹಿಳೆಯ ಪಾಲಿಗೆ ಒಳ್ಳೆಯ ಅಸ್ತ್ರಗಳಾಗಿ ಪರಿಣಮಿಸಿರುವುದನ್ನು

ಪ್ರಸ್ತಾಪಿಸುತ್ತಾ ಈ ಮಾಧ್ಯಮಗಳು ಮಹಿಳಾಶಕ್ತಿಯ ದನಿಯಾದಾಗ ಮಾತ್ರ ಅವುಗಳ ಪ್ರಾಬಲ್ಯದ ಸದ್ಬಳಕೆ ಸಾಧ್ಯ ಎಂದು ಅಭಿಪ್ರಾಯಪಟ್ಟಿರುವುದು ಸಮಂಜಸವಾಗಿ ಕಾಣುತ್ತದೆ.

"ಕನ್ನಡ ಭಾಷಾ ವಿಜ್ಞಾನ ಕ್ಷೇತ್ರಕ್ಕೆ ಪ್ರೊ. ಕೆ. ಕೆಂಪೇಗೌಡ ಅವರ ಕೊಡುಗೆ" ಎಂಬ ಶೀರ್ಷಿಕೆಯಲ್ಲಿ ಆರ್. ರಾಮಕೃಷ್ಣ ಅವರು ಕೆಂಪೇಗೌಡ ಅವರ ಶೈಕ್ಷಣಿಕ ಸಿದ್ಧಿ ಸಾಧನೆಗಳನ್ನು ವಿಸ್ತಾರವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ. ಭಾಷಾವಿಜ್ಞಾನ ಕ್ಷೇತ್ರಕ್ಕೆ ವಿದ್ವಾಂಸರಾಗಿ ಕೆಂಪೇಗೌಡರು ನೀಡಿರುವ ಕೊಡುಗೆಗಳನ್ನು ಪಟ್ಟಿ ಮಾಡಿ ಹೇಳುವಾಗ ಭಾಷಾವಿಜ್ಞಾನ ಕೋಶ(೧೯೭೬) ಸಾಮಾನ್ಯ ಭಾಷಾವಿಜ್ಞಾನ (೧೯೯೩, ೧೯೯೬), ತೌಲನಿಕ ದ್ರಾವಿಡ ಭಾಷಾವಿಜ್ಞಾನ (೧೯೯೬), ಕನ್ನಡ ಭಾಷಾ ಚರಿತ್ರೆ (೧೯೯೪), ಕನ್ನಡ ಭಾಷಾ ಸ್ವರೂಪ (೧೯೯೭)ಕನ್ನಡ ಉಪಭಾಷೆಗಳ ಅಧ್ಯಯನ (೨೦೦೩) - ಈಕೆಲವು ಶೀರ್ಷಿಕೆಗಳ ಸ್ಥೂಲ ವಿವೇಚನೆ ನಡೆಸಿರುವುದು ಉಪಯುಕ್ತ ಎನಿಸಿದೆ. ಮುಖ್ಯವಾಗಿ ಕೆಂಪೇಗೌಡರು ಭಾಷಾವಿಜ್ಞಾನ ಕ್ಷೇತ್ರದಲ್ಲಿ ಈವರೆಗೆ ಸಾಧಿಸಿರುವ ಸಾಧನೆಗಳನ್ನು ಅರಿಯಲು ಸಹಾಯಕವಾಗಿವೆ.

ಕೆ. ವಿಶ್ವನಾಥ್ ಅವರ "ಭಾರತದ ರಾಷ್ಟ್ರೀಯ ಹೋರಾಟ : ಹೊಸ ಬೆಳಕು" ಬರಹ ಭಾರತದ ರಾಷ್ಟ್ರೀಯ ಹೋರಾಟದ ವಿವಿಧ ಮುಖಗಳನ್ನು ಪರಿಚಯಿಸುವ ಪ್ರಯತ್ನ ಮಾಡುತ್ತದೆ. ಭಾರತದ ರಾಷ್ಟ್ರೀಯ ಹೋರಾಟಗಳನ್ನು ಕೂಲಂಕಷವಾಗಿ ಅಭ್ಯಸಿಸಿರುವ ಬ್ರಿಟಿಷ್ ಆಡಳಿತಗಾರರ ಅಧ್ಯಯನಗಳನ್ನು ಇಲ್ಲಿಮರುಪರಿಶೀಲಿಸುವ ಯತ್ನವಿದೆ. ಜೊತೆಗೆ ಬ್ರಿಟಿಷ್ ಬರಹಗಾರರ ಚಿಂತನಕ್ರಮವನ್ನು ತೀವ್ರವಾಗಿ ವಿರೋಧಿಸಿದ ರಾಷ್ಟ್ರೀಯವಾದಿ ದೇಶೀಚಿಂತಕರ ಬರಹಗಳನ್ನೂ ಇಲ್ಲಿ ವಿಮರ್ಶಿಸ ಲಾಗಿದೆ. ಮುಖ್ಯವಾಗಿ ಭಾರತದಲ್ಲಿ ಉದ್ದಗಲಕ್ಕೂ ನಡೆದ ರಾಷ್ಟ್ರೀಯ ಹೋರಾಟಗಳು ಏಷ್ಯಾ ಮತ್ತು ಆಫ್ರಿಕಾ ದೇಶಗಳ ರಾಷ್ಟ್ರೀಯ ಹೋರಾಟಗಳಿಗೆ ಹೇಗೆ ಸ್ಫೂರ್ತಿ ಒದಗಿಸಿದವು ಎಂಬುದನ್ನು ತಿಳಿಸಿಕೊಡಲಾಗಿದೆ. ಈ ಚರ್ಚೆ ಪ್ರಪಂಚದ ಇತಿಹಾಸದಲ್ಲಿ ಈ ರಾಷ್ಟ್ರೀಯ ಹೋರಾಟಗಳ ಮಹತ್ವ ಏನೆಂಬುದನ್ನು ತಿಳಿಸುವುದರಿಂದ ಮಹತ್ವ ಪೂರ್ಣ ಎನಿಸಿದೆ.

ಸೀತಾ ಹನಸೋಗೆ ಅವರು 'ಶ್ರೀ ಗಿರಿಯ ಸಿದ್ಧು ಮಲ್ಲಿಕಾರ್ಜುನ' ಎಂಬ ಲೇಖನ ದಲ್ಲಿ ಸುಮಾರು ಒಂದು ಸಾವಿರ ವರ್ಷಗಳ ಇತಿಹಾಸವಿರುವ ಸಿದ್ಧು ಮಲ್ಲಿಕಾರ್ಜುನ ದೇವಾಲಯದ ಮಹಿಮೆಯನ್ನು ಹೇಳುವುದಕ್ಕಿಂತ ಅದನ್ನು ಒಂದು ಪ್ರೇಕ್ಷಣೀಯ ಸ್ಥಳವನ್ನಾಗಿ ರೂಪಿಸುವ ಬಗೆಗೆ ರಚನಾತ್ಮಕವಾದ ಸಲಹೆಗಳನ್ನು ಮುಂದಿಟ್ಟಿದ್ದಾರೆ. ಲಭ್ಯ ಅನುಷಂಗಿಕ ಆಧಾರಗಳನ್ನಾಧರಿಸಿ ದೇವಾಲಯದ ಚಾರಿತ್ರಿಕ ಮಹತ್ವವನ್ನು ಮನಗಾಣಿಸಿಕೊಟ್ಟಿರುವ ಲೇಖಕರು ಉನ್ನತ ಹಿನ್ನಲೆಯಲ್ಲಿರುವ ಈ ದೇವಾಲಯ ಇಂದು ಅವಸಾನದ ಅಂಚಿನಲ್ಲಿದ್ದು ಇದನ್ನು ಪುನರುಜ್ಜೀವನಗೊಳಿಸಿ ಪ್ರವಾಸಿಗರ ತಾಣವನ್ನಾಗಿ ಮಾರ್ಪಡಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟಿರುವುದು ಗಮನಾರ್ಹ.

ಗತಕಾಲದ ಸಂಸ್ಕೃತಿ ಮತ್ತು ಪರಂಪರೆಗಳ ಹಿರಿಮೆಯನ್ನು ಸಾರುವ ಕೋಟೆ ಕೊತ್ತಲಗಳ ಅಧ್ಯಯನ ಕುತೂಹಲಕಾರಿ. ಕರ್ನಾಟಕದ ಪ್ರಮುಖ ಕೋಟೆ ಕೊತ್ತಲಗಳ ಪರಿಚಯ ಮಾಡಿಕೊಡುವ ಒಂದು ಸ್ತುತ್ಯ ಯತ್ನ ಜಿ. ಶಿವಪ್ಪನವರ 'ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕೋಟೆಗಳು' ಲೇಖನ. ಕನ್ನಡ ನಾಡಿನ ಸ್ವಾಭಿಮಾನಿ ಆಡಳಿತಗಾರ ಟಿಪ್ಪುವಿನ ಕಾಲದಲ್ಲಿ ಮತ್ತು ಅವನಿಗೂ ಮೊದಲೇ ನಿರ್ಮಾಣಗೊಂಡಿದ್ದ ಕೋಟೆಗಳ ಬಗೆಗೆ ಒಂದು ಸಚಿತ್ರ ರೂಪದ ಅಧ್ಯಯನ ಇಲ್ಲಿದೆ. ಆದರೆ ಈ ಅಧ್ಯಯನದಲ್ಲಿ ಅನುಷಂಗಿಕವಾಗಿಯಾದರೂ ಮೌಖಿಕ ಪರಂಪರೆಯ ಆಧಾರಗಳನ್ನು ದೊರಕಿಸಿ ಕೊಳ್ಳದಿದ್ದುದು ಒಂದು ಲೋಪ ಎಂದೇ ಹೇಳಬೇಕು.

ಎಂ. ಅನುಸೂಯ ಅವರ 'ಧರ್ಮ: ತತ್ವಶಾಸ್ತ್ರದ ನೆಲೆಯಲ್ಲಿ' ಲೇಖನ ಧರ್ಮದ ಸ್ವರೂಪ ಸ್ವಭಾವವನ್ನು ತತ್ವಶಾಸ್ತ್ರದ ನೆಲೆಯಿಂದ ವಿವೇಚಿಸುವ ಒಂದು ಅಭ್ಯಾಸಯೋಗ್ಯ ಬರಹ. ಧರ್ಮ ಮತ್ತು ತತ್ವಶಾಸ್ತ್ರದ ನಂಟು ಗಂಟಿನ ಹಿನ್ನೆಲೆಯಲ್ಲಿ ಮಾನವ ಬದುಕಿನ ರಹಸ್ಯವನ್ನು ಅರಿಯುವ ಮಾರ್ಗ ಯಾವುದು ಎಂಬುದನ್ನು ಶೋಧಿಸುವ ಇಲ್ಲಿಯ ಪ್ರಯತ್ನ ಗಮನಾರ್ಹ.

ಪ್ರಕೃತ ಸಂಚಿಕೆ ವರ್ತಮಾನದ ಭೌಗೋಳಿಕ ಹಾಗೂ ರಾಜಕೀಯ ಸಮಸ್ಯೆಯ ಕಗ್ಗಂಟನ್ನು ಬಿಡಿಸುವ, ಮಾರ್ಗೋಪಾಯಗಳನ್ನು ತೋರಿಸುವ ಬರಹಗಳನ್ನೂ ತನ್ನಮಡಿಲಲ್ಲಿಕಟ್ಟಿಕೊಂಡಿದೆ. ಎಚ್.ಎಸ್. ನಾಗಭೂಷಣಯ್ಯ ಅವರ "ನದಿಗಳ ಜೋಡಣೆಯಿಂದ ದೇಶದ ಅಭಿವೃದ್ಧಿ" ಎಂಬ ಲೇಖನ ಎಂದಿಗಿಂತ ಇಂದಿಗೆ ಹೆಚ್ಚು ಪ್ರಸ್ತುತ ಎನಿಸಿದ ವಿಷಯವಾಗಿದ್ದು ಕಾವೇರಿ ನೀರಿನ ಸಮಸ್ಯೆಗೆ ಪರಿಹಾರ ಸೂಚಿಸುವೋಪಾದಿಯಲ್ಲಿ ಗಂಗಾ - ಕಾವೇರಿ ಜೋಡಣೆಯ ಅಗತ್ಯವನ್ನು ಪ್ರತಿಪಾದಿಸುತ್ತದೆ. ಜಲಸಂಪನ್ಮೂಲವನ್ನು ಅಭಿವೃದ್ಧಿಗೊಳಿಸಲು ಅಗತ್ಯವಾದ ಸಲಹೆ ಸೂಚನೆಗಳು ಇಲ್ಲಿದ್ದು ನಾಡಿನ ಅಭ್ಯುದಯವನ್ನು ಬಯಸುವ ಯಾರೂ ಗಮನಿಸ ಬೇಕಾದವಾಗಿವೆ.

ಕೊನೆಯ 'ಗೊರೂರಿನ ನೆನಪು' ಗೊರೂರು ಅಣೆಕಟ್ಟು ಕಟ್ಟುವುದಕ್ಕೂ ಮೊದಲು ಇದ್ದ ಗೊರೂರನ್ನು ಅದರ ಎಲ್ಲ ವೈಭವಗಳೊಂದಿಗೆ ಸ್ಮರಿಸಿಕೊಳ್ಳುವ ನವುರಾದ ಒಂದು ಬರಹ. ಹೇಮಾವತಿ ನದಿಯ ಹಿಂಭಾಗದ ಗ್ರಾಮಗಳು ಆಗ ಇದ್ದ ರೀತಿ, ಆಮೇಲೆ ಅವು ವಿರೂಪಗೊಂಡ ಬಗೆ ಮುಂತಾದವನ್ನು ಸಾದರಪಡಿಸುವ ಆಸಕ್ತಿದಾಯಕ ಲೇಖನ ಇದು. ಇದರ ಕರ್ತೃ ವಿಜಯಸಾರಥಿ ಗೊರೂರು ಅವರು.

ಒಟ್ಟಿನಲ್ಲಿ ಪ್ರಸಕ್ತ ವಿದ್ಯಮಾನಗಳನ್ನು ಚರ್ಚಿಸುವ ಲೇಖನಗಳೊಡನೆ ಅವಸಾನದ ಅಂಚಿನಲ್ಲಿರುವ ದೇವಾಲಯಗಳು, ಕೋಟೆ ಕೊತ್ತಲುಗಳು, ಧರ್ಮ, ಮಹಿಳೆ, ಲಿಂಗ ಅಸಮಾನತೆ -ಇವೇ ಮುಂತಾದ ಮಹತ್ವದ ವಿಷಯಗಳ ಬಗೆಗೆ ಮಾಹಿತಿ ಒದಗಿಸುವ, ಅರ್ಥಪೂರ್ಣ ಸಂವಾದ ನಡೆಸುವ ಲೇಖನಗಳೂ ಇಲ್ಲಿ ಸೇರ್ಪಡೆಹೊಂದಿವೆ. ಓದುಗರಿಗೆ ಇವು ಉಪಯುಕ್ತ ಎನಿಸಿದರೆ ಈ ಪ್ರಯತ್ನ ಸಾರ್ಥಕವಾದಂತೆಯೇ ಸರಿ.

– ಅಂಬಳಿಕೆ ಹಿರಿಯಣ್ಣ

– ಆರ್. ರಾಮಕೃಷ್ಣ

ಈ ಸಂಚಿಕೆಯ ಬರಹಗಳು

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರ

– ಡಾ. ವೈ.ಸಿ. ಭಾನುಮತಿ

ಕರ್ನಾಟಕದ ಹಸ್ತಪ್ರತಿ ಭಂಡಾರಗಳಲ್ಲಿ ವಿಸ್ತಾರ ಮತ್ತು ವಿವಿಧತೆಯಿಂದ ಬಹು ಪ್ರಸಿದ್ಧವಾಗಿರುವ ಭಂಡಾರವೆಂದರೆ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನವಿಭಾಗದಲ್ಲಿರುವ ಹಸ್ತಪ್ರತಿಭಂಡಾರ. ಇದಕ್ಕೆ ಶತಮಾನದ ಇತಿಹಾಸವಿದೆ. ತನ್ನ ಸುದೀರ್ಘ ಪಯಣದಲ್ಲಿ ಹಲವು ತಿರುವುಗಳನ್ನು ಪಡೆಯುತ್ತ ಮುನ್ನಡೆದಿದೆ. ಈ ಭಂಡಾರವು ಜನ್ಮ ತಳೆದಿದ್ದು ಮೈಸೂರಿನ ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿ. ಪ್ರಾಚೀನ ಸಾಹಿತ್ಯದ ಅಮೂಲ್ಯ ಆಕರಗಳಾದ ಹಸ್ತಪ್ರತಿಗಳನ್ನು ಸಂಗ್ರಹಿಸಿ ರಕ್ಷಿಸುವ ಜರೂರನ್ನು ಮನಗಂಡ ಅಂದಿನ ವಿದೇಶಿ ವಿದ್ವಾಂಸರು ಒಂದು ಸುಸಜ್ಜಿತವಾದ ಹಸ್ತಪ್ರತಿ ಭಂಡಾರದ ಕನಸು ಕಂಡರು. ಇದರ ಫಲವಾಗಿ ಬಿ.ಎಲ್. ರೈಸ್ ಅವರ ಮುಂದಾಳತ್ವದಲ್ಲಿ ಮೈಸೂರು ಸಂಸ್ಥಾನದ ಅರಸರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಅವರಿಂದ ಕ್ರಿ.ಶ. ೧೮೮೦ರಲ್ಲಿ 'ಗೌರ್ಮೆಂಟ್ ಓರಿಯಂಟಲ್ ಲೈಬ್ರರಿ' ಎಂಬ ನಾಮಾಂಕಿತದಲ್ಲಿ ಮೈಸೂರಿನಲ್ಲಿರುವ ಈಗಿನ ಪ್ರಾಚ್ಯಾವಿದ್ಯಾಸಂಶೋಧನಾಲಯ ಕಟ್ಟಡದಲ್ಲಿ ಅನಾವರಣಗೊಂಡಿತು. ವಿಕ್ಟೋರಿಯ ರಾಣಿಯ ಸುವರ್ಣಮಹೋತ್ಸವದ ನೆನಪಿಗಾಗಿ ಇದನ್ನು ೧೮೮೦ ಕ್ಕೂ ಮೊದಲೇ ಖಾಸಗಿಯಾಗಿ ಸ್ಥಾಪಿಸಿದ್ದರೆಂದೂ ಅನಂತರ ವಿದ್ವಾಂಸರ ಉಪಯೋಗಕ್ಕಾಗಿ ಸಾರ್ವಜನಿಕವಾಗಿ ತೆರೆಯಲಾಯಿತೆಂಬ ಅಭಿಪ್ರಾಯವೂ ಇದೆ.

ಬಿ.ಎಲ್. ರೈಸ್ ಅವರಂಥ ಅರ್ಪಣಾ ಮನೋಭಾವದ ವಿದ್ವಾಂಸರು ಈ ಸಂಸ್ಥೆಯ ಪ್ರಥಮ ನಿರ್ದೇಶಕರಾಗಿದ್ದರಿಂದ ಪ್ರಾಚ್ಯ ವಿದ್ಯಾಸಂಶೋಧನೆಯ ಚಟುವಟಿಕೆಗಳಿಗೆ ಪೂರಕವಾಗಿ ಸಂಸ್ಥೆಯನ್ನು ಬೆಳೆಸಲು ಸಾಧ್ಯವಾಯಿತು. ಇದು ಕನ್ನಡ, ಸಂಸ್ಕೃತ, ಅರೇಬಿಕ್, ಪರ್ಷಿಯನ್ ಭಾಷೆಗಳ ಹಸ್ತಪ್ರತಿಗಳಿಗೆ ಕೇಂದ್ರ ಸ್ಥಾನವಾಯಿತು. ರೈಸ್ ಅವರು ತಮ್ಮ ಅಧಿಕಾರ ಬಳಸಿಕೊಂಡು ಕುದುರೆ ಸವಾರಿ ಮಾಡಿ ಹಳೆಯ ಮೈಸೂರು ಭಾಗದಲ್ಲಿ ವಿಶೇಷವಾಗಿ ಕನ್ನಡ ಭಾಷೆಯ ಹಸ್ತಪ್ರತಿಗಳನ್ನು ಸಂಗ್ರಹಿಸಿದರು. ಗ್ರಂಥ ಪ್ರಕಟಣೆಗಾಗಿ ಬಿಬ್ಲಿಯೋಥಿಕಾ ಕರ್ನಾಟಿಕ ಮಾಲೆಯನ್ನು ಆರಂಭಿಸಿದರು. ಈ

ಮಾಲಿಕೆಯಲ್ಲಿ ಸ್ವತಃ ರೈಸ್ ಅವರು ಪಂಪಭಾರತ, ಪಂಪರಾಮಾಯಣ, ಕರ್ನಾಟಕ ಭಾಷಾ ಭೂಷಣ, ಶಬ್ದಾನುಶಾಸನ ಗ್ರಂಥಗಳನ್ನು ಹಸ್ತಪ್ರತಿಗಳ ನೆರವಿನಿಂದ ಪರಿಷ್ಕರಿಸಿ ಪ್ರಕಟಿಸಿದರು. ಹಾಗೆಯೇ ತಾವು ಸಂಗ್ರಹಿಸಿದ ಕೆಲವು ಅಪೂರ್ವವಾದ ಕೃತಿಗಳನ್ನು ಪ್ರತಿಮಾಡಿಸಿದರು. ಇವರ ಮಾರ್ಗದರ್ಶನದಲ್ಲಿ ಆರ್. ನರಸಿಂಹಾಚಾರ್, ಕೆ. ಬಿ. ಪಾಠಕ್ ಅವರಂಥ ದೇಶೀ ವಿದ್ವಾಂಸರು ಕನ್ನಡ ಹಸ್ತಪ್ರತಿಭಂಡಾರದಲ್ಲಿ ದುಡಿದರು. ಆರ್. ನರಸಿಂಹಾಚಾರ್ಯರು ೧೯೦೨ ರಿಂದ ೧೯೨೨ವರೆಗೆ ಈ ಸಂಸ್ಥೆಯ ಮುಖ್ಯಸ್ಥರಾಗಿ ಅನೇಕ ಹಸ್ತಪ್ರತಿಗಳನ್ನು ಸಂಗ್ರಹಿಸಿದರು. ಹೀಗೆ ಸರ್ಕಾರಿ ಇಲಾಖೆಯ ಆಶ್ರಯದಲ್ಲಿ ಪ್ರಾಚ್ಯ ಕೋಶಾಗಾರ ಎಂಬ ಹೆಸರಿನಲ್ಲಿ ಕೆಲಸ ಮಾಡುತ್ತಿದ್ದ ಈ ಸಂಸ್ಥೆ ೧೯೨೩ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಡಳಿತದ ಪರಿಧಿಗೆ ಒಳಪಟ್ಟು ಪ್ರಾಚ್ಯ ವಿದ್ಯಾಸಂಶೋಧನ ಎಂಬ ನೂತನ ಹೆಸರು ಹೊತ್ತು ತನ್ನ ಕಾರ್ಯವನ್ನು ಮುಂದುವರೆಸಿತು. ವಿ. ಶಾಮಾಚಾರ್ಯರ ಸಂಪಾದಕತ್ವದಲ್ಲಿ ಕುಮಾರವ್ಯಾಸ ಭಾರತ ಸಂಭವಪರ್ವದ ಪರಿಷ್ಕರಣವು ೧೯೧೪ರಷ್ಟು ಹಿಂದೆಯೇ ಈ ಸಂಸ್ಥೆಯ ಮೂಲಕ ಪ್ರಕಟವಾಗಿತ್ತು. ಮುಂದೆ ಆದಿ ಪಂಚಕ ಮತ್ತು ಯುದ್ಧ ಪಂಚಕಗಳ ಪರಿಷ್ಕರಣಗಳು ಹತ್ತು ಸಂಪುಟಗಳಲ್ಲಿ ಮಹತ್ವದ ಪ್ರಕಟಣೆಗಳಾಗಿ ಹೊರಬರುವುದಕ್ಕೆ ಕನ್ನಡ ಹಸ್ತಪ್ರತಿಭಂಡಾರದಲ್ಲಿದ್ದ ಕುಮಾರವ್ಯಾಸ ಭಾರತದ ಮೌಲಿಕ ಹಸ್ತಪ್ರತಿಗಳ ಸಂಗ್ರಹದಿಂದಲೆಂಬುದನ್ನು ಮರೆಯುವಂತಿಲ್ಲ. ಹೀಗೆ ಈ ಯಾದಿಯನ್ನು ವಿಸ್ತರಿಸುತ್ತ ಹೋಗಬಹುದು.

ಕನ್ನಡ ಪರ ಚಟುವಟಿಕೆಗಳ ಕೇಂದ್ರವಾಗಿ ೧೯೬೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗವು ಕನ್ನಡ ಅಧ್ಯಯನ ಸಂಸ್ಥೆಯಾಗಿ ರೂಪುಗೊಂಡ ಸಂದರ್ಭದಲ್ಲಿ ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿದ್ದ ಕನ್ನಡ ಹಸ್ತಪ್ರತಿ ಭಂಡಾರವು ದೇಜಗೌ ಅವರ ಆಸಕ್ತಿ ಮತ್ತು ಪ್ರಯತ್ನದಿಂದಾಗಿ ಕನ್ನಡ ಅಧ್ಯಯನ ಸಂಸ್ಥೆಯೊಂದಿಗೆ ವಿಲೀನವಾಯಿತು. ತನ್ನ ನೆಲೆಯನ್ನು ಇಲ್ಲಿ ಕಂಡುಕೊಂಡಿತು. ಹೊಸ ಸಂಸ್ಥೆಯಲ್ಲಿನ ಸಂಶೋಧನೆಗೆ ಕೇಂದ್ರಬಿಂದುವಾಯಿತು. ಕ್ರಮೇಣ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಂಡಾರ ಎಂದು ಜನಜನಿತವಾಯಿತು.

ಪ್ರಸ್ತುತ ಹಸ್ತಪ್ರತಿ ಭಂಡಾರದಲ್ಲಿ ಸುಮಾರು ಐದು ಸಾವಿರ ಹಸ್ತಪ್ರತಿಗಳಿವೆ. ಈ ಪೈಕಿ ೨೩೨೬ ಓಲೆ ಪ್ರತಿಗಳು, ೬೨೧ ದೊಡ್ಡ ಆಕಾರದ ಕಾಗದದ ಪ್ರತಿಗಳು, ೮೨೦ ಸಣ್ಣ ಆಕಾರದಕಾಗದದ ಪ್ರತಿಗಳು, ೧೧೮೬ ಮೈಕ್ರೋಫಿಲಂ ಪ್ರತಿಗಳು ಸೇರಿವೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಹಸ್ತಪ್ರತಿಗಳನ್ನು ಕಲೆಹಾಕುವಲ್ಲಿ ಹಲವು ವಿದ್ವಾಂಸರ ಪರಿಶ್ರಮವಿದೆ. ಆರಂಭದಲ್ಲಿ ರೈಸ್ ಅವರು ಹಸ್ತಪ್ರತಿಗಳನ್ನು ಸಂಗ್ರಹಿಸಿದರೆ ಅನಂತರದ ವರ್ಷಗಳಲ್ಲಿ 'ಟೂರಿಂಗ್ ಪಂಡಿತ್' ಹುದ್ದೆಯಲ್ಲಿದ್ದ ಪಂಡಿತರು ಕ್ಷೇತ್ರಕಾರ್ಯ ಮಾಡಿ ಅರಮನೆ, ಗುರುಮನೆ, ದೇವಾಲಯ, ಬಸದಿ, ವಿದ್ವಾಂಸರ ಜೋಯಿಸರ ಮನೆಗಳಲ್ಲಿದ್ದ ಹಸ್ತಪ್ರತಿಗಳನ್ನು ಸಂಗ್ರಹಿಸಿದರು. ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ವಿಲೀನಗೊಂಡ

ಬಳಿಕ ಇಲ್ಲಿನ ಸಂಪಾದನ ವಿಭಾಗದ ವಿದ್ವಾಂಸರು ಮತ್ತಷ್ಟು ಹಸ್ತಪ್ರತಿಗಳನ್ನು ಸೇರಿಸಿದರು. ಇವುಗಳಲ್ಲಿ ಬಿ. ಎಸ್. ಸಣ್ಣಯ್ಯನವರು ಶೋಧಿಸಿದ ಇಮ್ಮಡಿ ನಾಗವರ್ಮನ ವರ್ಧಮಾನ ಪುರಾಣದ ಫೋಟೋಸ್ಟ್ಯಾಟ್ ಪ್ರತಿ ಉಲ್ಲೇಖನೀಯ. ಆರಾದಲ್ಲಿದ್ದ ಕನ್ನಡ ಹಸ್ತಪ್ರತಿಗಳನ್ನು ಮೈಕ್ರೋಫಿಲಂಗೆ ಅಳವಡಿಸಿ ತಂದಿದ್ದುಕೂಡ ಗಮನಾರ್ಹವಾಗಿದೆ. ಇತರ ಮೂಲಗಳಿಂದಲೂ ಹಸ್ತಪ್ರತಿಗಳು ದೊರಕಿವೆ. ಮದ್ರಾಸ್ ಹಸ್ತಪ್ರತಿ ಭಂಡಾರದಲ್ಲಿದ್ದ ಕನ್ನಡ ಹಸ್ತಪ್ರತಿಗಳಲ್ಲಿ ಅರ್ಧಭಾಗದಷ್ಟು ಹಸ್ತಪ್ರತಿಗಳು ಪ್ರಕೃತ ಭಂಡಾರಕ್ಕೆ ಸಂದಾಯವಾಗಿವೆ. ಖಾಸಗಿ ವ್ಯಕ್ತಿಗಳೂ ಕೂಡ ತಮ್ಮ ಸಂಗ್ರಹದಲ್ಲಿದ್ದ ಪ್ರತಿಗಳನ್ನು ಇಲ್ಲಿಗೆ ನೀಡಿದ್ದಾರೆ.

ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿ ನಮ್ಮ ಸಾಹಿತ್ಯದ ಸಾವಿರವರ್ಷದ ಇತಿಹಾಸವೇ ಅಡಗಿದೆ, ಕರಿಯು ಕನ್ನಡಿಯಲ್ಲಿ ಅಡಗಿದಂತೆ. ಕನ್ನಡದ ಉಪಲಬ್ಧ ಆದಿಗ್ರಂಥ ಕವಿರಾಜಮಾರ್ಗದಿಂದ ಹಿಡಿದು ೧೯೪೪ರಲ್ಲಿದ್ದ 'ಹನುಮಾನ ವೆಂಕಟರಾಯರ ಕೃತಿಗಳ' ವರೆಗೆ ರಚಿತವಾದ ಗ್ರಂಥಗಳಿವೆ. ಹನ್ನೆರಡನೆಯ ಶತಮಾನ ದಿಂದ ಇಪ್ಪತ್ತನೆಯ ಶತಮಾನದವರೆಗೆ ಸುಮಾರು ಎಂಟು ಶತಮಾನಗಳಲ್ಲಿ ಸಿದ್ಧಗೊಂಡ ಹಸ್ತಪ್ರತಿಗಳಿವೆ. ಇಲ್ಲಿನ ಪ್ರತಿಗಳಲ್ಲಿಯೇ ಅತ್ಯಂತ ಪ್ರಾಚೀನವಾದುದೆಂದರೆ "ಶಾಲಿವಾಹನ ಶಕ ವರ್ಷ ೧೦೫೩ನೆಯ ಸೌಮ್ಯ ಸಂವತ್ಸರದ ಮೂರು ಬಹುಳ ಗುರುವಾರದಲ್ಲು" ಅಂದರೆ ೬.೨.೧೧೩೦ರಲ್ಲಿ ಪ್ರತಿಯಾದ ಕೆ ೨೮೨ ಸಂಖ್ಯೆಯ ನಾಮಲಿಂಗಾನುಶಾಸನ ಟೀಕುಗ್ರಂಥ. ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಕವಿಯ ಸ್ವಹಸ್ತಾಕ್ಷರ ಪ್ರತಿ ದೊರೆಯುವುದು ದುರ್ಲಭ. ಆದರೆ ಈ ಭಂಡಾರದಲ್ಲಿರುವ ಪಂಚಬಾಣನ ಭುಜಬಲಿಚರಿತೆ ಮತ್ತು ಚಂದ್ರಸಾಗರ ವರ್ಣಿಯ (ಕೆ. ೧೮೦೩) ಜಿನಭಕ್ತಿ ಸಾರ ಕೃತಿಗಳು ಕವಿ ಬರೆದುದೆಂಬ ಊಹೆಯಿದೆ.

ಓಲೆಗರಿಯ ಮೇಲೆ ಕಂಠದಿಂದ ಬರೆಯುವ ಕಾಯಕ ಅತ್ಯಂತ ತ್ರಾಸದಾಯಕ. ಹೀಗಿರುವಾಗ ಒಂದು ಇಡೀ ಗ್ರಂಥವನ್ನು ಪ್ರತಿಮಾಡುವಾಗ ಆಗುವ ಶ್ರಮವನ್ನು ಪ್ರತಿಕಾರರು ಹಸ್ತಪ್ರತಿಗಳಲ್ಲಿ ಹೇಳಿಕೊಂಡಿದ್ದಾರೆ. ಮುದ್ರಣಯಂತ್ರವನ್ನು ಕಂಡುಕೊಳ್ಳುವ ಮೊದಲು ಓದುಗನೊಬ್ಬ ತನಗೆ ಅಗತ್ಯವಿರುವ ಗ್ರಂಥವನ್ನು ಸ್ವಂತಕ್ಕಾಗಿ ಹೊಂದಲು ಬಯಸಿದರೆ ಕವಿ ಬರೆದ ಮೂಲಪ್ರತಿಯಿಂದ ಪ್ರತಿಮಾಡಿಕೊಳ್ಳಬೇಕಾಗಿತ್ತು ಅಥವಾ ಹೀಗೆ ಪ್ರತಿಮಾಡಿಕೊಂಡ ಪ್ರತಿಯಿಂದ ಬರೆದುಕೊಳ್ಳಬೇಕಾಗಿತ್ತು. ಕಾಲಾನಂತರದಲ್ಲಿ ಮೂಲಪ್ರತಿ ಮರೆಯಾಗಿ ಹೋಗಿ ಪ್ರತಿಗಳ ಪ್ರತಿಗಳೇ ಉಳಿದು ಬಂದವು. ಒಂದು ಕೃತಿ ಹಲವಾರು ಕೈಗಳನ್ನು ದಾಟಿ ಶತ ಶತಮಾನಗಳನ್ನು ಕ್ರಮಿಸಿ ಚಲಿಸುವಾಗ ಕವಿಪ್ರತಿಯಿಂದ ದೂರವಾಗಿ ಪಾಠದೋಷಗಳಿಗೆ ಈಡಾಗುವುದು ಸಹಜ. ಕೈತಪ್ಪು ಕಣ್ತಪ್ಪು ಮತ್ತು ಕಿವಿತಪ್ಪುಗಳಿಂದಾಗಿ ಭಿನ್ನಪಾಠಗಳು ಉಂಟಾಗುವುದರಿಂದ ಯಾವುದೇ ಕೃತಿಯ ಲಭ್ಯವಿರುವ ಹಸ್ತಪ್ರತಿಗಳಲ್ಲಿ ಏಕರೂಪದ ಪಾಠಗಳನ್ನು

ನಿರೀಕ್ಷಿಸುವಂತಿಲ್ಲ. ಪ್ರತಿಯೊಬ್ಬನ ಕೈ ಬರಹದಲ್ಲಿಯೂ ವೈಯಕ್ತಿಕ ವಿಶಿಷ್ಟತೆ ಇರುವುದರಿಂದ ಹಸ್ತಪ್ರತಿಯಲ್ಲಿಯೂ ಲಿಪಿಕಾರನ ಮನೋಧರ್ಮ ಗುಪ್ತಗಾಮಿನಿಯಾಗಿ ಹರಿದಿದೆ. ಆದರೂ ಕವಿಪಾಠವನ್ನು ಕಂಡುಹಿಡಿಯುವ ಗ್ರಂಥಸಂಪಾದನ ಪ್ರಕ್ರಿಯೆಗೆ ಇಂಥ ಹಸ್ತಪ್ರತಿಗಳೇ ಆಧಾರಸ್ತಂಭವೆಂಬುದನ್ನು ಮನಗಂಡಾಗ ಇವನ್ನು ಜತನದಿಂದ ರಕ್ಷಿಸುವುದೂ ಎಷ್ಟು ಅಗತ್ಯವೆಂಬುದು ವೇದ್ಯವಾಗುತ್ತದೆ.

ಇಲ್ಲಿನ ಹಸ್ತಪ್ರತಿಗಳನ್ನು ವಿವಿಧ ಧರ್ಮದ, ವಿವಿಧ ಸಂಸ್ಕೃತಿಯ ಅಕ್ಷರಸ್ಥರು ಪ್ರತಿಮಾಡಿದ್ದಾರೆ. ಉದಾಹರಣೆಗೆ ಕನಕದಾಸರ ನಳಚರಿತ್ರೆಯ ಕೆ. ೧೬೨೦ ಸಂಖ್ಯೆ ಹಸ್ತಪ್ರತಿಯ ಕಡೆಯಲ್ಲಿ ಬರುವ "ಚಿಪ್ಪಲಿಗ ತಿಮ್ಮಯ್ಯನ ಮಗ ರಂಗಯ್ಯನಿಗೆ ನಳಚರಿತ್ರೆ ಪೊಸ್ತುಕವನ್ನು ಮಂಗಲದ ಶೇಷೀಮಗ ನಾಗಯ್ಯನು ಬರೆದುಕೊಟ್ಟ ನಳಚರಿತ್ರೆ ಪೊಸ್ತುಕಕ್ಕೆ ಜಯಮಂಗಳ ಮಹಾಶ್ರೀ" ಎಂಬ ಬರಹದಿಂದ ಲಿಪಿಕಾರ ಮತ್ತು ಪ್ರತಿಮಾಡಿಸಿದವ ಇಬ್ಬರೂ ಶೂದ್ರವರ್ಗಕ್ಕೆ ಸೇರಿದವರೆಂಬುದು ವಿದಿತವಾಗುತ್ತದೆ. ಬರವಣಿಗೆ ಮೇಲ್ವರ್ಗದವರಿಗೆ ಮಾತ್ರ ಸೀಮಿತವಾಗಿತ್ತೆಂಬ ಅಭಿಪ್ರಾಯಕ್ಕೆ ಹಸ್ತಪ್ರತಿಗಳ ಸಂದರ್ಭದಲ್ಲಿ ಮನ್ನಣೆಯಿಲ್ಲ. ಇಲ್ಲಿ ಧರ್ಮವೇ ಪ್ರಧಾನ. ಹಾಗಾಗಿ ಜೈನ ವೀರಶೈವ ಮತ್ತು ವೈದಿಕ ಧರ್ಮಗಳಿಗೆ ಸೇರಿದ ಪ್ರತಿಗಳಿವೆ. ಹೆಚ್ಚಿನವು ಚೈತ್ಯಾಲಯಗಳಲ್ಲಿ, ಮಠಗಳಲ್ಲಿ, ದೇವಾಲಯಗಳಲ್ಲಿ ಸಿದ್ಧವಾಗಿರುವಂಥವು. ಧರ್ಮಾಮೃತದ ಕೆ. ೧೭೬೯ ಸಂಖ್ಯೆಯ ಹಸ್ತಪ್ರತಿಯನ್ನು ಸಂಕಿಘಟ್ಟದ ಶ್ರೀ ವೀರವರ್ಧಮಾನಸ್ವಾಮಿಯವರ ಚೈತ್ಯಾಲಯದಲ್ಲಿ ಪದುಮಣ್ಣ ಎಂಬಾತ ಪ್ರತಿಮಾಡಿದುದನ್ನು ನಿದರ್ಶನವಾಗಿ ನೀಡಬಹುದು. ಬರೆಯುವಾಗ ತಪ್ಪುಗಳಾದರೆ ಮನ್ನಿಸಬೇಕೆಂಬ ವಿನಯವಂತಿಕೆ ಲಿಪಿಕಾರರದು – "ಬಿಂದು ವಿಸರ್ಗ ದೀರ್ಘವಧಿ ವರ್ನಲೋಪಗಳಿದ್ದರು ಸತ್ತುಪುಷರಾಗಿಯಿದ್ದಂಥವರು ನಂನ ಮೇಲಣ ಪ್ರೀತಿಯಿಂದ ತಿದ್ದಿ ವೋದಿಕೊಂಬ ಹಾಗೆ ಕೃಪೆಯ ಮಾಡಬೇಕು" ಎಂದು ನಂದಿಮಹಾತ್ಮ್ಯವನ್ನು ಪ್ರತಿ ಮಾಡಿದು ಕುಪ್ಪಣ್ಣ ಕೆ. ೯೩೬ ಹಸ್ತಪ್ರತಿಯಲ್ಲಿ ಅರಿಕೆ ಮಾಡಿಕೊಂಡಿದ್ದಾನೆ. ಇಂಥ ಹಲವು ವಿಚಾರಗಳನ್ನು ಹಸ್ತಪ್ರತಿಗಳು ಪ್ರಕಟಿಸುತ್ತಿದ್ದು ಇವು ಸಾಹಿತ್ಯಕೃತಿಗಳಿಗೆ ಹೊರತಾಗಿದ್ದರೂ ಸಾಂಸ್ಕೃತಿಕ ಮಹತ್ವವನ್ನು ಪಡೆಯುತ್ತವೆ.

ಹಸ್ತಪ್ರತಿಭಂಡಾರದಲ್ಲಿರುವ ಗ್ರಂಥಗಳು ಈಗಾಗಲೇ ಗಮನಿಸಿದಂತೆ ಬಹುಬಗೆಯ ವಸ್ತುವಿನಿಂದ ಗಮನ ಸೆಳೆಯುವಂತಿವೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕಾಲದಿಂದ ಕಾಲಕ್ಕೆ ನಡೆದಂಥ ಸಾಹಿತ್ಯಿಕ ಚಳವಳಿಗಳಿಗೆ, ಪಡೆದುಕೊಂಡ ಆಯಾಮಗಳಿಗೆ ಇಲ್ಲಿನ ಹಸ್ತಪ್ರತಿಗಳು ಸಾಕ್ಷಿಯಾಗಿವೆ. ಜೈನಸಾಹಿತ್ಯಕ್ಕೆ ಸಂಬಂಧಿಸಿದಂತೆ ಆದಿನಾಥ, ಅಜಿತನಾಥ, ಮಲ್ಲಿನಾಥ, ನೇಮಿನಾಥ, ಚಂದ್ರಪ್ರಭ, ಶಾಂತಿನಾಥ, ಧರ್ಮನಾಥ, ಅನಂತನಾಥ, ಪಾರ್ಶ್ವನಾಥ, ವರ್ಧಮಾನ ಮೊದಲಾದ ತೀರ್ಥಂಕರ ಚರಿತೆಗಳು : ವಡ್ಡಾರಾಧನೆ ಪುಣ್ಯಾಸ್ರವ ರಾಜಾವಳಿಕಥೆ ಮೊದಲಾದ, ಕಥಾಸಂಕಲನಗಳು : ಅನುಪ್ರೇಕ್ಷೆ, ಅಹಿಂಸಾಚರಿತೆ, ಶ್ರಾವಣಾಚಾರವೇ ಮುಂತಾದ ತಾತ್ವಿಕ ಗ್ರಂಥಗಳು ; ಪಂಪಭಾರತ,

ಗದಾಯುದ್ಧ, ಪಂಪರಾಮಾಯಣ, ಜೀವಂಧರ ಚರಿತೆ, ನಾಗಕುಮಾರ ಚರಿತೆ ಇತ್ಯಾದಿ ಕಾವ್ಯಗಳು ಹೀಗೆ ಜೈನಧರ್ಮದ ಸಾಹಿತ್ಯ ಸಮೃದ್ಧಿಯನ್ನು ಬಿಂಬಿಸುವ ಹಸ್ತಪ್ರತಿಗಳು ಭಂಡಾರದ ಹಿರಿಮೆಯ ದ್ಯೋತಕವಾಗಿವೆ.

ವೀರಶೈವಸಾಹಿತ್ಯದ ವಿಸ್ತಾರವನ್ನು ತಿಳಿಸುವ ಹಸ್ತಪ್ರತಿಗಳಿಗೂ ಇಲ್ಲಿ ಕೊರತೆಯಿಲ್ಲ. ಕೊಂಡಗುಳಿ ಕೇಶಿರಾಜ ಕೃತಿಗಳಿಂದ ಮೊದಲ್ಗೊಂಡು ಬಸವಣ್ಣ, ಅಲ್ಲಮಪ್ರಭು, ಮಹಾದೇವಿಅಕ್ಕ, ಚನ್ನಬಸವಣ್ಣ ಮೊದಲಾದ ಶರಣರ ಮೂರುಸಾವಿರ ವಚನಗಳಿರುವ ಕಟ್ಟು ಹಾಗೂ ಬಿಡಿಪ್ರತಿಗಳು, ಷಟ್ಸ್ಥಲವಚನಗಳು ; ಶೂನ್ಯಸಂಪಾದನೆಗಳು ; ಸ್ವರ ವಚನಗಳು ; ಬಸವಪುರಾಣ ಪದ್ಮರಾಜಪುರಾಣ ಚನ್ನಬಸವಪುರಾಣ ಸಿದ್ಧೇಶ್ವರಪುರಾಣ ಮೊದಲಾದ ಪುರಾಣಕಾವ್ಯಗಳು ; ಹರಿಹರನ ರಗಳೆಗಳು ; ಶಿವತತ್ತ್ವರತ್ನಾಕರ, ಸಿದ್ಧರಾಮ ಚರಿತ್ರೆ, ಗುರುರಾಜ ಚರಿತೆ, ಮರುಳು ಸಿದ್ಧಸಾಂಗತ್ಯ ನನ್ನಯ್ಯಗಳ ಚಾರಿತ್ರದಂಥ ಕಾವ್ಯಗಳು ; ಅಷ್ಟಾವರಣ ಷಟ್ಸ್ಥಲತಿಲಕಾದಿ ಸೈದ್ಧಾಂತಿಕ ಗ್ರಂಥಗಳ ಹಸ್ತಪ್ರತಿಗಳು ವೀರಶೈವ ಸಾಹಿತ್ಯದ ವಿವಿಧ ಮುಖಗಳನ್ನು ಪ್ರತಿನಿಧಿಸುತ್ತವೆ.

ವೈದಿಕ ಸಾಹಿತ್ಯಕ್ಕೆ ಸಂಬಂಧಿಸಿದ ಹಸ್ತಪ್ರತಿಗಳಿಗೂ ಈ ಭಂಡಾರ ಉತ್ತಮ ಆಗರವೆನ್ನಬಹುದು. ತೊರವೆ ರಾಮಾಯಣ, ಆಧ್ಯಾತ್ಮರಾಮಾಯಣ, ಕೌಶಿಕ ರಾಮಾಯಣ, ಆನಂದರಾಮಾಯಣ ಮೊದಲಾದ ರಾಮಾಯಣಗಳು, ಜಗನ್ನಾಥ ವಿಜಯ, ಕುಮಾರವ್ಯಾಸ ಭಾರತ, ವಿಷ್ಣುಪುರಾಣ, ಭೈರವ ಪುರಾಣ, ಒಡೆಯರ ಕಾಲದ ಸಾಹಿತ್ಯಿಕ ಕೃತಿಗಳ ಹಸ್ತಪ್ರತಿಗಳು ಗಮನಾರ್ಹವಾಗಿವೆ. ಕಂಠೀರವ ನರಸರಾಜ ವಿಜಯ, ಕೆಳದಿ ನೃಪವಿಜಯ, ಕೈಫಿಯತ್ತುಗಳು, ಯಕ್ಷಗಾನ ಕೃತಿಗಳು, ಸ್ತೋತ್ರಸಾಹಿತ್ಯ, ಮಾಹಾತ್ಮೆಗಳು, ಟೀಕುಗಳು, ಅಷ್ಟಕಗಳು, ಶತಕಗಳು, ಗಂಜೀಫ಼ು ಆಟದ ವಿವರಗಳುಳ್ಳ ಕೃತಿಗಳ ಹಸ್ತಪ್ರತಿಗಳು ; ವಿವಿಧ ಶಾಸ್ತ್ರಗಳಿಗೆ ಸೇರಿದ ಅಶ್ವಶಾಸ್ತ್ರ, ಗಜಶಾಸ್ತ್ರ, ಜ್ಯೋತಿಷ್ಯಾಸ್ತ್ರ, ಅಲಂಕಾರಶಾಸ್ತ್ರ, ಛಂದಃಶ್ಯಾಸ್ತ್ರ, ನಾಟ್ಯಶಾಸ್ತ್ರ, ಆಯುರ್ವೇದ, ಪ್ರಶ್ನಶಾಸ್ತ್ರ, ಜನವಶ್ಯದಂಥ ಕಾಮಶಾಸ್ತ್ರಗಳು, ಸೂಪಶಾಸ್ತ್ರ, ನಿಘಂಟುಗಳ ಹಸ್ತಪ್ರತಿಗಳು ಪ್ರಾಚೀನರ ಜ್ಞಾನಶಾಖೆಗಳನ್ನು ಹುದುಗಿಸಿಕೊಂಡಿವೆ ಈ ಹಸ್ತಪ್ರತಿಗಳ ನೆರವಿನಿಂದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನ ವಿಭಾಗದ ಪ್ರಾಚ್ಯಮಾಲೆ ಯಿಂದ ೧೨೦ ಕ್ಕೂ ಹೆಚ್ಚು ಗ್ರಂಥಗಳು ಪರಿಷ್ಕಾರಗೊಂಡು ಪ್ರಕಟವಾಗಿವೆ.

ಹಸ್ತಪ್ರತಿಗಳ ಸ್ವರೂಪದಲ್ಲಿ ವಿಶೇಷವೆನಿಸುವ ಕೆಲವು ಪ್ರತಿಗಳು ಈ ಹಸ್ತಪ್ರತಿ ಭಂಡಾರದ ಘನತೆಯನ್ನು ವೃದ್ಧಿಸಿವೆ. ರನ್ನನ ಗದಾಯುದ್ಧ ಕಾವ್ಯದ ಕೆ. ೭೫೭ ಸಂಖ್ಯೆಯ ಪ್ರತಿಯಷ್ಟು ಪ್ರಾಚೀನವಾದ ಗದಾಯುದ್ಧಪ್ರತಿ ರಾಜ್ಯದ ಮತ್ತಾವ ಭಂಡಾರದಲ್ಲಿಯೂ ಕಾಣಸಿಗದು. "ಸಕ ಸಮಗತಿ ರುತು ಯುಗ ಶಶಿ ನಿಕರಾಂಕಂ ಚಿತ್ರಭಾನು ಕಾರ್ತಿಕ ಶಿತಸಪ್ತಮಿ ಸುಕರಂ ಬುಧಸೇವ್ಯಮಾಯ್ತು ರನ್ನನ ಕಾವ್ಯಂ" ಎಂದು ಹಸ್ತಪ್ರತಿಯಲ್ಲಿರುವ ಕಾಲಸೂಚನೆಯಿಂದ ಇದು ಕ್ರಿ.ಶ. ೧೩೪೨ರಲ್ಲಿ ಪ್ರತಿಯಾಗಿರುವುದು ಸ್ಪಷ್ಟ. ಗುಣವರ್ಮ

ಕವಿಯ ಪುಷ್ಪದಂತಪುರಾಣದ ಪ್ರತಿ ಕೆ. ೫೧ ಕೂಡ ಭಂಡಾರದ ಪ್ರಾಚೀನ ಹಸ್ತಪ್ರತಿಗಳಲ್ಲಿ ಒಂದಾಗಿದೆ ಇದು ಶಕ ೧೩೫೮ರಲ್ಲಿ ಅಂದರೆ ಕ್ರಿ. ಶ. ೧೪೩೬ರಲ್ಲಿ ಪ್ರತಿಯಾಗಿರುವುದು ಸ್ಪಷ್ಟ.

ಪ್ರತಿಯೊಬ್ಬ ಮನುಷ್ಯನ ಸ್ವಭಾವದಲ್ಲಿ ಭಿನ್ನತೆಯನ್ನು ಗುರುತಿಸುವಂತೆ ಹಸ್ತಪ್ರತಿಯ ಬರಹದಲ್ಲಿಯೂ ಲಿಪಿಕಾರನ ವೈಯಕ್ತಿಕ ಛಾಪು ಮೂಡಿರುವುದನ್ನು ಗುರುತಿಸಬಹುದು. ಹಾಗಾಗಿ ಹಸ್ತಪ್ರತಿಗಳಲ್ಲಿ ಸುಂದರ ಅಕ್ಷರ, ಮೋಡಿ ಅಕ್ಷರ, ದಪ್ಪ ಅಕ್ಷರ, ಸಣ್ಣ ಅಕ್ಷರ ಹೀಗೆ ನಾನಾ ನಮೂನೆಯ ಅಕ್ಷರಗಳು ಕಾಣಸಿಗುತ್ತವೆ. ಪ್ರಭುದೇವರ ಟೀಕಿನ ವಚನದ ಕೆ. ೧೩೫೩ ಸಂಖ್ಯೆಯ ಹಸ್ತಪ್ರತಿಯಲ್ಲಿರುವ ಅಕ್ಷರಗಳು ಅತ್ಯಂತ ಚಿಕ್ಕವಾಗಿದ್ದು ಸುಂದರವಾಗಿಯೂ ಇವೆ. ಇವು ಸಣ್ಣಬರಹಕ್ಕೆ ದೃಷ್ಟಾಂತವಾಗಿವೆ. ಪ್ರಾಚೀನ ಕನ್ನಡ ಸಾಹಿತ್ಯದ ಜನಪ್ರಿಯ ಕಾವ್ಯಗಳಲ್ಲೊಂದಾದ ಕುಮಾರವ್ಯಾಸ ಭಾರತವು ಅಪಾರ ಓದುಗರನ್ನು ಸೆಳೆದುಕೊಂಡಿದ್ದರಿಂದ ಹೇರಳ ಪಾಠಭೇದಗಳಿಗೆ ಒಳಗಾಗಿದೆ. ಇದರ ಪರಿಷ್ಕರಣೆ ವಿದ್ವಾಂಸರಿಗೊಂದು ಸವಾಲು. ಪರಿಷ್ಕರಣಕಾರ್ಯದಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಹಸ್ತಪ್ರತಿಯೆಂದರೆ ಕನ್ನಡ ಅಧ್ಯಯನ ಸಂಸ್ಥೆಯ ಕೆ. ೨೦೫ ಸಂಖ್ಯೆಯ ಓಲೆಪ್ರತಿ. ಇದು ಕ್ರಿ.ಶ. ೧೫೪೪ರ ಅವಧಿಯದಾಗಿದ್ದು ಭಂಡಾರದಲ್ಲಿರುವ ಕುಮಾರ ವ್ಯಾಸಭಾರತದ ಪ್ರತಿಗಳಲ್ಲಿಯೇ ಹಳೆಯದು. ಇದರ ಮತ್ತೊಂದು ವೈಶಿಷ್ಟ್ಯವೆಂದರೆ ಪ್ರತಿ ಓಲೆಯ ರಂಧ್ರಕ್ಕೂ ತೆಳುವಾದ ಬೆಳ್ಳಿಯ ಕಟ್ಟನ್ನು ಅಳವಡಿಸಿರುವುದು ತುಂಬ ಅನನ್ಯವಾಗಿದೆ. ಹಾಗೂ ಪ್ರತಿಪರ್ವದ ಆರಂಭ ಮತ್ತು ಅಂತ್ಯದಲ್ಲಿ ರೇಖಾಚಿತ್ರವನ್ನು ಬಿಡಿಸಲಾಗಿದೆ. ಸಂಸ್ಥೆಯ ಭಂಡಾರದಲ್ಲಿರುವ ಕಾಗದದ ಪ್ರತಿಗಳಲ್ಲಿಯೇ ಅತ್ಯಂತ ಮೋಹಕವಾದುದು ಕೆ.ಎ. ೩೧೩ ಸಂಖ್ಯೆಯ ಬಸವಪುರಾಣದ ಪ್ರತಿ. ಇದು ಹುಬ್ಬಳ್ಳಿಯ ಮೂರುಸಾವಿರ ಮಠದಿಂದ ಬಂದಿದೆ. ಇದರಲ್ಲಿ ೧-೨೨೦ ಪುಟಗಳಿದ್ದು ಪ್ರತಿಪುಟದ ನಾಲ್ಕು ಅಂಚುಗಳೂ ಬಣ್ಣದ ಹೂವುಗಳಿಂದ ಅಲಂಕೃತ ಗೊಂಡಿವೆ. ಪ್ರಾಕೃತಿಕ ಬಣ್ಣವನ್ನೇ ಬಳಸಿದ್ದರೂ ಇಂದಿಗೂ ಮಾಸದಂತಿದೆ. ಇದರ ರಕ್ಷಾಕಟ್ಟುಗಳು ಕೂಡ ಚಿತ್ರಮಯವಾಗಿವೆ. ಮೇಲಿನ ಕಟ್ಟಿನಲ್ಲಿ ಈಶ್ವರ ಪಾರ್ವತಿ ನಾರದ ಗಣೇಶನ ಚಿತ್ರಗಳಿದ್ದರೆ, ಕೆಳಗಿನ ಕಟ್ಟಿನಲ್ಲಿ ವಿಷ್ಣು ಈಶ್ವರ ಬ್ರಹ್ಮ ಗಣೇಶನ ಚಿತ್ರಗಳ ಜೊತೆಗೆ ಭಕ್ತನ ಚಿತ್ರವೂ ಸೇರಿದೆ.

ನಾಗವರ್ಮನು ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ಕರ್ನಾಟಕ ಭಾಷಾಭೂಷಣ ಎಂದು ಬರೆದಿದ್ದಾನೆ. ಇದರ ಕೆ. ೪೧ ಸಂಖ್ಯೆಯ ಹಸ್ತ ಪ್ರತಿ ಕೂಡ ವೈಶಿಷ್ಟ್ಯ ಪೂರ್ಣವಾಗಿದೆ. ಇಲ್ಲಿ ಸಂಸ್ಕೃತ ಭಾಷೆಯಲ್ಲಿರುವ ಕನ್ನಡವ್ಯಾಕರಣವನ್ನು ಮಲೆಯಾಳಿ ಲಿಪಿ ಬಳಸಿ ಬರೆಯಲಾಗಿದೆ.

ಮುಮ್ಮಡಿ ಕೃಷ್ಣರಾಜರು ನಿರೂಪಿಸಿದ ಗಂಜೀಫ಼ು ಆಟವನ್ನು ಕೆ.ಬಿ. ೫೧೫ ಸಂಖ್ಯೆ ಹಸ್ತಪ್ರತಿಯಲ್ಲಿ ಬಣ್ಣದ ಚಿತ್ರ ಸಹಿತ ನಿರೂಪಿಸಿರುವ ರೀತಿ ಕಲಾತ್ಮಕವಾಗಿದೆ. ಈ ಪ್ರತಿಯಲ್ಲಿಯೇ ೧೭೯೮-೧೮೫೯ರ ಅವಧಿಯ ೬೧ ವರ್ಷಗಳ ಕ್ಯಾಲೆಂಡರ್ ಹಾಗೂ ೧೮೪೯ರಲ್ಲಿ ಭೂಕಂಪವಾದ ಸುದ್ದಿ ದಾಖಲಾಗಿದೆ.

ವೀರಶೈವ ಸಿದ್ಧಾಂತವನ್ನು ಚಿತ್ರಪಟಗಳ ಮೂಲಕ ವರ್ಣಿಸುವ ಉದ್ಧರಣೆಯ ಪಟಲಗಳ ಕೆ ಎ ೩೧೩, ಕೆ ಎ ೩೧೪ ಹಸ್ತಪ್ರತಿಗಳಲ್ಲಿನ ಚಿತ್ರಗಳನ್ನು ಶಿಲ್ಪಿ ಸಿದ್ಧಲಿಂಗಸ್ವಾಮಿಗಳು ನಿರ್ಮಿಸಿದ್ದು ಆಕರ್ಷಕವೂ ಶಾಸ್ತ್ರಶುದ್ಧವೂ ಆಗಿದೆ. ಇದೇ ರೀತಿ ಅಶ್ವಪರೀಕ್ಷೆಗೆ ಸಂಬಂಧಿಸಿದ ಕೆ.ಎ. ೫೭೨ ಸಂಖ್ಯೆಯ ಕಾಗದದ ಪ್ರತಿಯಲ್ಲಿ ೧೦೫ ಕುದುರೆಗಳ ಚೆಲುವಾದ ವರ್ಣಚಿತ್ರವಿದ್ದು ಅವುಗಳ ಪರೀಕ್ಷೆ ಸುಳಿ ಮೊದಲಾದುವನ್ನು ಹೀಗೆ ಸಚಿತ್ರವಾಗಿ ವಿವರಿಸಿರುವುದು ಅಪೂರ್ವವೆನಿಸಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ರಚಿತವಾದ A grammar of Carnataca language, ಮೋಗ್ಲಿಂಗ್‌ನ ಕನ್ನಡ ಗಾದೆಗಳು ಮತ್ತು ಸೌಗಂಧಿಕ ಪರಿಣಯ ಎಂಬ ಕೃತಿಗಳ ಕಲ್ಲಚ್ಚಿನ ಪ್ರತಿಗಳು ಭಂಡಾರದಲ್ಲಿವೆ. ಅಳಿಯಲಿಂಗರಾಜನ ವಂಶಸ್ಥರಿಂದಲೇ ಪಡೆದ ಕೆ. ೧೪೧೦ ಸಂಖ್ಯೆಯ ಪ್ರಭಾವತೀ ಪರಿಣಯದ ಹಸ್ತಪ್ರತಿಯನ್ನು ಬೀಟೆಮರದ ಪೆಟ್ಟಿಗೆಯಲ್ಲಿ ಇಟ್ಟಿರುವ ರೀತಿ, ಪೆಟ್ಟಿಗೆಯ ಮೇಲಿನ ದಂತದ ಕೆತ್ತನೆಗಳು ಒಂದು ಹಸ್ತಪ್ರತಿಯನ್ನು ಯಾವ ರೀತಿ ಸಂರಕ್ಷಿಸಬೇಕೆಂಬುದಕ್ಕೆ ಮಾದರಿಯಾಗಿದೆ.

ಹಸ್ತಪ್ರತಿಗಳ ಉದ್ದಗಲಗಳು ತಾಳೆಗರಿಯ ಅಥವಾ ಕಾಗದದ ಅಳತೆಗೆ ತಕ್ಕಂತೆ ಇರುತ್ತವೆ. ಹಾಗಾಗಿ ಹಸ್ತಪ್ರತಿಗಳ ಗಾತ್ರದಲ್ಲಿವ್ಯತ್ಯಾಸಗಳಿರುವುದು ಅನಿವಾರ್ಯ. ಮುಮ್ಮಡಿ ಕೃಷ್ಣರಾಜ ಒಡೆಯರ ಭಾರತವಿರುವ ಕೆ.ಎ. ೨೬೮ ಸಂಖ್ಯೆಯ ಪ್ರತಿಯು ೩೬.೪"x೨.೨" ಉದ್ದಗಲಗಳನ್ನು ಹೊಂದಿದ್ದು ಭಂಡಾರದಲ್ಲಿರುವ ಹಸ್ತಪ್ರತಿ ಗಳಲ್ಲಿಯೇ ಅತ್ಯಂತ ದೊಡ್ಡ ಹಸ್ತ ಪ್ರತಿಯಾಗಿದ್ದರೆ, ಇದಕ್ಕೆ ವ್ಯತಿರಿಕ್ತವಾಗಿ ಕೆ ೧೧೨೪ ಸಂಖ್ಯೆಯ 'ವಸುದೇವನ ನಿಲುಕಡೆ' ಪ್ರತಿ ೨.೮"x೧.೪" ಉದ್ದಗಲವಿದ್ದು ಅತ್ಯಂತ ಚಿಕ್ಕತಾಳೆಗರಿಪ್ರತಿಯಾಗಿದೆ.

ಸಂಗ್ರಹಿತ ಹಸ್ತಪ್ರತಿಗಳನ್ನು ಹುಳು ಹುಪ್ಪಟೆಗಳಿಂದ ರಕ್ಷಿಸುವುದು ಹಸ್ತಪ್ರತಿ ಸಂಗ್ರಹದಷ್ಟೇ ಗುರುತರವಾದ ಕಾರ್ಯ. ಅದಕ್ಕಾಗಿ ಭಂಡಾರದಲ್ಲಿ ಪ್ರಧೂಮನ ಉಪಚಾರ, ಕೀಟ ನಿರೋಧಕ ತೈಲ ಲೇಪನ ಮಾಡುವ ವ್ಯವಸ್ಥೆಯಿದೆ. ತುಂಬ ಶಿಥಿಲವಾದ ಪ್ರತಿಗಳನ್ನು ಮೈಕ್ರೋಫಿಲಂ ಮೂಲಕ ಹಿಡಿದಿಡುವ, ಉಳಿಸಿಕೊಳ್ಳುವ ಪ್ರಯತ್ನವೂ ನಡೆದಿದೆ. ನಾಗವರ್ಮನ ವರ್ಧಮಾನ ಪುರಾಣದ ಫೋಟೋಸ್ಟಾಟ್ ಪ್ರತಿ ತೆಗೆಯಲಾಗಿದೆ ಇವನ್ನು ಓದಲು ಮೈಕ್ರೋಫಿಲಂ ರೀಡರ್ ಯಂತ್ರದ ಸೌಲಭ್ಯವೂ ಇದೆ.

ಇಂದು ಕರ್ನಾಟಕದಲ್ಲಿ ಹಲವಾರು ಮಠಗಳು, ಸಂಘಸಂಸ್ಥೆಗಳು, ವಿಶ್ವವಿದ್ಯಾಲಯ ಗಳು ತಮ್ಮದೇ ಆದ ಹಸ್ತಪ್ರತಿಭಂಡಾರವನ್ನು ಹೊಂದಿವೆ. ಆದರೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವಷ್ಟು ವೈವಿಧ್ಯವೂ ಮೌಲಿಕವೂ ಆದ ಹಸ್ತಪ್ರತಿಗಳು ಬೇರೆಡೆಗಳಲ್ಲಿ ಇಲ್ಲವೆನ್ನಬಹುದು. ಹಾಗಾಗಿ ಕನ್ನಡ ಹಸ್ತಪ್ರತಿ ಭಂಡಾರಗಳ ಸಾಲಿನಲ್ಲಿ ಇದಕ್ಕೊಂದು ವಿಶಿಷ್ಟ ಸ್ಥಾನವಿದೆ. ಪ್ರಾಚೀನ ಕನ್ನಡ ಸಾಹಿತ್ಯದ ಅಭ್ಯಾಸಿಗಳಿಗೆ ಸಂಶೋಧಕರಿಗೆ ತವನಿಧಿಯಾಗಿದೆ ಎಂಬುದರಲ್ಲಿ ಉತ್ಪ್ರೇಕ್ಷೆಯಿಲ್ಲ. ಕನ್ನಡ ಸಂಶೋಧನೆಗೆ ಭದ್ರ ಬುನಾದಿ ಹಾಕಿದ ಸಂಶೋಧಕ ದಿಗ್ಗಜರು ಈ ಭಂಡಾರದ ಪ್ರತಿಗಳನ್ನು ತಮ್ಮ ಅಧ್ಯಯನದಲ್ಲಿ ಬಳಸಿಕೊಂಡಿರುವುದೂ ಕೂಡ ಇದರ ಮಹತ್ವವನ್ನು ಎತ್ತಿಹಿಡಿಯುತ್ತದೆ.

ಲಿಂಗ ವ್ಯವಸ್ಥೆಯ ಅಸಮಾನತೆಯನ್ನು ಅಳೆಯುವಿಕೆ

– ಡಾ. ಎಚ್.ಎಂ. ಹೇಮಲತ

ಮಹಿಳೆ ಮತ್ತು ಅಭಿವೃದ್ಧಿಯ ಇತಿಹಾಸದಲ್ಲಿ ಗುರುತಿಸಬಹುದಾದ ಒಂದು ಪ್ರಮುಖ ಘಟ್ಟವೆಂದರೆ, ವಿಶ್ವಸಂಸ್ಥೆಯ ಮಾನವ ಅಭಿವೃದ್ಧಿವಿಭಾಗವು ಲಿಂಗ ವ್ಯವಸ್ಥೆಯ ಅಸಮಾನತೆಯನ್ನು ಅಳೆಯಲು ಅಭಿವೃದ್ಧಿಪಡಿಸಿದಂತಹ (೧೯೯೫) ಲಿಂಗ ವ್ಯವಸ್ಥೆ ಮಾಪಕಗಳೆಂದರೆ :

೧) ಲಿಂಗವ್ಯವಸ್ಥೆ ಸಂಬಂಧಿ ಅಭಿವೃದ್ಧಿ ಸೂಚಿ (Gender related Development Index - GDI)

೨) ಲಿಂಗವ್ಯವಸ್ಥೆ ಸಶಕ್ತತೆ ಮಾಪಕ (Gender Empowerment measure - GEM)

ಮಾನವ ಅಭಿವೃದ್ಧಿ ಸೂಚಿಗೆ (Human Development Index) ಪೂರಕವಾಗಿ ಲಿಂಗವ್ಯವಸ್ಥೆ ಸಂಬಂಧಿ ಅಭಿವೃದ್ಧಿ ಸೂಚಿ ಹಾಗೂ ಲಿಂಗವ್ಯವಸ್ಥೆ ಸಶಕ್ತತೆ ಮಾಪಕವನ್ನು ರೂಪಿಸಲಾಗಿದೆ. ಮಾನವ ಅಭಿವೃದ್ಧಿ ಸೂಚಿ (ಮಾಅಸೂ) ಯಲ್ಲಿ ಒಂದು ದೇಶದ ಜನರ ಸರಾಸರಿ ಮಾನವ ಸಾಮರ್ಥ್ಯ ಎಷ್ಟು ಎಂಬುದನ್ನು ತೋರಿಸಲಾಗುತ್ತದೆ. ಅದು ಜನರ ನಿರೀಕ್ಷಣ ಜೀವಿತಾವಧಿ, ಅವರ ವಿದ್ಯಾಭ್ಯಾಸದ ಮಟ್ಟ, ತಿಳಿವಳಿಕೆ ಹಾಗೂ ಜೀವನ ಮಟ್ಟ ಎಷ್ಟಿದೆ ಎಂಬುದನ್ನು ಸೂಚಿಸುತ್ತದೆ. ಒಂದು ದೇಶದ ಜನರ ಪರಿಸ್ಥಿತಿ ಹೇಗಿದೆ ಎಂಬುದನ್ನು ಪರಿಶೀಲಿಸಿ ವಿವಿಧ ವರ್ಗಗಳ ನಡುವೆ ಇರುವ ಅಸಮಾನ ಹಂಚಿಕೆಯನ್ನು ಮಾ.ಅ.ಸೂ. ತಿಳಿಸುತ್ತದೆ.

ಲಿಂಗ ವ್ಯವಸ್ಥೆ ಸಂಬಂಧಿ ಅಭಿವೃದ್ಧಿ ಸೂಚಿಯು (ಲಿಂ.ಸಂ.ಅ.ಸೂ.) ಮಾ.ಅ.ಸೂ. ಯ ಪರಿವರ್ತಕಗಳನ್ನೇ ತೆಗೆದುಕೊಂಡು ಅವನ್ನಿಲ್ಲಿ ಪುರುಷ ಮತ್ತು ಮಹಿಳೆಯರ ನಡುವೆ ಕಾಣಿಸಿಕೊಳ್ಳುವ ವ್ಯತ್ಯಾಸಗಳನ್ನು ಗುರುತಿಸುತ್ತದೆ. ಮಹಿಳೆ ಮತ್ತು ಪುರುಷರ ಸಾಧನೆಯ ನಡುವೆ ಅಂತರ ಹೆಚ್ಚಾದಂತೆ ಲಿಂ.ಸಂ.ಅ.ಸೂ.ಯ ಪ್ರಮಾಣ ಕಡಿಮೆ ಯಾಗುತ್ತಾ ಹೋಗುತ್ತದೆ. ಮಾನವ ಸಾಮರ್ಥ್ಯಗಳಲ್ಲಿ ಲಿಂಗವ್ಯವಸ್ಥೆ ಅಂತರ ಹೆಚ್ಚಾಯಿತೆಂದರೆ ದೇಶದ ಲಿಂ.ಸಂ.ಅ.ಸೂ.ಯು ಮಾ.ಅ.ಸೂ. ಗಿಂತ ಕೆಳಮಟ್ಟದಲ್ಲಿರುತ್ತದೆ.

ಲಿಂ.ಸ.ಮಾ. ವು ಮಹಿಳೆಯರು ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ

ಕ್ರಿಯಾತ್ಮಕವಾಗಿ ಭಾಗವಹಿಸಿ ನಿರ್ಧಾರ ಕೈಗೊಳ್ಳುವಲ್ಲಿ ಎಷ್ಟರಮಟ್ಟಿಗೆ ಅವಕಾಶ ಪಡೆದಿರುತ್ತಾರೆ ಎಂಬುದನ್ನು ಪರಿಶೀಲಿಸುತ್ತದೆ. ಲಿಂ.ಸಂ.ಅ.ಸೂ.ಯು ಸಾಮರ್ಥ್ಯಗಳ ವಿಸ್ತರಣೆಗೆ ಹೆಚ್ಚು ಗಮನ ನೀಡಿದರೆ ಲಿಂ.ಸ.ಮಾ.ವು ಜೀವನದಲ್ಲಿ ಅವಕಾಶಗಳನ್ನು ಉಪಯೋಗಿಸಿಕೊಳ್ಳಲು ಬೇಕಾಗಿರುವ ಸಾಮರ್ಥ್ಯಗಳಿಗೆ ಹೆಚ್ಚು ಗಮನ ನೀಡುತ್ತದೆ. ಲಿಂ.ಸ.ಮಾ.ವು ಮಹಿಳೆಯರ ವೃತ್ತಿ ಅವಕಾಶಗಳು, ಆದಾಯ ಗಳಿಕೆ ಮತ್ತು ನಿರ್ಧಾರ ಕೈಗೊಳ್ಳುವಿಕೆಯಲ್ಲಿ ಭಾಗವಹಿಸುವಿಕೆ ಈ ಮೂರು ಅಂಶಗಳನ್ನು ಗಣನೆಗೆ ತೆಗೆದು ಕೊಳ್ಳುತ್ತದೆ ಮತ್ತು ಈ ಕ್ಷೇತ್ರಗಳಲ್ಲಿ ಮಹಿಳೆಯರು ವಿಷ್ಟು ಸಶಕ್ತರಾಗಿದ್ದಾರೆ ಎಂಬುದನ್ನು ಸೂಚಿಸುತ್ತದೆ.

ಲಿಂ.ಸಂ.ಅ.ಸೂ. ಮತ್ತು ಲಿಂ.ಸ.ಮಾ.ಗಳು ಯಾವುದನ್ನು ಅಂಕಿಅಂಶಗಳಲ್ಲಿ ಅಳೆಯಲು ಸಾಧ್ಯವೋ ಅಂತಹ ಅಂಶಗಳನ್ನು ತೆಗೆದುಕೊಂಡು ಲಿಂಗ ಸಮಾನತೆಯನ್ನು ಸೂಚಿಸುವ ಆದರೆ ಅಳೆಯಲಾಗದ ಇತರ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಉದಾಹರಣೆಗೆ - ಸಮುದಾಯ ಜೀವನದಲ್ಲಿ ಅವರ ಪಾತ್ರ, ಕುಟುಂಬದಲ್ಲಿ ಸಂಪನ್ಮೂಲಗಳ ಬಳಕೆ ಮತ್ತು ವೈಯಕ್ತಿಕ ಸುಭದ್ರತೆ ಇವು ಮಹಿಳೆಯ ಸ್ಥಾನಮಾನ ಮತ್ತು ಜೀವನ ಗುಣಮಟ್ಟವನ್ನು ನಿರ್ಧರಿಸುವ ಪ್ರಮುಖ ಅಂಶಗಳಾದರೂ ಅವನ್ನು ಅಂಕಿಅಂಶಗಳಲ್ಲಿ ಅಳೆಯಲಾಗದಿರುವುದರಿಂದ ಇಲ್ಲಿ ಗಣನೆಗೆ ತೆಗೆದುಕೊಂಡಿಲ್ಲ.

ಬಹಳಷ್ಟು ದೇಶಗಳಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯ ಮೇಲೆ ಲಿಂಗಪಕ್ಷಪಾತವು ಈಗಲೂ ತೀವ್ರವಾದ ಪರಿಣಾಮವನ್ನು ಬೀರುತ್ತಿದೆ. ಲಿಂಗಪಕ್ಷಪಾತವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಲಿಂಗತಾರತಮ್ಯವನ್ನು ಅಳೆಯಲು ಮಾನವ ಅಭಿವೃದ್ಧಿ ವರದಿಯು ರೂಪಿಸಿರುವಂತಹ ಲಿಂ.ಸಂ.ಅ.ಸೂ. ಮತ್ತು ಲಿಂ.ಸ.ಮಾ.ವು ಮಹಿಳಾ ಅಭಿವೃದ್ಧಿ ಕ್ಷೇತ್ರದಲ್ಲಿ ಪ್ರಮುಖ ಹೆಜ್ಜೆಯಾಗಿದೆ.

ಮಾನವ ಅಭಿವೃದ್ಧಿ ಸೂಚಿಯ (ಮಾ.ಅ.ಸೂ.) ಆಯಾಮಗಳಾದ ಜೀವ ನಿರೀಕ್ಷಣಾವಧಿ ಶಿಕ್ಷಣ ಮಟ್ಟ ಮತ್ತು ಆದಾಯ ಇವುಗಳಲ್ಲಿ ಮಹಿಳೆ ಮತ್ತು ಪುರುಷರ ನಡುವಿನ ಅಸಮಾನತೆಯೆ ಲಿಂ.ಸಂ.ಅ.ಸೂ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಲಿಂಗ ಅಸಮಾನತೆಗೆ ಹೊಂದಿಸಿಕೊಂಡಿರುವ ಮಾ.ಅ.ಸೂ.ಯೇ ಲಿಂ.ಸಂ.ಅ.ಸೂ. ಇವೆರಡನ್ನು ಮಾನವ ಅಭಿವೃದ್ಧಿ ವರದಿಯ ಮುಖ್ಯ ಅಂಗವನ್ನಾಗಿ ಅಳವಡಿಸಿಕೊಂಡು ನೀತಿ ನಿರೂಪಕರು ಲಿಂಗಸಮಾನತೆ ಬಗ್ಗೆ ಯಾವಾಗಲೂ ಗಂಭೀರ ಪ್ರಯತ್ನ ಮತ್ತು ಗಮನ ನೀಡುವಂತೆ ಮಾಡಲು ಎಚ್ಚರಿಕೆ ನೀಡುವ ಅಂಶಗಳನ್ನಾಗಿ ಮಾಡಿಕೊಳ್ಳಲು ನಿರ್ಧರಿಸಲಾಗಿದೆ.

ಲಿಂಗವ್ಯವಸ್ಥೆ ಸಂಬಂಧಿ ಅಭಿವೃದ್ಧಿ ಸೂಚಿ (ಲಿಂ.ಸಂ.ಅ.ಸೂ. GDI)

ಲಿಂ.ಸಂ.ಅ.ಸೂ. ಯು ಮಾ.ಅ.ಸೂ.ಯ ಮೂರು ಆಯಾಮಗಳಾದ ಜೀವ ನಿರೀಕ್ಷಣಾವಧಿ. ಶೈಕ್ಷಣಿಕ ಸಾಧನೆ ಹಾಗೂ ಆದಾಯಗಳಿಕೆಯನ್ನು ಲಿಂಗಸಮಾನತೆಗೆ ಹೊಂದಿಸಿಕೊಂಡು ಅಳೆಯಲು ಪ್ರಯತ್ನಿಸುತ್ತದೆ. ಪುರುಷರಿಗಿಂತ ಮಹಿಳೆಯರು ಹೆಚ್ಚು ವರ್ಷ ಬದುಕುತ್ತಾರೆ ಎಂಬ ಅಂಶವನ್ನು ಇಟ್ಟುಕೊಂಡು ಮಹಿಳೆಯರಿಗೆ ಕನಿಷ್ಟ ೨೭.೫ ಮತ್ತು ಗರಿಷ್ಟ ೮೭.೫ ವರ್ಷಗಳು ಹಾಗೂ ಪುರುಷರಿಗೆ ಕನಿಷ್ಟ ೨೨.೫ ವರ್ಷಗಳು ಮತ್ತು ಗರಿಷ್ಟ ೮೨.೫ ವರ್ಷಗಳ ಆಧಾರದ ಮೇಲೆ ಜೀವ ನಿರೀಕ್ಷಣಾವಧಿಯನ್ನು ಲೆಕ್ಕಹಾಕಲಾಗಿದೆ. ಲಿಂಗವ್ಯವಸ್ಥೆಯ ವ್ಯತ್ಯಾಸವನ್ನು ಕಂಡುಹಿಡಿಯಲು ಮಹಿಳೆಯರ ನಿಜವಾದ ಜೀವಿತಾವದಿಯನ್ನು ಅವರ ಗರಿಷ್ಟ ಜೀವಿತಾವಧಿಯೊಂದಿಗೆ ಮತ್ತು ಪುರುಷರ ನಿಜವಾದ ಜೀವಿತಾವಧಿಯನ್ನು ಅವರ ಗರಿಷ್ಟ ಜೀವಿತಾವಧಿಯೊಂದಿಗೆ ಬೇರೆ ಬೇರೆ ಲೆಕ್ಕ ಹಾಕಿ. ಅನಂತರ ಅವೆರಡನ್ನೂ ಸೇರಿಸಿ ನಿರೀಕ್ಷಣ ಜೀವಿತಾವಧಿಯನ್ನು ಕಂಡುಹಿಡಿಯಲಾಗಿದೆ. ಉದಾಹರಣೆಗೆ ಬಾರ್ಬಡೋಸ್ ದೇಶದಲ್ಲಿ ಜೀವ ನಿರೀಕ್ಷಣಾವಧಿ ಪುರುಷರಿಗೆ ೭೨.೯ ವರ್ಷವಿದ್ದರೆ ಮಹಿಳೆಯರಿಗೆ ೭೭.೯ ವರ್ಷವಿದೆ. ಇದರ ಮೂಲಕ ಪುರುಷ ಮತ್ತು ಮಹಿಳೆಯರ ಜೈವಿಕ ವ್ಯತ್ಯಾಸದ ಆಧಾರದ ಮೇಲೆ ಜೀವ ನಿರೀಕ್ಷಣಾವಧಿಯನ್ನು ಕಂಡುಹಿಡಿಯಲು ಪ್ರಯತ್ನಿಸಿದರೆ

ಪುರುಷರದು (೭೨.೯-೨೨.೫) (೮೨.೫-೨ ೨.೫) = ೦.೮೪೦
ಮಹಿಳೆಯರದು (೭೭.೯-೨೭.೫) (೮೭.೫-೨೭.೫) = ೦.೮೪೦

ಬಾರ್ಬಡೋಸ್ ದೇಶದ ಪುರುಷ ಮತ್ತು ಮಹಿಳೆಯರ ನಿಜವಾದ ಜೀವ ನಿರೀಕ್ಷಣಾವಧಿಯ ವರ್ಷಗಳಲ್ಲಿ ವ್ಯತ್ಯಾಸ ಕಂಡುಬಂದರೂ ಜೈವಿಕ ವ್ಯತ್ಯಾಸದ ಆಧಾರದ ಮೇಲೆ ಲೆಕ್ಕ ಹಾಕಿದರೆ ಅವರಿಬ್ಬರ ನಡುವೆ ವ್ಯತ್ಯಾಸ ಕಂಡುಬರುವುದಿಲ್ಲ.

ಶೈಕ್ಷಣಿಕ ಮಟ್ಟದಲ್ಲಿ ಲಿಂ.ಸಂ.ಅ.ಸೂ.ಯು ಮೂರನೆಯ ಎರಡು ಭಾಗದಷ್ಟನ್ನು ವಯಸ್ಕರ ಶಿಕ್ಷಣ ಸಾಧನೆಯಿಂದ ಹಾಗೂ ಮೂರನೇಯ ಒಂದು ಭಾಗದಷ್ಟನ್ನು ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಯ ದಾಖಲಾತಿಯಿಂದ ತೆಗೆದುಕೊಳ್ಳುತ್ತದೆ. ಎರಡನ್ನು ಸೇರಿಸಿ ಶಿಕ್ಷಣಮಟ್ಟವನ್ನು ಲೆಕ್ಕ ಹಾಕುತ್ತದೆ.

ಇನ್ನು ಆದಾಯ ಗಳಿಕೆಯನ್ನು ತೆಗೆದುಕೊಂಡರೆ ಇದೊಂದು ಗಂಭೀರ ವಿಷಯ ವಾಗಿದೆ. ಅನೇಕ ದೇಶಗಳಲ್ಲಿ ಪುರುಷರು ಮತ್ತು ಮಹಿಳೆಯರ ನಡುವಿನ ಆದಾಯ ಗಳಿಕೆಯಲ್ಲಿ ಅಗಾಧ ವ್ಯತ್ಯಾಸವಿದೆ. ಆದರೆ ಈ ವ್ಯತ್ಯಾಸವನ್ನು ತೋರಿಸುವ ಅಂಕಿ ಅಂಶಗಳ ಕೊರತೆ ಸಾಕಷ್ಟಿದೆ. ಹಲವು ದೇಶಗಳ ಅಂಕಿಅಂಶಗಳು ತೋರಿಸುವಂತೆ ಶಿಕ್ಷಣ ಮತ್ತು ಆರೋಗ್ಯದ ಲಿಂಗ ವ್ಯವಸ್ಥೆ ಅಂತರವು ಕಡಿಮೆಯಾಗುತ್ತಿದ್ದರೆ ಆದಾಯದ ಅಂತರ ಹೆಚ್ಚಾಗುತ್ತದೆ. ಅಲ್ಲದೆ ಲಿಂ.ಸಂ.ಅ.ಸೂ.ಯಲ್ಲಿ ಆದಾಯದಲ್ಲಿರುವ ಅಂತರ

ವನ್ನು ಲೆಕ್ಕಹಾಕಲು ತುಂಬ ಕಷ್ಟವಾಗುತ್ತದೆ. ಇದರಿಂದ ವಿಶೇಷ ಪ್ರಯತ್ನವನ್ನು ಹಾಕಿ ಆದಾಯದಲ್ಲಿನ ಲಿಂಗವ್ಯವಸ್ಥೆ ಅಂತರವನ್ನು ಕಂಡುಹಿಡಿಯಲಾಗಿದೆ. ರಾಷ್ಟ್ರೀಯ ಸರಾಸರಿ ಸಂಬಳದ ಅನುಪಾತಕ್ಕೆ ಪುರುಷ ಮತ್ತು ಮಹಿಳೆಯ ಸಂಬಳವನ್ನು ಲೆಕ್ಕಚಾರ ಮಾಡಿ ಆ ಅನುಪಾತವನ್ನು ಅವರ ಶ್ರಮದ ಬಲದ (labour force)ಪಾಲಿನೊಂದಿಗೆ ಗುಣಿಸಲಾಗುತ್ತದೆ. ಅನಂತರ ಅವರ ಆದಾಯ ಗಳಿಕೆಯ ಪಾಲನ್ನು ಜನಸಂಖ್ಯೆ ಪಾಲಿನಿಂದ ಭಾಗಿಸಲಾಗುತ್ತದೆ. ಹೀಗೆ ಬಂದ ಉತ್ತರದಲ್ಲಿ ಲಿಂಗವ್ಯವಸ್ಥೆ ಅಂತರವನ್ನು ಕಂಡುಹಿಡಿಯಲಾಗುತ್ತದೆ.

ಲಿಂಗವ್ಯವಸ್ಥೆ ಸಂಬಂಧಿ ಅಭಿವೃದ್ಧಿ ಸೂಚಿ ಮತ್ತು ಸ್ಥಾನೀಕರಣ (rankings)

೧೯೯೫ರ ಮಾನವ ಅಭಿವೃದ್ಧಿ ವರದಿಯಲ್ಲಿ ೧೩೦ ದೇಶಗಳಿಗೆ ಲಿಂಗವ್ಯವಸ್ಥೆ ಸಂಬಂಧಿ ಅಭಿವೃದ್ಧಿ ಸೂಚಿಯನ್ನು ತಯಾರಿಸಲಾಗಿದೆ. ಈ ಎಲ್ಲಾ ದೇಶಗಳಲ್ಲೂ ಲಿಂ.ಸಂ.ಅ.ಸೂ. ಯು ಮಾನವ ಅಭಿವೃದ್ಧಿ ಸೂಚಿಗಿಂತ ಕಡಿಮೆ ಮಟ್ಟದಲ್ಲಿದೆ. ಲಿಂ.ಸಂ.ಅ.ಸೂ. ಯ ಮೊದಲ ನಾಲ್ಕು ಸ್ಥಾನಗಳನ್ನು ಪಡೆದಿರುವ ದೇಶಗಳೆಂದರೆ ಸ್ವೀಡನ್, ಫಿನ್ಲೆಂಡ್ ನಾರ್ವೆ ಮತ್ತು ಡೆನ್ಮಾರ್ಕ್. ಇದು ಆಶ್ಚರ್ಯದ ವಿಷಯವಲ್ಲ, ಏಕೆಂದರೆ ಈ ನಾಲ್ಕು ದೇಶಗಳು ಲಿಂಗವ್ಯವಸ್ಥೆ ಸಮಾನತೆ ಮತ್ತು ಮಹಿಳಾ ಸಶಕ್ತತೆಯನ್ನು ರಾಷ್ಟ್ರೀಯ ನೀತಿಯನ್ನಾಗಿ ಮಾಡಿಕೊಂಡಿವೆ. ಕೆಲವು ಅಭಿವೃದ್ಧಿಶೀಲ ದೇಶಗಳೂ ಲಿಂ.ಸಂ.ಅ.ಸೂ. ಯಲ್ಲಿ ಉತ್ತಮ ಸ್ಥಾನವನ್ನು ಹೊಂದಿವೆ. ಉದಾ :- ಬಾರ್ಬಡೋಸ್ ೧೧ನೇಯ ಸ್ಥಾನ, ಹಾಂಗ್‌ಕಾಂಗ್ ೧೭, ಬಹಾಮಸ್ ೨೬, ಸಿಂಗಪೂರ್ ೨೮, ಉರುಗ್ವೇ ೩೨ ಮತ್ತು ಥೈಲೆಂಡ್ ೩೩ನೆಯ ಸ್ಥಾನಹೊಂದಿವೆ. ಈ ದೇಶಗಳು ಪುರುಷ ಮತ್ತು ಮಹಿಳೆಯರಿಬ್ಬರಲ್ಲೂ ಮೂಲಭೂತ ಸಾಮರ್ಥ್ಯವನ್ನು ಬೆಳೆಸುವಲ್ಲಿ ಯಶಸ್ವಿಯಾಗಿವೆ ಮತ್ತು ಲಿಂಗವ್ಯವಸ್ಥೆ ಅಂತರವನ್ನು ಕಡಿಮೆ ಮಾಡಿವೆ.

ಕೆಳಗಿನ ಐದು ಸ್ಥಾನಗಳನ್ನು ಹೊಂದಿರುವ ದೇಶಗಳೆಂದರೆ ಆಫ್‌ಘಾನಿಸ್ತಾನ ಸಿಯೆರಾಲಿಯೋನ್ ಮಾಲಿ, ನೈಜರ್ ಮತ್ತುಬರ್ಕಿನ ಫಾಸೋ. ಈ ದೇಶಗಳಲ್ಲಿ ಮಹಿಳೆಯರು ಎರಡುರೀತಿಯಲ್ಲಿ ವಂಚಿತರಾಗುತ್ತಿದ್ದಾರೆ. ಒಂದು ಒಬ್ಬ ಮಾನವ ಅಭಿವೃದ್ಧಿ ಸಾಧನೆಯೇ ಕಡಿಮೆಯಾಗಿರುವುದರಿಂದ ಮತ್ತೊಂದು, ಮಹಿಳೆಯರ ಸಾಧನೆ ಪುರುಷರ ಸಾಧನೆಗಿಂತ ಕಡಿಮೆಯಿರುವುದರಿಂದ ಇವೆರಡರಿಂದ ಈ ದೇಶಗಳ ಲಿಂ.ಸಂ.ಅ.ಸೂ.ಯ ಸ್ಥಾವ ಕೆಳಮಟ್ಟಕ್ಕೆ ಹೋಗಿದೆ.

ಲಿಂ.ಸಂ.ಅ.ಸೂ. ಯ ವಿಶ್ಲೇಷಣೆಯಿಂದ ಕೆಲವು ನಿರ್ಣಯಗಳನ್ನು ಕೈಗೊಳ್ಳಬಹುದು ಯಾವುದೇ ಸಮಾಜವು ಪುರುಷ ಮತ್ತು ಮಹಿಳೆಯರನ್ನು ಸಮಾನವಾಗಿ ನೋಡುವುದಿಲ್ಲ ಎಂದು ಲಿಂ.ಸಂ.ಅ.ಸೂ.ಯು ಸೂಚಿಸುತ್ತದೆ. ೧.೦ಯು ಗರಿಷ್ಠ ಮಾನವ ಸಾಮರ್ಥ್ಯ ವನ್ನು ಮತ್ತುಲಿಂಗಸಮಾನತೆಯನ್ನು ಪ್ರತಿಬಿಂಬಿಸುತ್ತದೆ. ಆದರೆ ಯಾವ ದೇಶವೂ ಈ

ಮಟ್ಟವನ್ನು ತಲುಪಿಲ್ಲ. ಲಿಂ.ಸಂ.ಅ.ಸೂ. ಯಲ್ಲಿ ಸ್ವೀಡನ್ ೦.೯೨ ಅಂಕವನ್ನು ಪಡೆದು ಮೊದಲನೆಯ ಸ್ಥಾನದಲ್ಲಿದೆ. ೧೩೦ ದೇಶಗಳ ಸರಾಸರಿ ಲಿಂ.ಸಂ.ಅ.ಸೂ. ಯ ಅಂಕ ೦.೬ ರಷ್ಟಿದೆ. ಆತಂಕದ ವಿಷಯವೆಂದರೆ ೪೫ಕ್ಕೂ ಹೆಚ್ಚಿನ ದೇಶಗಳಲ್ಲಿ ಲಿಂ.ಸಂ.ಅ.ಸೂ.ಯು ೦.೫ ಕ್ಕಿಂತ ಕಡಿಮೆಯಿದೆ. ಎಂದರೆ ಇಲ್ಲಿ ಮಹಿಳೆಯರು ಲಿಂಗವ್ಯವಸ್ಥೆ ತಾರತಮ್ಯ ಮತ್ತು ಕೆಳಮಟ್ಟದ ಮಾನವ ಸಾಮರ್ಥ್ಯ ಸಾಧನೆ ಹೀಗೆ ಎರಡು ರೀತಿಯಲ್ಲಿ ವಂಚಿತರಾಗಿದ್ದಾರೆ. ಕೇವಲ ೩೨ ದೇಶಗಳು ೦.೮ ಕ್ಕಿಂತ ಹೆಚ್ಚಿನ ಅಂಕವನ್ನು ಹೊಂದಿವೆ. ಲಿಂಗವ್ಯವಸ್ಥೆ ಸಮಾನತೆಯನ್ನು ಕೆಲವೇ ದೇಶಗಳಲ್ಲಿ ಸಾಧಿಸಲಾಗಿದೆ ಎಂಬುದನ್ನು ಈ ಅಂಕಿ ಅಂಶಗಳು ತೋರಿಸಿಕೊಡುತ್ತವೆ.

ಎರಡನೆಯದಾಗಿ ಲಿಂಗವ್ಯವಸ್ಥೆ ಸಮಾನತೆಯು ಸಮಾಜದ ಆದಾಯ ಮಟ್ಟವನ್ನು ಅವಲಂಬಿಸಿಲ್ಲ. ಲಿಂ.ಸಂ.ಅ. ಸೂಚಿಯನ್ನು ಸಮಾಜದ ಆದಾಯಮಟ್ಟಕ್ಕೆ ಹೋಲಿಸಿದರೆ ಆದಾಯವನ್ನು ಹೆಚ್ಚಿಸುವುದರ ಮೂಲಕ ಲಿಂಗವ್ಯವಸ್ಥೆ ಅಸಮಾನತೆ ಯನ್ನು ಹೋಗಲಾಡಿಸಲು ಸಾಧ್ಯವಿಲ್ಲ ಎಂದು ತಿಳಿದುಬರುತ್ತದೆ. ಚೀನಾ ದೇಶವು ಲಿಂ.ಸಂ. ಅ.ಸೂ.ಯಲ್ಲಿ ಸೌದಿಅರೇಬಿಯಕ್ಕಿಂತ ೧೦ ಸ್ಥಾನ ಮೇಲಿದೆ. ಆದರೆ ಅದರ ತಲಾ ಆದಾಯ ಸೌದಿಅರೇಬಿಯಾದ ಐದನೆಯ ಒಂದು ಭಾಗದಷ್ಟಿದೆ. ತಲಾ ಆದಾಯ ಕಡಿಮೆಯಿದ್ದರೂ ಥೈಲೆಂಡ್ ಲಿಂ.ಸಂ.ಅ.ಸೂ.ಯಲ್ಲಿ ಸ್ಪೇನ್ ದೇಶವನ್ನು ಹಿಂದೆ ಹಾಕುತ್ತದೆ. ಸಿರಿಯಾ ಮತ್ತು ಪೋಲೆಂಡ್ ತಲಾ ಆದಾಯ ಒಂದೇ ಸಮನಾಗಿದ್ದರೂ ಪೋಲ್ಯಾಂಡ್ ಲಿಂ.ಸಂ.ಅ.ಸೂ. ಯಲ್ಲಿ ಸ್ಪೇನ್‌ಗಿಂತ ೫೦ ಸ್ಥಾನ ಮೇಲಿದೆ. ಇದರಿಂದ ಲಿಂಗವ್ಯವಸ್ಥೆ ಸಮಾನತೆಯನ್ನು ಯಾವ ಆದಾಯ ಮಟ್ಟದಲ್ಲಾದರೂ ಸಾಧಿಸಬಹುದು. ಅದಕ್ಕೆ ಬೇಕಾಗಿರುವುದು ರಾಜಕೀಯ ಬದ್ಧತೆ, ವಿಪುಲ ಆದಾಯ ಅಥವಾ ಸಂಪತ್ತಲ್ಲ ಎಂದು ತಿಳಿದು ಬರುತ್ತದೆ. ಕಳೆದ ಎರಡು ದಶಕಗಳಿಂದ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಿದೆ. ಆದರೆ ಸಾಧಿತಬೇಕಾಗಿರುವುದು ಸಾಕಷ್ಟಿದೆ. ೧೯೭೦ ರಿಂದ ಎಲ್ಲಾ ದೇಶಗಳ ಲಿಂ.ಸಂ.ಅ.ಸೂ.ಯು ಉತ್ತಮಗೊಂಡಿದೆ. ಯಾವ ದೇಶವು ಲಿಂಗಸಮಾನತೆ ಯನ್ನು ಸಾಧಿಸುವಲ್ಲಿ ಹಿಂದೆ ಬಿದ್ದಿಲ್ಲ. ಆದರೆ ಪ್ರಗತಿಯ ಹಾದಿಯು ಏರುಪೇರಾಗಿರ ಬಹುದು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ೧೯೭೦ ರಿಂದ ೧೯೯೨ ರ ಅವಧಿಯಲ್ಲಿ ಸರಾಸರಿ ಲಿಂ.ಸಂ.ಅ.ಸೂ.ಯಲ್ಲಿ ಶೇಕಡ ೬೨ ರಷ್ಟು ಪ್ರಗತಿ ಉಂಟಾಗಿದೆ.

ಮಾನವ ಅಭಿವೃದ್ಧಿ ಸೂಚಿ ಮತ್ತು ಲಿಂಗವ್ಯವಸ್ಥೆ ಸಂಬಂಧಿ ಅಭಿವೃದ್ಧಿ ಸೂಚಿಗಳ ಹೋಲಿಕೆ (HDI and GDI)

ಮಾ.ಅ.ಸೂ.ಗಿಂತ ಲಿಂ.ಸಂ.ಅ.ಸೂ.ಯನ್ನು ಉತ್ತಮಗೊಳಿಸಿ ಕೊಂಡಿರುವಂತಹ ದೇಶಗಳಲ್ಲಿ ವೈವಿಧ್ಯ ರೀತಿಯ ದೇಶಗಳು ಸೇರಿಕೊಂಡಿವೆ. ನಾರ್ಡಿಕ್ ದೇಶಗಳೆಂದು ಕರೆಯಲ್ಪಡುವ ಡೆನ್ಮಾರ್ಕ್, ಫಿನ್‌ಲ್ಯಾಂಡ್, ಸ್ವೀಡನ್ ಮತ್ತು ನಾರ್ವೆ, ಪೂರ್ವ

ಯೂರೋಪಿನ ದೇಶಗಳಾದ ಪೋಲ್ಯಾಂಡ್, ಹಂಗೇರಿ, ಸ್ಲೋವೇಕಿಯ ಮತ್ತು ಅಭಿವೃದ್ಧಿಶೀಲ ದೇಶಗಳಾದ ಬಾರ್ಬಡೋಸ್, ಮಲೇಷ್ಯಾ, ಶ್ರೀಲಂಕಾ, ಥೈಲೆಂಡ್, ಜಮೈಕಾ ಮತ್ತು ಕ್ಯೂಬ - ಈ ಎಲ್ಲಾ ದೇಶಗಳು ಜನರ ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಗೆ ಹೆಚ್ಚಿನ ಬಂಡವಾಳ ಹೂಡಿವೆ. ಇಲ್ಲಿ ಯೋವುದೇ ರೀತಿಯ ಲಿಂಗ ತಾರತಮ್ಯ ತೋರಿಲ್ಲ. ಇದರಿಂದ ಈ ದೇಶಗಳು ಮಹಿಳೆಯರ ಸಾಮರ್ಥ್ಯವನ್ನು ಬೆಳೆಸುವಲ್ಲಿ ಯಶಸ್ವಿಯಾಗಿವೆ. ಅದಕ್ಕಿಂತ ಹೆಚ್ಚಾಗಿ ಈ ದೇಶಗಳಲ್ಲಿ ಆದಾಯ ಗಳಿಕೆಯಲ್ಲಿ ಲಿಂಗ ಸಮಾನತೆ ಸರಾಸರಿ ಮಟ್ಟಕ್ಕಿಂತ ಹೆಚ್ಚಾಗಿದೆ. ರಾಜಕೀಯ ತತ್ವಗಳು, ಸಂಸ್ಕೃತಿ, ಆದಾಯ ಮಟ್ಟ ಮತ್ತು ಅಭಿವೃದ್ಧಿ ಹಂತಗಳನ್ನು ಮೀರಿ ಲಿಂಗ ಸಮಾನತೆಯನ್ನು ಹೊಂದಲು ಪ್ರಯತ್ನಿಸಲಾಗಿದೆ.

ಮಾ.ಲಿ.ಸೂ.ಯ ಮಟ್ಟಕ್ಕೆ ಹೋಲಿಸಿದರೆ ಲಿಂ.ಸಂ.ಅ.ಸೂ.ಯ ಮಟ್ಟ ಕಡಿಮೆಯಾಗುತ್ತಿರುವ ದೇಶಗಳಲ್ಲಿ ಅರ್ಜೆಂಟೈನಾ, ಚಿಲಿ, ಕೋಸ್ಟರಿಕಾ, ಮತ್ತು ಕೆಲವು ಅರಬ್‌ದೇಶಗಳು ಸೇರಿವೆ. ಅರಬ್ ದೇಶಗಳಲ್ಲಿ ಮಾನವ ಸಾಮರ್ಥ್ಯಗಳಿಗಾಗಿ ಹೆಚ್ಚಿನ ಬಂಡವಾಳ ಹೂಡಬೇಕಾಗಿದೆ. ಕಳೆದ ಎರಡು ದಶಕಗಳಿಂದ ಅರಬ್‌ದೇಶಗಳು ಅತ್ಯಂತ ತೀವ್ರಗತಿಯಲ್ಲಿ ಪ್ರಗತಿಯನ್ನು ಸಾಧಿಸಿವೆ. ಅದರಲ್ಲೂ ಮಹಿಳಾ ಸಾಕ್ಷರತೆಯಲ್ಲಿ ತೀವ್ರ ಪ್ರಗತಿಯುಂಟಾಗಿದೆ.

ಕೆಲವು ಕೈಗಾರಿಕಾ ದೇಶಗಳು ಲಿಂ.ಸಂ.ಅ.ಸೂ.ಯಲ್ಲಿ ಕೆಳಗಿನ ಸ್ಥಾನಗಳನ್ನು ಹೊಂದಿರುವುದು ಕಂಡುಬರುತ್ತದೆ. ಕೆನಡಾ ಒಂದನೇ ಸ್ಥಾನದಿಂದ ಒಂಭತ್ತನೇ ಸ್ಥಾನ, ಲಕ್ಸೆಂಬರ್ಗ್ ಮೈನಸ್ ಹನ್ನೆರಡನೆಯ ಸ್ಥಾನ, ನೆದರ್‌ಲ್ಯಾಂಡ್ ಮೈನಸ್ ಹದಿನಾರನೇ ಸ್ಥಾನ ಮತ್ತುಸ್ಪೇನ್ ಮೈನಸ್ ಇಪ್ಪತ್ತಾರನೇ ಸ್ಥಾನವನ್ನು ಹೊಂದಿವೆ. ಈ ನಾಲ್ಕು ದೇಶಗಳಲ್ಲಿ ಶಿಕ್ಷಣ ಮತ್ತು ಆರೋಗ್ಯ ಸೂಚಿಗಳಲ್ಲಿ ಅಷ್ಟು ವ್ಯತ್ಯಾಸವಿರಲಿಲ್ಲ. ಇವು ಪುರುಷ ಮತ್ತು ಮಹಿಳೆಯರ ನಡುವೆ ಸಮಾನವಾಗಿವೆ ಆದರೆ ಆದಾಯಗಳಿಕೆ ಸೂಚಿಯಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಅದು ಮಹಿಳೆಯರ ಆದಾಯ ಮಟ್ಟ ಪುರುಷರ ಆದಾಯ ಮಟ್ಟಕ್ಕಿಂತ ಕಡಿಮೆಯಿದ್ದು, ದುಡಿಮೆಯಲ್ಲಿ ಅವರ ಭಾಗವಹಿಸುವಿಕೆ ಮತ್ತು ಕಡಿಮೆ ವೇತನವನ್ನು ಪ್ರತಿಬಿಂಬಿಸುತ್ತದೆ. ಆದಾಯ ಗಳಿಕೆಯಲ್ಲಿ ಸ್ತ್ರೀಯರ ಪಾಲು ಪುರುಷರ ಆದಾಯದಲ್ಲಿ ಶೇಕಡ ೨೩ ರಷ್ಟು ಸ್ಪೇನ್‌ನಲ್ಲಿ, ಶೇಕಡ ೩೦ ಲಕ್ಸ್ ಬರ್ಗ್, ಶೇಕಡ ೩೪ ನೆದರ್‌ಲ್ಯಾಂಡ್ ಮತ್ತು ಶೇಕಡ ೪೧ ಕೆನಡಾದಲ್ಲಿದೆ. ಆದರೆ ಸ್ವೀಡನ್ನಿನಲ್ಲಿ ಅದು ಶೇಕಡ ೭೧ ಇದ್ದು, ಲಿಂ.ಸಂ.ಅ.ಸೂ.ಯಲ್ಲಿ ಮೊದಲನೇ ಸ್ಥಾನ ಹೊಂದಿದೆ.

ಅನೇಕ ಅಭಿವೃದ್ಧಿ ದೇಶಗಳಲ್ಲಿ ಶಿಕ್ಷಣ, ಆರೋಗ್ಯ ಮತ್ತು ಪೌಷ್ಟಿಕತೆ ಸೂಚಿಗಳಲ್ಲಿ ಲಿಂಗ ಅಸಮಾನತೆ ಗಣನೀಯವಾಗಿ ಕಡಿಮೆಯಾಗಿದೆ. ಮುಂದಿನ ಪ್ರಯತ್ನ ಮಹಿಳೆಯರ ಆರ್ಥಿಕ ಮತ್ತುರಾಜಕೀಯ ಅವಕಾಶಗಳನ್ನು ಹೆಚ್ಚಿಸುವುದರ ಕಡೆ ಕೇಂದ್ರೀಕೃತವಾಗಿದೆ. ಹೀಗೆ ಒಂದುದೇಶದ ಲಿಂಗ ಅಸಮಾನತೆಯನ್ನು ಲಿಂ.ಸಂ.ಅ.ಸೂ.ಯನ್ನು ಮಾನವ

ಅಭಿವೃದ್ಧಿ ಸೂಚಿಯೊಂದಿಗೆ ಹೋಲಿಕೆ ಮಾಡುವುದರ ಮೂಲಕ ಅಳೆಯಬಹುದು.

ಕೆಲವು ದೇಶಗಳ ಲಿಂಗ ಅಸಮಾನತೆಯನ್ನು ಹೋಲಿಸಿದರೆ, ಉರ್ಗ್ವೆಯ ಲಿಂ.ಸಂ.ಅ.ಸೂ. ಯ ಸ್ಥಾನ ಮಾ.ಅಂ.ಸೂ. ಸ್ಥಾನಕ್ಕಿಂತ ಕಡಿಮೆಯಿದೆ (-೫) ಆದರೆ ಲ್ಯಾಟಿನ್ ಅಮೇರಿಕಾದ ದೇಶಗಳಿಗೆ ಹೋಲಿಸಿದರೆ ಅದರ ಲಿಂಗ ಸಮಾನತೆ ಉತ್ತಮ ವಾಗಿದೆ. ಲ್ಯಾಟಿನ್ ಅಮೇರಿಕಾದ ಅನೇಕ ದೇಶಗಳಲ್ಲಿ ಮಾ.ಅಂ.ಸೂ. ಗೆ ಹೋಲಿಸಿದರೆ ಲಿಂ.ಸಂ.ಅ.ಸೂ. ಯು ಶೇಕಡ ೧೦ ರಿಂದ ೨೦ ರಷ್ಟು ಇಳಿಮುಖವಾಗುತ್ತಿರುವುದು ಕಂಡುಬರುತ್ತದೆ. ಈ ದೇಶಗಳಲ್ಲಿ ಮೂಲ ಸಾಮರ್ಥ್ಯಗಳನ್ನು ಬೆಳೆಸುವುದರ ಜೊತೆಗೆ ಲಿಂಗ ಅಸಮಾನತೆಯು ಇನ್ನು ಸಮಸ್ಯೆಯಾಗಿಯೇ ಮುಂದುವರೆದಿದೆ. ಈ ಅಸಮಾನತೆ ಕ್ಯಾರಿಬಿಯನ್ ಪ್ರದೇಶದಲ್ಲಿ ಕಡಿಮೆಯಿದೆ. ಉದಾ:- ಬಹಮಾಸ್‌ನಲ್ಲಿ ಲಿಂ.ಸಂ.ಅ.ಸೂ. ಯು ಮಾ.ಲಿ.ಸೂ. ಗಿಂತ ಕೇವಲ ಶೇಕಡ ೭ ರಷ್ಟು ಕಡಿಮೆಯಿದೆ, ಕ್ಯೂಬದಲ್ಲಿ ಶೇಕಡ ೬ ಹಾಗೂ ಬರ್ಬಡೋಸ್‌ನಲ್ಲಿ ಶೇಕಡ ೨ ರಷ್ಟು ಕಡಿಮೆಯಿದೆ.

ಸಬ್ ಸಹರಾ ಆಫ್ರಿಕಾದ ದೇಶಗಳಲ್ಲಿ ಲಿಂಗ ಅಸಮಾನತೆ ಲ್ಯಾಟಿನ್ ಅಮೇರಿಕದ ದೇಶಗಳಿಗಿಂತ ಕಡಿಮೆಯಿದೆ. ಇಲ್ಲಿ ಮೂಲ ಮಾನವ ಸಾಮರ್ಥ್ಯಗಳ ಸಾಧನೆ ಪುರುಷ ಮತ್ತು ಮಹಿಳೆಯರಿಬ್ಬರಿಗೂ ಅತ್ಯಂತ ಕಡಿಮೆ ಮಟ್ಟದಲ್ಲಿದೆ. ಆಫ್ರಿಕಾದ ದೇಶಗಳಲ್ಲಿ ಲಿಂ.ಸಂ.ಅ.ಸೂ. ಇಳಿತದ ಶೇಕಡವಾರು ಪ್ರಮಾಣವು ೧೦ ಕ್ಕಿಂತ ಕಡಿಮೆಯಿದೆ ಬೋಸ್ವಾವಾನ ಶೇಕಡ ೯, ಜಿಂಬಾಬ್ವೆ ಮತ್ತು ಘಾನದ್ದು ಶೇಕಡ ೫ ರಷ್ಟು ಇಳಿತವಿದೆ. ಶೇಕಡ ೧೦ ಕ್ಕಿಂತ ಜಾಸ್ತಿ ಕಡಿಮೆಯಾಗುತ್ತಿರುವ ದೇಶಗಳೆಂದರೆ ಮಾರಿಷನ್, ಸೂಡನ್ ಛಾಡ್, ಮಾಲಿ, ಸಿಯಾರ ಲಿಯೋನೆ ಮತ್ತು ಮೌರಿಟಾನಿಯ.

ಏಷ್ಯಾದಲ್ಲಿ ಶೇಕಡ ೧೦ ಕ್ಕಿಂತ ಹೆಚ್ಚಿನ ಇಳಿತ ಇರುವ ದೇಶಗಳು ಕೆಲವೆ. ಅವುಗಳೆಂದರೆ ರಿಪಬ್ಲಿಕ್ ಆಫ್ ಕೊರಿಯಾ (೧೨%) ಪಾಕಿಸ್ತಾನ (೨೫%) ಮಲೇಷ್ಯಾ ಮತ್ತು ಇಂಡೋನೇಷಿಯಾದಲ್ಲಿ ಶೇಕಡ ೭ ರಷ್ಟಿದ್ದರೆ, ಹಾಂಗ್‌ಕಾಂಗ್ ಮತ್ತು ಸಿಂಗಪೂರ್ ನಲ್ಲಿ ಶೇಕಡ ೬ ರಷ್ಟು ಇಳಿತ ಕಂಡು ಬಂದಿದೆ.

ಅರಬ್ ದೇಶಗಳಲ್ಲಿ ಟ್ಯೂನಿಷ್ಯ ಮತ್ತು ಸ್ಥಾನದಲ್ಲಿದ್ದು ಅದರ ಲಿಂ.ಸಂ.ಅ.ಸೂ. ಯ ಮಾ.ಅ.ಸೂ. ಗಿಂತ ಶೇಕಡ ೧೦ ರಷ್ಟು ಕಡಿಮೆಯಿದೆ. ಅನೇಕ ಅರಬ್ ದೇಶಗಳಲ್ಲಿ ಶೇಕಡ ೨೦ ಕ್ಕಿಂತ ಹೆಚ್ಚು ಇಳಿತ ಕಂಡು ಬರುತ್ತದೆ. ಅರಬ್ ದೇಶಗಳು ಆರ್ಥಿಕವಾಗಿ ಎಷ್ಟೇ ಮುಂದುವರೆದಿದ್ದರೂ ಅವುಗಳ ಲಿಂಗ ಅಸಮಾನತೆ ಅಭಿವೃದ್ಧಿಶೀಲ ರಾಷ್ಟ್ರಗಳಿಗಿಂತ ಹೆಚ್ಚಾಗಿದೆ.

ಲಿಂಗವ್ಯವಸ್ಥೆ ಸಂಬಂಧಿ ಅಭಿವೃದ್ಧಿ ಸೂಚಿಯಲ್ಲಿನ ಬದಲಾವಣೆಗಳು

೭೯ ದೇಶಗಳಿಗೆ ೧೯೭೦ – ೧೯೯೨ ರವರೆಗೆ ಲಭ್ಯವಿರುವ ಮಾಹಿತಿ ಪ್ರಕಾರ ಲಿಂ.ಸಂ.ಅ.ಸೂ. ಯ ಮೌಲ್ಯ ಮತ್ತು ಸ್ಥಾನಗಳಲ್ಲಿ ಮಹತ್ತರ ಬದಲಾವಣೆಗಳು ಕಂಡು

ಬಂದಿವೆ. ಎಲ್ಲಾ ದೇಶಗಳ ಲಿಂ.ಸಂ.ಅ.ಸೂ.ಯು ಉತ್ತಮಗೊಂಡಿದೆ. ಆದರೆ ಬೇರೆ ಬೇರೆ ಮಟ್ಟದಲ್ಲಿವೆ. ಏಕೆಂದರೆ ಎಲ್ಲಾ ದೇಶಗಳ ಸರಾಸರಿ ಸಾಧನೆ ಹಾಗೂ ಲಿಂಗ ಅಸಮಾನತೆಗಳಲ್ಲಿ ವ್ಯತ್ಯಾಸಗಳಿವೆ. ೧೯೭೦ರಲ್ಲಿ ಅಮೆರಿಕವು ಮೊದಲ ಸ್ಥಾನದಲ್ಲಿದ್ದರೆ ೧೯೯೨ ರಲ್ಲಿ ಅದು ೫ನೇ ಸ್ಥಾನ ಪಡೆದುಕೊಂಡಿತು. ಕೆನಡಾ ಎರಡನೇ ಸ್ಥಾನದಿಂದ ಒಂಬತ್ತನೇ ಸ್ಥಾನಕ್ಕೆ ಹೋಯಿತು. ಬೆಲ್ಜಿಯಂ, ಸ್ಪೇನ್, ನೆದರ್‌ಲ್ಯಾಂಡ್ ಮತ್ತು ಲಕ್ಸೆಂಬರ್ಗ್ ದೇಶಗಳೂ ಕೂಡ ಸ್ಥಾನಗಳ ಮಟ್ಟದಲ್ಲಿ ಹಿಂದೆ ಬಿದ್ದಿವೆ. ಆದರೆ ಸ್ವೀಡನ್ ಮೂರರಿಂದ ಮೊದಲನೆಯ ಸ್ಥಾನಕ್ಕೆ ಏರಿದರೆ, ಫಿನ್‌ಲ್ಯಾಂಡ್ ಮತ್ತುನಾರ್ವೆ ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದು ಮೇಲೇರಿವೆ. ಇತರ ಅಭಿವೃದ್ಧಿ ದೇಶಗಳಿಗೆ ಹೋಲಿಸಿದರೆ ನಾರ್ಡಿಕ್ ದೇಶಗಳು ಮಹತ್ತರ ಸಾಧನೆಗಳನ್ನು ಸಾಧಿಸಿವೆ ಮತ್ತು ಮೂಲ ಸಾಮರ್ಥ್ಯಗಳಲ್ಲಿ ಲಿಂಗಸಮಾನತೆಯನ್ನು ಸಾಧಿಸಿವೆ. ಶಿಕ್ಷಣ ಕ್ಷೇತ್ರದಲ್ಲಿ ಹೊಂದಿರುವ ಪ್ರಗತಿಯೇ ಇದಕ್ಕೆ ಕಾರಣ. ೧೯೭೦ ರಲ್ಲಿ ಸ್ವೀಡನ್, ಫಿನ್ಲೆಂಡ್ ಮತ್ತು ನಾರ್ವೆ ದೇಶಗಳಲ್ಲಿ ಸರಾಸರಿ ದಾಖಲಾತಿ ಪ್ರಮಾಣ ಶೇಕಡ ೬೦-೭೦ ರಷ್ಟಿತ್ತು. ಪುರುಷ ಮತ್ತು ಮಹಿಳೆಯರ ನಡುವೆ ಅಷ್ಟು ವ್ಯತ್ಯಾಸವಿರಲಿಲ್ಲ. ೧೯೯೨ರ ಹೊತ್ತಿಗೆ ಅವುಗಳ ದಾಖಲಾತಿ ಪ್ರಮಾಣ ಪುರುಷ ಮತ್ತು ಮಹಿಳೆಯರಿಬ್ಬರಿಗೂ ಗಣನೀಯವಾಗಿ ಹೆಚ್ಚಾಯಿತು. ಆದರೆ ಮಹಿಳೆಯರ ದಾಖಲಾತಿ ಪುರುಷರಿಗಿಂತ ಹೆಚ್ಚಾಯಿತು. ನಾರ್ವೆಯಲ್ಲಿ ಮಹಿಳೆಯರ ದಾಖಲಾತಿ ಪ್ರಮಾಣ ಶೇಕಡ ೬೬ ರಿಂದ ೮೯ಕ್ಕೆ, ಪುರುಷರದು ಶೇಕಡ ೬೬ ರಿಂದ ೮೬ಕ್ಕೆ ಏರಿತು. ಫಿನ್‌ಲ್ಯಾಂಡ್‌ನಲ್ಲಿ ೧೯೯೨ರಲ್ಲಿ ಮಹಿಳೆಯರಿಗೆ ಶೇಕಡ ೧೦೦ ರಷ್ಟು ದಾಖಲಾತಿ ಇತ್ತು. ಆದರೆ ಪುರುಷರದು ಶೇಕಡ ೯೧ರಷ್ಟಿತ್ತು. ೧೯೭೦ರಲ್ಲಿ ಮಹಿಳೆಯರದು ಶೇಕಡ ೬೪ಯಿದ್ದರೆ ಪುರುಷರದು ಶೇಕಡ ೬೩ ರಷ್ಟಿತ್ತು. ೧೯೭೦ರಿಂದ ೧೯೯೨ರ ಅವಧಿಯಲ್ಲಿ ಫಿನ್‌ಲ್ಯಾಂಡಿನ ಲಿಂ.ಸಂ.ಅ.ಸೂ.ಯ ಶೇಕಡ ೧೭ ರಷ್ಟು ಹೆಚ್ಚಾಗಲು ಈ ದಾಖಲಾತಿ ಪ್ರಮಾಣದ ಏರಿಕೆಯೇ ಮುಖ್ಯ ಕಾರಣವಾಯಿತು.

ಈ ಮೂರು ದೇಶಗಳಲ್ಲಿ ಮಹಿಳೆಯರ ಪ್ರಗತಿ ಅಗಾಧ ಪ್ರಮಾಣದಲ್ಲಿ ಆಗಿರುವುದಕ್ಕೆ ಮತ್ತೊಂದು ಕಾರಣವೆಂದರೆ ಪುರುಷ ಮತ್ತು ಮಹಿಳೆಯರ ಆದಾಯ ಗಳಿಕೆ ನಡುವಿನ ಅಂತರ ಕಡಿಮೆಯಿದ್ದುದು. ಪುರುಷರ ವೇತನದೊಂದಿಗೆ ಮಹಿಳೆಯರ ವೇತನವೂ ಹೆಚ್ಚಾಗಿ ಒಟ್ಟು ಶ್ರಮದಲ್ಲಿ ಮಹಿಳೆಯರ ಪಾಲು ಕೂಡ ಹೆಚ್ಚಾಯಿತು. ಇದು ನಾರ್ವೆಯ ಅಂಕಿ ಅಂಶಗಳಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ. ಅಲ್ಲಿಯ ಆದಾಯ ಗಳಿಕೆಯಲ್ಲಿ ಮಹಿಳೆಯರ ಪಾಲು ಶೇಕಡ ೨೪ ರಿಂದ ೩೮ಕ್ಕೆ ಏರಿತು. ಸ್ವೀಡನ್‌ನಲ್ಲಿ ಅದು ಶೇಕಡ ೩೧ ರಿಂದ ೪೨ಕ್ಕೆ ಏರಿತು. ಈ ಮೂರು ದೇಶಗಳಲ್ಲಿ ೧೯೭೦ ರಿಂದ ೧೯೯೨ರ ಅವಧಿಯಲ್ಲಿ ಆದಾಯ ಗಳಿಕೆಯಲ್ಲಿನ ಲಿಂಗವ್ಯವಸ್ಥೆ ಅಂತರ (gender disparity) ಕಡಿಮೆಯಾದದ್ದು ಮತ್ತು ಮಹಿಳೆಯರ ಸರಾಸರಿ ಆದಾಯ ಮಟ್ಟ ಏರಿದ್ದು

ಲಿಂ. ಸಂ. ಅ. ಸೂ. ಯಲ್ಲಿ ಅವುಗಳ ಸ್ಥಾನ ಶೇಕಡ ೭೦-೮೦ ರಷ್ಟು ಹೆಚ್ಚಾಗಲು ಕಾರಣವಾದವು.

ಕೆಲವು ಅಭಿವೃದ್ಧಿಶೀಲ ದೇಶಗಳು ತಮ್ಮ ಮೇಲಿನ ಸ್ಥಾನಗಳನ್ನು ಕಳೆದುಕೊಂಡು ಕೆಳಗಿನ ಸ್ಥಾನಗಳನ್ನು ಹೊಂದಿದವು. ಉದಾ :- ಗಯಾನ, ಜಮೈಕ, ಮ್ಯಾನ್‌ಮಾರ್, ಪರುಗ್ವೆ ಮತ್ತು ಲಿಸೋತೋ. ಆದರೆ ಇತರ ಕೆಲವು ಅಭಿವೃದ್ಧಿಶೀಲ ದೇಶಗಳಾದ ಬೋಟ್ಸ್‌ವಾನಾ, ಥೈಲೆಂಡ್, ಮಲೇಷ್ಯ, ಟ್ಯೂನಿಷ್ಯ, ಟರ್ಕಿ ಮತ್ತು ಬಾರ್ಬಡೋಸ್ ಮೇಲಿನ ಸ್ಥಾನಗಳನ್ನು ಹೊಂದಿವೆ. ಬೋಟ್ಸ್‌ವಾನ ಮತ್ತು ಥೈಲೆಂಡ್ ೧೭ ಸ್ಥಾನ ಮೇಲೇರಿದರೆ ಮಲೇಷ್ಯ ಮತ್ತು ಟ್ಯೂನಿಷ್ಯ ೧೬ ಮತ್ತು ಟರ್ಕಿ ೧೫ ಸ್ಥಾನಗಳಷ್ಟು ಮೇಲೇರಿವೆ.

ಕುವೈತ್ ಮತ್ತು ಈಜಿಪ್ಟ್ ದೇಶಗಳನ್ನು ಹೊರತುಪಡಿಸಿ ಉಳಿದ ಅರಬ್ ದೇಶಗಳು ಮೇಲಿನ ಸ್ಥಾನಗಳಿಗೆ ಏರಿವೆ. ಸೌದಿ ಅರೇಬಿಯ ೧೦ ಸ್ಥಾನ, ಯುನೈಟೆಡ್ ಅರಬ್ ಎಮಿರೈಟ್ಸ್ ೮ ಮತ್ತು ಬಹ್ರೈನ್ ೬ ಸ್ಥಾನಗಳಷ್ಟು ಮೇಲೇರಿವೆ ಎಲ್ಲಾ ಅರಬ್ ದೇಶಗಳು ಲಿಂ.ಸಂ.ಅ.ಸೂ.ಯಲ್ಲಿ ಶೇಕಡ ೭೦ - ೧೩೦ ರಷ್ಟು ಪ್ರಗತಿಯನ್ನು ಸಾಧಿಸಿವೆ. ಶಿಕ್ಷಣ ಕ್ಷೇತ್ರದ ಪ್ರಗತಿಯೇ ಇದಕ್ಕೆ ಮುಖ್ಯ ಕಾರಣ. ೧೯೭೦ರಲ್ಲಿ ಯುನೈಟೆಡ್ ಅರಬ್ ಏಮಿರೈಟ್ಸ್‌ನಲ್ಲಿ ಮಹಿಳೆಯರ ಸಾಕ್ಷರತೆಯ ದರ ಶೇಕಡ ೯ ಹಾಗೂಪುರುಷರದು ಶೇಕಡ ೨೭ ಇತ್ತು. ೧೯೯೨ ರಲ್ಲಿ ಮಹಿಳೆ ಮತ್ತು ಪುರುಷರ ಸಾಕ್ಷರತೆ ಪ್ರಮಾಣ ಶೇಕಡ ೭೭ರಷ್ಟಾಯಿತು. ೧೯೭೦ರಲ್ಲಿ ಮಹಿಳೆ ಮತ್ತು ಪುರುಷರ ಸಾಕ್ಷರತೆ ಪ್ರಮಾಣ ಶೇಕಡ ೫೦ ಯಿದ್ದರೆ ಪುರುಷರದು ಶೇಕಡ ೬೩ ಇತ್ತು. ೧೯೯೨ರ ಹೊತ್ತಿಗೆ ಮಹಿಳೆಯರದು ಶೇಕಡ ೮೬ ರಷ್ಟು ಹೆಚ್ಚಾದರೆ ಪುರುಷರ ದಾಖಲಾತಿ ಪ್ರಮಾಣ ಶೇಕಡ ೮೧ ರಷ್ಟು ಹೆಚ್ಚಾಯಿತು. ಹೀಗೆ ಶಿಕ್ಷಣ ಕ್ಷೇತ್ರದಲ್ಲಿನ ಪ್ರಗತಿಯ ಜೊತೆಗೆ ಲಿಂಗ ಸಮಾನತೆಯ ಸಾಧನೆಯೂ ಸೇರಿ ಬಹ್ರೈನ್‌ನಿನ ಲಿಂ.ಸಂ.ಅ.ಸೂ.ಯ ಸ್ಥಾನ ಶೇಕಡ ४३ ರಷ್ಟು ಹೆಚ್ಚಾದರೆ ಯುನೈಟೆಡ್ ಅರಬ್ ಎಮಿರೈಟ್ಸ್‌ನ ಸ್ಥಾನ ಶೇಕಡ ೫೭ ರಷ್ಟು ಹೆಚ್ಚಾಯಿತು.

ಆದರೆ ಅರಬ್ ದೇಶಗಳಲ್ಲಿ ಮಹಿಳೆಯರಿಗೆ ಆರ್ಥಿಕ ಅವಕಾಶಗಳು ಹೆಚ್ಚಾಗಲಿಲ್ಲ. ೧೯೭೦ರಲ್ಲಿ ಯುನೈಟೆಡ್ ಅರಬ್‌ಎಮಿರೈಟ್ಸ್‌ನಲ್ಲಿ ಆದಾಯಗಳಿಕೆಯಲ್ಲಿ ಮಹಿಳೆಯರ ಪಾಲು ಶೇಕಡ ೪ ಇತ್ತು. ೧೯೯೨ರಲ್ಲಿ ಅದು ಶೇಕಡ ೭ ರಷ್ಟಾಯಿತಷ್ಟೆ. ಬಹ್ರೈನ್ ಶೇಕಡ ೫ ಇದ್ದುದು ಶೇಕಡ ೧೨ ಆಯಿತು. ಸೌದಿ ಅರೇಬಿಯಾದಲ್ಲಿ ಶೇಕಡ ೫ ರಿಂದ ಶೇಕಡ ೭ಕ್ಕೆ ಹೆಚ್ಚಾಯಿತಷ್ಟೆ. ಅರಬ್‌ದೇಶಗಳಲ್ಲಿ ಟ್ಯೂನಿಷ್ಯದಲ್ಲಿ ಮಾತ್ರ ಮಹಿಳೆಯರ ಪಾಲು ಹೆಚ್ಚಾಗಿರುವುದು ಕಂಡುಬರುತ್ತದೆ. ಅದು ಎಂಟನೆಯ ಒಂದು ಭಾಗ ಇದ್ದದು ನಾಲ್ಕನೇ ಭಾಗದಷ್ಟಾಯಿತು.

ಈ ದೇಶಗಳಲ್ಲಿ ಆದಾಯ ಹೆಚ್ಚಳಕ್ಕಿಂತ ಶಿಕ್ಷಣ ಪ್ರಗತಿ ಮತ್ತು ಜೀವ

ನಿರೀಕ್ಷಣಾವಧಿಗಳು ಲಿಂ.ಸಂ.ಅ.ಸೂ.ಯ ಸ್ಥಾನ ಏರಿಕೆಯ ಮೇಲೆ ಪ್ರಭಾವಬೀರಿವೆ. ಸೌದಿ ಅರೇಬಿಯಾದಲ್ಲಿ ಆದಾಯದ ಬದಲಾವಣೆಯು ಲಿಂ.ಸಂ.ಅ.ಸೂ.ಯಲ್ಲಿ ಶೇಕಡ ೨೪ರಷ್ಟು ಏರಿಕೆಯನ್ನು ತಂದರೆ ಶಿಕ್ಷಣದ ಬದಲಾವಣೆ ಶೇಕಡ ೪೩ ಮತ್ತು ಜೀವ ನಿರೀಕ್ಷಣಾವಧಿ ಶೇಕಡ ೩೩ರಷ್ಟು ಏರಿಕೆಯನ್ನು ತಂದಿವೆ. ಇದೇ ಚಿತ್ರಣ ಏಷ್ಯಾದ ಮಲೇಷ್ಯಾ, ಥೈಲೆಂಡ್‌ಗಳಲ್ಲೂ ಕಂಡುಬರುತ್ತದೆ. ಈ ದೇಶಗಳ ಲಿಂ.ಸಂ.ಅ.ಸೂ.ಯ ಸ್ಥಾನ ಗಣನೀಯವಾಗಿ ಏರಿದೆ. ಇಲ್ಲಿ ಮಹಿಳೆಯರು ಆದಾಯಗಳಿಕೆಗಿಂತ ಶಿಕ್ಷಣ ಕ್ಷೇತ್ರದಲ್ಲಿ ಸಮಾನತೆಯನ್ನು ಕಂಡುಕೊಂಡಿದ್ದಾರೆ. ೧೯೭೦ರಲ್ಲಿಮಲೇಷ್ಯಾದ ಮಹಿಳೆಯರ ದಾಖಲಾತಿ ಪ್ರಮಾಣ ಶೇಕಡ ೪೫, ಪುರುಷರದು ಶೇಕಡ ೫೪ ಯಿದ್ದುದು ೧೯೯೨ರ ಹೊತ್ತಿಗೆ ಅದು ಮಹಿಳೆಯರಿಗೆ ಶೇಕಡ ೬೧ ಮತ್ತು ಪುರುಷರಿಗೆ ಶೇಕಡ ೬೦ ರಷ್ಟಾಯಿತು. ಥೈಲೆಂಡ್‌ನಲ್ಲಿ ೧೯೭೦ರಲ್ಲಿಮಹಿಳೆಯರ ಸಾಕ್ಷರತೆ ಪ್ರಮಾಣ ಶೇಕಡ ೭೦ ಮತ್ತು ಪುರುಷರದು ಶೇಕಡ ೮೭ ಯಿದ್ದುದು ೧೯೯೨ರ ಹೊತ್ತಿಗೆ ಅದು ಶೇಕಡ ೯೧ ಮತ್ತು ೯೬ ಕ್ಕೆ ಏರಿತು.

ಇದಕ್ಕೆ ವಿರುದ್ಧವಾಗಿ ಥೈಲೆಂಡ್ ದೇಶವು ಹೆಚ್ಚು ಕೈಗಾರೀಕರಣಗೊಂಡಂತೆ ಬಿಟ್ಟು ದುಡಿಮೆ ಶ್ರಮದಲ್ಲಿ ಮಹಿಳೆಯರ ಪಾಲು ಕಡಿಮೆಯಾಗುತ್ತಾ ಬಂದಿತು. ಮಲೇಷಿಯದಲ್ಲಿ ೨೨ ವರ್ಷಗಳಲ್ಲಿ ಮಹಿಳೆಯರ ಪಾಲು ಶೇಕಡ ೩೦ ರಿಂದ ೩೬ರಷ್ಟು ಹೆಚ್ಚಾಯಿತು. ದೇಶದ ಸರಾಸರಿ ಆದಾಯ ಹೆಚ್ಚಾದ್ದರಿಂದ ಮಹಿಳೆಯರ ಆದಾಯ ಹೆಚ್ಚಾಯಿತೇ ಹೊರತು ಪುರುಷರೊಂದಿಗೆ ಸಮಾನತೆಯನ್ನು ಪಡೆದುಕೊಳ್ಳುವುದರ ಮೂಲಕ ಹೆಚ್ಚಾಗಲಿಲ್ಲ.

ಮ್ಯಾನ್‌ಮಾರ್ ದೇಶವು ಮಲೇಷ್ಯ ಮತ್ತುಥೈಲೆಂಡ್‌ಗಿಂತ ಭಿನ್ನವಾದ ಸ್ಥಿತಿಯನ್ನು ಹೊಂದಿದೆ ಅದು ೧೫ ಸ್ಥಾನ ಹಿಂದಕ್ಕೆ ಹೋಯಿತು. ಅದರ ಆರ್ಥಿಕ ಬೆಳವಣಿಗೆಯೇ ನಿಧಾನಗತಿಯಲ್ಲಿ ಆಗುತ್ತಿರುವುದೇ ಮುಖ್ಯ ಕಾರಣ. ಅಲ್ಲಿಯ ಒಟ್ಟು ದುಡಿಮೆ ಶ್ರಮದಲ್ಲಿ ಮಹಿಳೆಯರ ಪಾಲು ಶೇಕಡ ೩೮ ರಿಂದ ೩೬ಕ್ಕೆ ಇಳಿಯಿತು. ಆದಾಯದ ಬದಲಾವಣೆ ಮತ್ತು ಲಿಂಗವ್ಯವಸ್ಥೆ ಅಂತರ ಇವೆರಡೂ ಸೇರಿ ಆ ದೇಶದ ಲಿಂ.ಸಂ.ಅ.ಸೂ. ಸ್ಥಾನವನ್ನು ೨೦ ರಷ್ಟು ಏರುವಂತೆ ಮಾಡಿವೆ. ಶಿಕ್ಷಣದ ಪ್ರಗತಿ ಮತ್ತು ಜೀವ ನಿರೀಕ್ಷಣಾವಧಿ ಎರಡೂ ಸೇರಿ ಶೇಕಡ ೪೦ರಷ್ಟು ಬದಲಾವಣೆ ತಂದಿವೆ.

ದಕ್ಷಿಣ ಏಷ್ಯಾದ ದೇಶಗಳ ಲಿಂ.ಸಂ.ಅ.ಸೂ.ಯ ಸ್ಥಾನಗಳಲ್ಲಿ ಸ್ವಲ್ಪ ಮಟ್ಟಿಗೆ ಬದಲಾವಣೆ ಕಂಡುಬಂದಿದೆ. ಶ್ರೀಲಂಕಾ ಏಳು ಸ್ಥಾನ ಕೆಳಗಿಳಿದಿದೆ. ಈ ದೇಶದಲ್ಲಿ ಮಹಿಳೆಯರು ಸಾಕ್ಷರತೆ ಮತ್ತು ಒಟ್ಟು ದಾಖಲಾತಿಯಲ್ಲಿ ಪುರುಷರಿಗಿಂತ ಹೆಚ್ಚು ಸಾಧಿಸಿದ್ದಾರೆ. ಆದರೆ ಕಳೆದೆರಡು ದಶಕಗಳಲ್ಲಿ ಅವರದು ದುಡಿಮೆಯ ಪ್ರಮಾಣ ಶೇಕಡ ೨೫ ರಿಂದ ೨೭ ರಷ್ಟು ಹೆಚ್ಚಾಗಿದೆಯಷ್ಟೆ.

ಬಾರ್ಬಡೋಸ್ ಮತ್ತು ಬ್ರೆಜಿಲ್ ದೇಶಗಳನ್ನು ಹೊರತುಪಡಿಸಿ ಉಳಿದೆಲ್ಲ

ಲ್ಯಾಟಿನ್ ಅಮೆರಿಕಾ ಮತ್ತು ಕೆರಿಬಿಯಸ್ ದೇಶಗಳು ಲಿಂ.ಸಂ.ಅ.ಸೂಯಲ್ಲಿ ತಮ್ಮ ಮೊದಲಿನ ಸ್ಥಾನಗಳನ್ನು ಕಳೆದುಕೊಂಡಿವೆ. ಗಯಾನ ೨೦ ಸ್ಥಾನ ಹಿಂದೆ ಹೋದರೆ ಎಲ್ ಸಲ್ವೇಡರ್ ಒಂಬತ್ತು ಗ್ವಾಟೇಮಾಲ ಎಂಟು ಮತ್ತು ಚಿಲಿ ಆರು ಸ್ಥಾನ ಹಿಂದಕ್ಕೆ ಹೋಗಿದೆ. ಅಭಿವೃದ್ಧಿಶೀಲ ದೇಶವಾದ ಚಿಲಿಯು ೧೯೭೦ರಲ್ಲಿ ಅಧಿಕ ಸಾಕ್ಷರತೆ ದರ ಮತ್ತು ಒಟ್ಟು ದಾಖಲಾತಿ ಪ್ರಮಾಣ ಹಾಗೂ ಶಿಕ್ಷಣದಲ್ಲಿ ಕಡಿಮೆ ಲಿಂಗ ಅಸಮಾನತೆಯನ್ನು ಹೊಂದಿತ್ತು. ೧೯೯೨ರಲ್ಲಿ ಈ ಎಲ್ಲಾ ದರಗಳು ಹೆಚ್ಚಾದರೂ ಪುರುಷರು ಮತ್ತು ಮಹಿಳೆಯರ ನಡುವಿನ ಅಂತರ ಮುಂದುವರೆಯಿತು. ಆದಾಯ ಗಳಿಕೆಯಲ್ಲಿನ ಅಂತರ ಕಡಿಮೆಯಾಗಲಿಲ್ಲ. ೧೯೭೦ರಲ್ಲಿ ಆದಾಯ ಗಳಿಕೆಯಲ್ಲಿ ಮಹಿಳೆಯರ ಪಾಲು ಶೇಕಡ ೧೭ಯಿದ್ದುದು ೧೯೯೨ ರಲ್ಲಿ ಕೇವಲ ಶೇಕಡ ೨೦ ರಷ್ಟಾಯಿತು.

೭೯ ದೇಶಗಳಲ್ಲಿ ಅತ್ಯಂತ ಕೆಳ ಸ್ಥಾನಕ್ಕೆ ಹೋದ ದೇಶವೆಂದರೆ ಗಯಾನ. ಇಲ್ಲಿ ಪುರುಷರಿಗೆ ಹೋಲಿಸಿದರೆ ಮಹಿಳೆಯರ ಸಾಧನೆ ತುಂಬ ಕಡಿಮೆ. ಶಿಕ್ಷಣ ಮತ್ತು ಜೀವ ನಿರೀಕ್ಷಣಾವಧಿಯಲ್ಲಿ ನಿಧಾನವಾಗಿ ಬೆಳೆಯಿತಷ್ಟೆ ಅಲ್ಲ ಆದಾಯ ಗಳಿಕೆ ಮತ್ತು ದುಡಿಮೆ ಪ್ರಮಾಣದಲ್ಲೂ ಅದರ ಪಾಲು ಗಣನೀಯವಾಗಿ ಹೆಚ್ಚಾಗಲಿಲ್ಲ.

ಸಬ್ ಸಹಾರ ಆಫ್ರಿಕಾದ ದೇಶಗಳು ಲಿಂ.ಸ.ಅ.ಸೂ.ಯಲ್ಲಿ ಅತ್ಯಂತ ಕೆಳಮಟ್ಟದ ಸ್ಥಾನವನ್ನು ಹೊಂದಿವೆ. ಬೋಟ್ಸ್‌ವಾನದ ಸ್ಥಾನ ಮಾತ್ರ ಮೇಲೇರಿತು. ಅದರ ಸರಾಸರಿ ಆದಾಯ ಬೆಳವಣಿಗೆ ಹೆಚ್ಚಾದ್ದರಿಂದ ಲಿಂ.ಸ.ಅ.ಸೂ.ಯಲ್ಲಿ ಸ್ಥಾನದಲ್ಲಿ ಶೇಕಡ ೫೮ರಷ್ಟು ಕಂಡು ಬಂದಿತು.ಆದರೆ ಶ್ರಮದಲ್ಲಿ ಮಹಿಳೆಯರ ಪಾಲು ಶೇಕಡ ೪೫ರಿಂದ ೩೫ಕ್ಕೆ ಇಳಿಯಿತು. ಬೋಟ್ಸ್ವಾನದಲ್ಲಿ ಮಹಿಳೆ ಮತ್ತು ಪುರುಷರಿಬ್ಬರೂ ಉನ್ನತ ಶಿಕ್ಷಣವನ್ನು ಹೊಂದುತ್ತಿದ್ದಾರೆ. ಆದರೆ ಅವರಿಬ್ಬರ ನಡುವಿನ ಸಾಕ್ಷರತೆಯ ಅಂತರ ಹೆಚ್ಚಾಗುತ್ತಿದೆ. ಆದುದರಿಂದ ಬೋಟ್ಸ್ವಾನದ ಲಿಂ.ಸ.ಅ.ಸೂ. ಸ್ಥಾನದ ಏರಿಕೆಗೆ ಕಾರಣವಾದ ಅಂಶಗಳು ಲಿಂಗ ಸಮಾನತೆಯ ಸಾಧನೆಯನ್ನು ಸೂಚಿಸುವುದಿಲ್ಲ

ಲಿಂಗವ್ಯವಸ್ಥೆ ಸಶಕ್ತತೆ ಮಾಪನ (Gender Empowerment Measure)

ಲಿಂಗ ವ್ಯವಸ್ಥೆ ಸಶಕ್ತತೆ ಮಾಪನವು (ಲಿಂ.ಸ.ಮಾ) ಆರ್ಥಿಕ, ರಾಜಕೀಯ ಮತ್ತು ವೃತ್ತಿ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಅಳೆಯುತ್ತದೆ. ಇದು ಲಿಂ.ಸಂ.ಅ. ಸೂಗಿಂತ ಭಿನ್ನವಾಗಿದೆ. ಲಿಂ.ಸಂ.ಅ.ಸೂ.ಯು ಮೂಲಭೂತ ಸಾಮರ್ಥ್ಯ ಮತ್ತು ಜೀವನ ಮಟ್ಟವನ್ನು ಕುರಿತು ಹೇಳುತ್ತದೆ. ಮಹಿಳೆಯರ ಭಾಗವಹಿಸುವಿಕೆಯು ವಿವಿಧ ರೂಪಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಕಂಡುಬಂದರೂ, ಲಿಂ.ಸ.ಮಾ. ವು ಕೆಲವೇ ಪರಿವರ್ತಕಗಳಿಗೆ (Variables) ತನ್ನ ಅಳೆಯುವಿಕೆಯನ್ನು ಕೇಂದ್ರೀಕರಿಸುತ್ತದೆ. ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಇದು ಮೂರು ಪರಿವರ್ತಕಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಅವು

೧) ಆರ್ಥಿಕ ಸಂಪನ್ಮೂಲದ ಮೇಲೆ ಅಧಿಕಾರ ಮತ್ತು ನಿಯಂತ್ರಣ ತಂದು ಕೊಡುವ ಆದಾಯ ಅದೇ ತಲಾದಾಯ ಅಮೆರಿಕಾದ ಡಾಲರ್‌ಗಳಲ್ಲಿ.

೨) ವೃತ್ತಿ ಅವಕಾಶಗಳನ್ನು ಪಡೆಯುವುದು ಮತ್ತು ಆರ್ಥಿಕ ನಿರ್ಣಯಗಳನ್ನು ಕೈಗೊಳ್ಳುವುದರಲ್ಲಿ ಭಾಗವಹಿಸುವುದು. ಇಲ್ಲಿ ಉದ್ಯೋಗ, ವೃತ್ತಿಪರ, ತಾಂತ್ರಿಕ ಮತ್ತು ಆಡಳಿತಾತ್ಮಕ ಹಾಗೂ ವ್ಯವಸ್ಥಾಪಕ (Managerial) ಎಂದು ನಾಲ್ಕು ವಿಭಾಗಗಳನ್ನು ಮಾಡಲಾಗಿದೆ.

೩) ರಾಜಕೀಯ ಅವಕಾಶಗಳನ್ನು ಪಡೆಯುವುದು ಮತ್ತು ರಾಜಕೀಯ ನಿರ್ಣಯಗಳನ್ನು ಕೈಗೊಳ್ಳುವುದರಲ್ಲಿ ಭಾಗವಹಿಸುವುದು. ಇದರಲ್ಲಿ ಸಂಸತ್ತಿನಲ್ಲಿ ಮಹಿಳೆಯರು ಎಷ್ಟು ಮಂದಿ ಇದ್ದಾರೆ ಎಂಬುದನ್ನು ತೆಗೆದುಕೊಳ್ಳಲಾಗುತ್ತದೆ.

ಲಿಂ.ಸಂ.ಅ.ಸೂ. ಮತ್ತು ಲಿಂ.ಸ.ಮಾ. ಇವೆರೆಡು ಆದಾಯವನ್ನು ಬೇರೆ ಬೇರೆ ರೀತಿಯಲ್ಲಿ ತೆಗೆದುಕೊಳ್ಳುತ್ತವೆ. ಲಿ.ಸ.ಮಾ.ದಲ್ಲಿ ಆದಾಯವು ದೀರ್ಘಾವಧಿ ಜೀವನ, ಸಾಕ್ಷರತೆ ಮತ್ತು ಬಡತನದಿಂದ ಮುಕ್ತಿ ಮುಂತಾದುವುಗಳ ಮೂಲಕ ಮಾನವ ಅಭಿವೃದ್ಧಿಗೆ ನೀಡುವ ಕೊಡುಗೆಯ ರೂಪದಲ್ಲಿ ತೆಗೆದುಕೊಳ್ಳುವುದಿಲ್ಲ. ಬದಲಿಗೆ ಆದಾಯವನ್ನು ಆರ್ಥಿಕ ಅಧಿಕಾರದ ಆಧಾರವನ್ನಾಗಿ ಪರಿಗಣಿಸಿ ಆದಾಯ ಗಳಿಸುವವರ ಆಯ್ಕೆಯ ಅವಕಾಶಗಳನ್ನು ಹೆಚ್ಚಿಸುವ ಅರ್ಥದಲ್ಲಿ ಬಳಸುತ್ತದೆ.

ವೃತ್ತಿ ಕ್ಷೇತ್ರದಲ್ಲಿ ಅವಕಾಶಗಳನ್ನು ಪಡೆಯುವುದು ಮತ್ತು ಆರ್ಥಿಕ ನಿರ್ಣಯಗಳನ್ನು ಕೈಗೊಳ್ಳುವುದರಲ್ಲಿನ ಭಾಗವಹಿಸುವಿಕೆ ಇವೆರಡನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಉದ್ಯೋಗಗಳನ್ನು ವೃತ್ತಿಪರ, ಆಡಳಿತಾತ್ಮಕ, ವ್ಯವಸ್ಥಾಪಕ ಮತ್ತು ತಾಂತ್ರಿಕ ಎಂದು ನಾಲ್ಕು ವಿಧಗಳಾಗಿ ವಿಂಗಡಿಸಿ ಇವುಗಳಲ್ಲಿ 'ಮಹಿಳೆಯರ ಭಾಗವಹಿಸುವಿಕೆಯನ್ನು ಪರಿವರ್ತಕವನ್ನಾಗಿ ಬಳಸಲಾಗಿದೆ. ಆಡಳಿತಾತ್ಮಕ ಮತ್ತು ವ್ಯವಸ್ಥಾಪಕ ಉದ್ಯೋಗಗಳು ನಿರ್ಣಯ ಕೈಗೊಳ್ಳುವಂತಿದ್ದರೆ, ವೃತ್ತಿಪರ ಮತ್ತು ತಾಂತ್ರಿಕ ಉದ್ಯೋಗಗಳು ಜೀವನ ವೃತ್ತಿಯ ಬೆಳವಣಿಗೆಯನ್ನು ಪ್ರತಿನಿಧಿಸುವಂತಾಗಿರುತ್ತದೆ.

ಲಿಂಗ ಸಮಾನತೆಯಲ್ಲಿ ಸಾಧಿಸಿರುವ ನಾರ್ಡಿಕ್ ದೇಶಗಳಲ್ಲಿ ವೃತ್ತಿಪರ ಮತ್ತು ತಾಂತ್ರಿಕ ಜೀವನ ವೃತ್ತಿ ಕ್ಷೇತ್ರಗಳಲ್ಲಿ ಮಹಿಳೆಯರ ಪಾಲು ಶೇಕಡ ೬೦ಕ್ಕಿಂತ ಹೆಚ್ಚಾಗಿದೆ. ಅಭಿವೃದ್ಧಿ ಶೀಲ ದೇಶಗಳಲ್ಲಿ ಬೋಟ್ಸ್‌ವಾನ, ಫಿಲಿಫೀನ್ಸ್ ಮತ್ತು ಉರುಗ್ವೇ ಯಲ್ಲೂ ಅವರ ಪಾಲು ಅಷ್ಟೇ ಇದೆ. ಆಡಳಿತಾತ್ಮಕ ಮತ್ತು ವ್ಯವಸ್ಥಾಪಕ ಉದ್ಯೋಗಗಳಲ್ಲಿ ಮಹಿಳೆಯರ ಪಾಲು ಅತ್ಯಂತ ಕಡಿಮೆಯಿರುತ್ತದೆ. ಹಂಗರಿಯಲ್ಲಿ ಮಾತ್ರ ಅದು ಭಿನ್ನವಾಗಿದೆ. ಅಲ್ಲಿ ಶೇಕಡ ೫೮ರಷ್ಟು ಇಂತಹ ಉದ್ಯೋಗಸ್ಥಾನಗಳನ್ನು ಹೊಂದಿದ್ದಾರೆ. ಆಸ್ಟ್ರೇಲಿಯಾ, ಕೆನಡಾ ಮತ್ತು ಅಮೆರಿಕಾದಲ್ಲಿ ಮಹಿಳೆಯರು ಶೇಕಡ ೪೦ರಷ್ಟು ಆಡಳಿತಾತ್ಮಕ ಮತ್ತು ವ್ಯವಸ್ಥಾಪಕ ಹುದ್ದೆಗಳನ್ನು ಹೊಂದಿದ್ದಾರೆ. ಬೇರೆ ದೇಶಗಳಲ್ಲಿ ಅದು ಇನ್ನೂ ಕಡಿಮೆಯಿದೆ. ಅಭಿವೃದ್ಧಿ ಶೀಲ ದೇಶಗಳಲ್ಲಿ ಇಂತಹ ಉದ್ಯೋಗಗಳಲ್ಲಿ

ಮಹಿಳೆಯರ ಸಂಖ್ಯೆ ಶೇಕಡ ೧೦ಕ್ಕಿಂತ ಕಡಿಮೆಯಿದೆ. ಅಭಿವೃದ್ಧಿ ಹೊಂದಿದ ದೇಶಗಳಾದ ಫ್ರಾನ್ಸ್, ಜಪಾನ್, ಲಕ್ಸೆನ್‌ಬರ್ಗ್ ಮತ್ತು ಸ್ಪೇನ್‌ದೇಶದಲ್ಲೂ ಇಂತಹ ಉದ್ಯೋಗ ಗಳಲ್ಲಿ ಅವರ ಸಂಖ್ಯೆ ಶೇಕಡ ೧೦ಕ್ಕಿಂತ ಕಡಿಮೆ ಇದೆ ಎಂದರೆ ಅನೇಕ ದೇಶಗಳಲ್ಲಿ ಮಹಿಳೆಯರಿಗೆ ಅಧಿಕ ವೇತನ ಸಿಗುವಂತಹ ಕೆಲಸಗಳು ಇನ್ನೂ ಸಿಗುತ್ತಿಲ್ಲ.

ಮೂರನೆಯ ಪರಿವರ್ತಕ ರಾಜಕೀಯ ಅವಕಾಶಗಳ ಪಡೆಯುವಿಕೆ ಮತ್ತು ರಾಜಕೀಯ ನಿರ್ಧಾರಗಳನ್ನು ಕೈಗೊಳ್ಳುವಲ್ಲಿನ ಭಾಗವಹಿಸುವಿಕೆ ಇಲ್ಲಿ ದೊರೆಯುವ ಅಂಕಿಅಂಶಗಳು ಆರ್ಥಿಕ ಕ್ಷೇತ್ರಕ್ಕಿಂತ ಆತಂಕಕಾರಿಯಾಗಿವೆ. ಸಂಸತ್ತಿನ ಸದಸ್ಯರಾಗಿರಲು ಯಾವುದೇ ತರಬೇತಿಯ ಅಗತ್ಯವಿಲ್ಲ. ಸಾರ್ವಜನಿಕ ಭಾಷಣ ಮಾಡುವುದು, ಮತದಾರರ ಅಭಿಪ್ರಾಯವನ್ನು ಪ್ರತಿನಿಧಿಸುವ ಸಾಮರ್ಥ್ಯ, ಜನರ ವಿಶ್ವಾಸವನ್ನು ಗೆಲ್ಲುವ ಕಳೆ ಇವು ಯಾವುದೂ ಪುರುಷರಿಗೆ ಸೀಮಿತವಾದುದಲ್ಲ. ಆದರೂ ರಾಜಕೀಯ ಇನ್ನೂ ಮಹಿಳೆಯರು ಪ್ರವೇಶಿಸಲಾಗದಂತಹ ಕ್ಷೇತ್ರವಾಗಿ ಉಳಿದಿದೆ.

ಸ್ಥಳೀಯ ಸಂಸ್ಥೆಗಳು, ಮಂಡಳಿಗಳು, ಪುರಸಭೆ, ನಗರಸಭೆ, ಮುಂತಾದುವುಗಳಲ್ಲಿ ಮಹಿಳೆಯರ ಸಂಖ್ಯೆ ಎಷ್ಟಿದೆ ಎಂಬುದು ಮಹಿಳೆಯರ ಭಾಗವಹಿಸುವಿಕೆಯನ್ನು ಸೂಚಿಸುತ್ತದೆ. ಆದರೆ ಅನೇಕ ದೇಶಗಳಲ್ಲಿ ಇದರ ಬಗ್ಗೆ ಮಾಹಿತಿಯೇ ಲಭ್ಯ ವಿರುವುದಿಲ್ಲ. ಆದುದರಿಂದ ಲಿಂ. ಸ. ಮಾ. ದಲ್ಲಿ ಸಂಸತ್ತಿನಲ್ಲಿ, ಕೆಳಮನೆ ಮತ್ತು ಮೇಲ್ಮನೆ ಎರಡರಲ್ಲೂ ಮಹಿಳೆಯರ ಪ್ರಾತಿನಿಧ್ಯ ಎಷ್ಟಿದೆ ಎಂಬುದನ್ನು ಒಂದು ಪರಿವರ್ತಕವನ್ನಾಗಿ ತೆಗೆದುಕೊಳ್ಳುತ್ತದೆ.

ನಾರ್ವೆ ಮತ್ತು ಫಿನ್ಲೆಂಡಿನ ಸಂಸತ್ತಿನಲ್ಲಿ ಮಹಿಳೆಯರು ಅತ್ಯಧಿಕ ಪ್ರಾತಿನಿಧ್ಯವನ್ನು ಹೊಂದಿದ್ದಾರೆ. ಪುರುಷರ ಐದನೇ ನಾಲ್ಕರಷ್ಟು ಸ್ಥಾನಗಳನ್ನು ಹೊಂದಿದ್ದಾರೆ. ಸ್ವೀಡನ್ ಮತ್ತು ಡೆನ್ಮಾರ್ಕ್‌ನಲ್ಲಿ ಮೂರನೆ ಒಂದು ಭಾಗದಷ್ಟು ಸ್ಥಾನದಲ್ಲಿ ಮಹಿಳೆಯರಿದ್ದಾರೆ.

ನಾರ್ಡಿಕ್ ದೇಶಗಳನ್ನು ಹೊರತುಪಡಿಸಿದರೆ ಉಳಿದೆಡೆ ಸಂಸತ್ತಿನಲ್ಲಿ ಪುರುಷ ಮತ್ತು ಮಹಿಳೆಯರ ಸಂಖ್ಯೆಯಲ್ಲಿನ ಅಂತರ ಹೆಚ್ಚಾಗುತ್ತ ಹೋಗುತ್ತಿದೆ. ಥೈಲೆಂಡ್‌ನ ಸಂಸತ್ತಿನಲ್ಲಿ ಶೇಕಡ ೯೬.೪ ಪುರಷರಿದ್ದರೆ ಕೇವಲ ಶೇಕಡ ೩.೬ ಮಹಿಳೆಯರಿದ್ದಾರೆ. ರಿಪಬ್ಲಿಕ್ ಆಫ್ ಕೊರಿಯಾದಲ್ಲಿ ಶೇಕಡ ೯೯ ಪುರುಷರು ಹಾಗೂ ಶೇಕಡ ೧ ರಷ್ಟು ಮಹಿಳೆಯರಿದ್ದಾರೆ. ಮಹಿಳೆಯರೇ ಇಲ್ಲದಿರುವ ದೇಶಗಳಿಗಿಂತ ವಾಸಿ ಎಂದು ಹೇಳಬಹುದು. ಜಗತ್ತಿನಾದ್ಯಾಂತ ಸಂಸತ್ತಿನಲ್ಲಿ ಮಹಿಳೆಯರ ಸರಾಸರಿ ಪ್ರಾತಿನಿಧ್ಯ ಶೇಕಡ ೧೦ರಷ್ಟಿದೆ.

ಈ ಮೂರು ಆಯಾಮಗಳನ್ನು ಸಮಾನವಾಗಿ ಬಳಸಿಕೊಂಡು ಲಿಂ.ಸ.ಮಾ. ವನ್ನು ನಿರ್ಮಿಸಲಾಗಿದೆ. ಇದು ನಿರ್ದೇಶಿತ ಸೂಚಿಯಲ್ಲ ಮತ್ತು ಸಾರ್ವತ್ರಿಕ ಸಾಂಸ್ಕೃತಿಕ ನಿಯಮವನ್ನು ಹುಟ್ಟುಹಾಕುವುದಿಲ್ಲ. ರಾಜಕೀಯ ರಂಗದಲ್ಲಿ ಒಂದು ನಿರ್ದಿಷ್ಟ ಪ್ರಮಾಣದ ಪ್ರಾತಿನಿಧ್ಯವನ್ನು ಸಾಧಿಸದಿರುವುದೂ ಅಲ್ಲ. ಲಿಂ.ಸ.ಮಾ. ಮು

ಮಹಿಳೆಯರಿಗೆ ಎಷ್ಟರ ಮಟ್ಟಿಗೆ ಆಯ್ಕೆಯ ಅವಕಾಶ ಸಿಗುತ್ತಿಲ್ಲ. ಯಾಕೆ ಸಿಗುತ್ತಿಲ್ಲ, ಎಂದು ಸೂಚಿಸಿ ಪುರುಷರೊಂದಿಗೆ ಅವರಿಗೂ ಸಮಾನ ಆಯ್ಕೆಯ ಅವಕಾಶವನ್ನು ನೀಡಬೇಕೆಂಬ ಅಂಶಕ್ಕೆ ಹೆಚ್ಚು ಒತ್ತನ್ನೂ ನೀಡುತ್ತದೆ. ಅದು ಆರ್ಥಿಕ ಮತ್ತು ರಾಜಕೀಯ ಭಾಗವಹಿಸುವಿಕೆಯ ಫಲಿತಾಂಶಗಳನ್ನು ಪರಿಶೀಲಿಸುತ್ತದೆ. ಈ ಫಲಿತಾಂಶಗಳು ಮಹಿಳೆಯರು ಈ ರಂಗಗಳನ್ನು ಪ್ರವೇಶಿಸಲು ಇರುವ ಅಡ್ಡಿ ಆತಂಕಗಳ ಕಾರಣದಿಂದ ಬಂದಿರಬಹುದು ಅಥವಾ ಪುರುಷ ಮತ್ತು ಮಹಿಳೆಯರು ಸಮಾಜದಲ್ಲಿ ತಮ್ಮ ಪಾತ್ರವೇನು ಎಂಬುದನ್ನು ತಾವೇ ಆಯ್ಕೆ ಮಾಡಿಕೊಂಡಿರುವುದರಿಂದ ಬಂದಿರಬಹುದು. ಇದು ಆಯಾ ಸಮಾಜದ ಜನರು ಕೈಗೊಳ್ಳುವ ನಿರ್ಧಾರವನ್ನು ಅವಲಂಬಿಸಿರುತ್ತದೆ.

ಲಿಂಗವ್ಯವಸ್ಥೆ , ಸಶಕ್ತತೆ ಮಾಪನದ ಮೌಲ್ಯ ಮತ್ತು ಸ್ಥಾನೀಕರಣ (ranking)

ಆದಾಯ, ವೃತ್ತಿ ಮತ್ತು ರಾಜಕೀಯ ಭಾಗವಹಿಸುವಿಕೆ ಈ ಮೂರು ಆಯಾಮಗಳ ಆಧಾರದಿಂದ ಲಿಂ. ಸ. ಮಾ. ವನ್ನು ೧೧೬ ದೇಶಗಳಿಗೆ ಅಂದಾಜು ಮಾಡಲಾಗಿದೆ. ಮೊದಲ ನಾಲ್ಕು ಸ್ಥಾನಗಳನ್ನು ಕ್ರಮವಾಗಿ ಸ್ವೀಡನ್, ನಾರ್ವೆ, ಫಿನ್ಲೆಂಡ್ ಮತ್ತು ಡೆನ್ಮಾರ್ಕ್ ದೇಶಗಳು ಪಡೆದಿವೆ. ಈ ನಾರ್ಡಿಕ್ ದೇಶಗಳು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಉದಾರವಾಗಿ ಬಂಡವಾಳ ಹೂಡಿ ಮಹಿಳೆಯರ ಮೂಲ ಸಾಮರ್ಥ್ಯವನ್ನು ಬಲಗೊಳಿಸುವುದರಲ್ಲಷ್ಟೇ ಅಲ್ಲ ಅರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲೂ ಭಾಗವಹಿಸಲು ಅವರಿಗೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಿಕೊಟ್ಟಿವೆ. ಮಹಿಳೆಯರ ಪ್ರಾತಿನಿಧ್ಯ ಶೇಕಡ ೩೦ರಷ್ಟು ದಾಟಿರುವ ದೇಶಗಳೆಂದರೆ ನಾರ್ಡಿಕ್ ದೇಶಗಳು.

ಲಿಂ.ಸ.ಮಾ. ವ ಸ್ಥಾನೀಕರಣ ಸೂಚಿಸುವುದೇನೆಂದರೆ ಅಭಿವೃದ್ಧಿ ಹೊಂದಿದ ದೇಶಗಳಿಗಿಂತ ಅಭಿವೃದ್ಧಿಶೀಲ ದೇಶಗಳು ರಾಜಕೀಯ, ಆರ್ಥಿಕ ಮತ್ತು ವೃತ್ತಿಕ್ಷೇತ್ರಗಳಲ್ಲಿ ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಯಶಸ್ವಿಯಾಗಿವೆ. ಉದಾ:- ಬಾರ್ಬಡೋಸ್, ಕ್ಯೂಬ, ಬಹಮಾಸ್, ಟ್ರಿನಿಡ್ಯಾಡ್, ಚೀನಾ, ಗಯಾನ, ಫಿಲಿಫಿನ್ಸ್ ಮತ್ತು ಕೊಲಂಬಿಯ ಮೊದಲಾದ ಅಭಿವೃದ್ಧಿಶೀಲ ದೇಶಗಳು ಲಿಂ.ಸ.ಮಾ.ದಲ್ಲಿ ಅಧಿಕ ಮೌಲ್ಯ ಹೊಂದಿದ್ದು ಸ್ಥಾನಗಳಲ್ಲಿ ಮುಂದಿವೆ. ಟ್ರಿನಿಡ್ಯಾಡ್ ಮತ್ತು ಟೊಬ್ಯಾಗೋ ದೇಶಗಳ ಲಿಂ. ಸ. ಮಾ. ದ ಮೌಲ್ಯವು ೦. ೫೩೩ ಇದ್ದು ಅದು ಸ್ವಿಟ್ಜರ್‌ಲ್ಯಾಂಡ್, ಹಂಗೇರಿ, ಇಂಗ್ಲೆಂಡ್, ಜಪಾನ್, ಸ್ಪೇನ್ ಮತ್ತು ಫ್ರಾನ್ಸ್ ದೇಶಗಳಿಗಿಂತ ಹೆಚ್ಚಾಗಿದೆ. ಫ್ರಾನ್ಸಿನ ಲಿಂ.ಸ.ಮಾ ದ ಮೌಲ್ಯ ೦.೪೩೩ ಇದೆ.

ಕೇವಲ ಒಂಬತ್ತು ದೇಶಗಳಿಗೆ ಲಿಂ.ಸ.ಮಾ. ವು ೦-೬ಂಕ್ಕಿಂತ ಮೇಲಿದೆ. ಇಪ್ಪತ್ನಾಲ್ಕು ದೇಶಗಳಿಗೆ ೦.೨೫ಕ್ಕಿಂತ ಕಡಿಮೆಯಿದೆ. ಕಡಿಮೆ ಲಿಂ.ಸ.ಮಾ.ದ ಮೌಲ್ಯವೂ ತೋರಿಸವುದೇನೆಂದರೆ ಅನೇಕ ದೇಶಗಳು ಜನರ ಮೂಲ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಸಾಕಷ್ಟು ಸಾಧನೆ ಮಾಡಿದ್ದರೂ ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆಯರಿಗೆ

ಅವಕಾಶಗಳನ್ನು ಹೆಚ್ಚಿಸಿ ಲಿಂಗ ಸಮಾನತೆಯನ್ನು ಸಾಧಿಸುವತ್ತ ಇನ್ನೂ ಹೆಚ್ಚಿನ ಪ್ರಯತ್ನ ಮಾಡಬೇಕಾಗಿದೆ.

ಲಿಂ.ಸಂ.ಅ.ಸೂ. ಗೆ ಹೋಲಿಸಿದರೆ ಹೆಚ್ಚಿನ ದೇಶಗಳು ಅತ್ಯಂತ ಕಡಿಮೆ ಲಿಂ.ಸ.ಮಾ ಮೌಲ್ಯವನ್ನು ಹೊಂದಿವೆ. ಎರಡು ಬೇರೆ ಬೇರೆ ಪರಿವರ್ತಕಗಳನ್ನು ಬಳಸುವುದರಿಂದ ಅವನ್ನು ಹೋಲಿಸುವುದು ಸಾಧ್ಯವಿಲ್ಲ. ಆದರೂ ಅವುಗಳ ನಡುವಿನ ಮೌಲ್ಯದ ವ್ಯತ್ಯಾಸವನ್ನು ಕಾಣಬಹುದು. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಲಿಂ.ಸಂ.ಅ.ಸೂ. ಮತ್ತು ಲಿಂ.ಸ.ಮಾ. ಇವೆರಡರ ನಡುವೆ ಅಗಾಧವಾದ ವ್ಯತ್ಯಾಸ ಹೊಂದಿರುವ ದೇಶಗಳೆಂದರೆ ಫ್ರಾನ್ಸ್, ಜಪಾನ್, ಗ್ರೀಸ್, ಇಂಗ್ಲೆಂಡ್ ಐರ್ಲೆಂಡ್ ಮತ್ತು ಸ್ಪೇನ್. ಉದಾ:- ಗ್ರೀಸ್‌ನಲ್ಲಿ ಲಿಂ.ಸಂ.ಅ.ಸೂ.ಯು ೦.೮೨೫ ಇದ್ದರೆ ಲಿಂ.ಸ.ಮಾ.ವೂ ೦.೩೪೩ ಇದೆ. ಗ್ರೀಸ್ ದೇಶದಲ್ಲಿ ಮಹಿಳೆಯರು ಸಂಸತ್ತಿನಲ್ಲಿ ಶೇಕಡ ೭ರಷ್ಟು ಸ್ಥಾನಗಳನ್ನು, ಆಡಳಿತಾತ್ಮಕ ಮತ್ತು ವ್ಯವಸ್ಥಾಪಕ ಉದ್ಯೋಗಗಳಲ್ಲಿ ಶೇಕಡ ೧೦ ಹಾಗೂ ಆದಾಯ ಗಳಿಕೆಯಲ್ಲಿ ಶೇಕಡ ೨೨ ರಷ್ಟನ್ನು ಪಡೆಯುತ್ತಿದ್ದಾರೆ.

ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ದಿ ರಿಪಬ್ಲಿಕ್ ಆಫ್ ಕೊರಿಯ, ಟರ್ಕಿ, ಕುವೈತ್, ಯು.ಎ.ಇ. ಮತ್ತು ಮಾರಿಷಸ್ ದೇಶಗಳು ಅತ್ಯಂತ ಕಡಿಮೆ ಲಿಂ.ಸ.ಮಾ. ಮೌಲ್ಯವನ್ನು ಹೊಂದಿವೆ. ಟರ್ಕಿಯ ಲಿಂ.ಸ.ಮಾ. ಕೇವಲ ೦.೨೩೬ ಇದೆ. ಇದಕ್ಕೆ ಮುಖ್ಯಕಾರಣ ಮಹಿಳೆಯರು ಶೇಕಡ ೨ ರಷ್ಟು ಸಂಸತ್ತಿನ ಸ್ಥಾನಗಳನ್ನು ಮತ್ತು ಶೇಕಡ ೪ರಷ್ಟು ಆಡಳಿತಾತ್ಮಕ ಮತ್ತು ವ್ಯವಸ್ಥಾಪಕ ಉದ್ಯೋಗಗಳನ್ನು ಹೊಂದಿದ್ದಾರೆ.

ಲಿಂ.ಸ.ಮಾ ಸ್ಥಾನವನ್ನು ಆದಾಯದ ಸ್ಥಾನದೊಂದಿಗೆ ಹೋಲಿಸಿದರೆ ಕೆಲವೊಂದು ಸಮಸ್ಯಾ ಕ್ಷೇತ್ರಗಳನ್ನು ಗುರುತಿಸಬಹುದು. ಆದಾಯ ವೊಂದರ ಆಧಾರದ ಮೇಲೆ ಹೇಳುವುದಾದರೆ ಶ್ರೀಮಂತ ದೇಶಗಳೆಲ್ಲವೂ ಲಿಂ.ಸ.ಮಾ. ದಲ್ಲಿ ಮೊದಲ ಸ್ಥಾನಗಳನ್ನು ಹೊಂದಿಬೇಕಾಗಿತ್ತು. ಹೊಂದಿಲ್ಲವೆಂದರೆ ಲಿಂಗಸಮಾನತೆಯಲ್ಲಿ ಅವು ಸಾಕಷ್ಟು ಸಾಧಿಸಬೇಕಾಗಿದೆ ಎಂದು ಅರ್ಥ. ಹೆಚ್ಚು ಜಿ.ಡಿ.ಪಿ ಯನ್ನು ಹೊಂದಿರುವ ಅರಬ್ ದೇಶಗಳು ಲಿಂ.ಸ.ಮಾದಲ್ಲಿ ಕೆಳಗಿನ ಸ್ಥಾನಗಳನ್ನು ಹೊಂದಿವೆ. ಸಂಸತ್ತು ಮತ್ತು ವೃತ್ತಿ ಕ್ಷೇತ್ರಗಳಲ್ಲಿ ಮಹಿಳೆಯರು ಅತ್ಯಂತ ಕಡಿಮೆ ಪ್ರಾತಿನಿಧ್ಯ ಹೊಂದಿರುವುದೇ ಇದಕ್ಕೆ ಮುಖ್ಯ ಕಾರಣ. ಉದಾ:- ಕುವೈತ್ ಜಿ.ಡಿ.ಪಿ. ನಲ್ಲಿ ೩೨ನೇ ಸ್ಥಾನದಲ್ಲಿದ್ದರೆ ಲಿಂ.ಸ.ಮಾ.ದಲ್ಲಿ ೯೩ನೇ ಸ್ಥಾನ ಹೊಂದಿದೆ.

ಏಷ್ಯಾದ ಕೆಲವು ದೇಶಗಳು ಜಿ.ಡಿ.ಪಿ. ನಲ್ಲಿ ಉನ್ನತ ಸ್ಥಾನ ಹೊಂದಿದ್ದರೂ ಲಿಂ.ಸ.ಮಾ.ದಲ್ಲಿ ಕೆಳಗಿನ ಸ್ಥಾನಗಳನ್ನು ಹೊಂದಿವೆ. ಉದಾ :- ರಿಪಬ್ಲಿಕ್ ಆಫ್ ಕೊರಿಯಾ ಜಿ.ಡಿ.ಪಿ. ನಲ್ಲಿ ೨೮ನೇ ಸ್ಥಾನದಲ್ಲಿದ್ದರೆ ಲಿಂ.ಸ.ಮಾದಲ್ಲಿ ೯೦ನೇ ಸ್ಥಾನ ಹೊಂದಿದೆ. ಈ ಎಲ್ಲಾ ದೇಶಗಳ ಮುಖ್ಯ ಸಮಸ್ಯೆಯೆಂದರೆ ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಕಡಿಮೆಯಿರುವುದು.

ಕೆಲವು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಲಿಂ.ಸಂ.ಅ.ಸೂ. ಗಿಂತ ಲಿಂ.ಸ. ಮಾ.ದಲ್ಲಿ ಉತ್ತಮ ಸ್ಥಾನದಲ್ಲಿವೆ. ಚೀನಾ, ಕ್ಯೂಬ, ಕೋಸ್ಟರಿಕಾ ದೇಶಗಳು ಜಪಾನ್, ಫ್ರಾನ್ಸ್ ದೇಶಗಳಿಗಿಂತ ಲಿಂ.ಸ.ಮಾ. ದಲ್ಲಿ ಮುಂದಿದೆ. ಈ ದೇಶಗಳಲ್ಲಿ ಮಹಿಳೆಯರಿಗೆ ಆರ್ಥಿಕ ಹಾಗೂ ರಾಜಕೀಯ ಅವಕಾಶಗಳು ಹೆಚ್ಚಿರುವುದೇ ಇದಕ್ಕೆ ಮುಖ್ಯ ಕಾರಣ.

ಪ್ರಪಂಚದ ಎಲ್ಲಾ ದೇಶಗಳು ಲಿಂಗಸಮಾನತೆಯನ್ನು ಸಾಧಿಸುವ ಹಾದಿಯಲ್ಲಿ ಇನ್ನು ಸಾಕಷ್ಟು ದೂರ ಸಾಗಬೇಕಾಗಿದೆ. ಅಭಿವೃದ್ಧಿ ಹೊಂದಿದ ದೇಶಗಳು ಮಹಿಳೆಯರಿಗೆ ಆರ್ಥಿಕ ಮತ್ತು ರಾಜಕೀಯ ಭಾಗವಹಿಸುವಿಕೆಯಲ್ಲಿ ಇನ್ನೂ ಸಮಾನತೆಯನ್ನು ನೀಡಿಲ್ಲ. ಈ ಎಲ್ಲಾ ವಿಶ್ಲೇಷಣೆಯ ನೀತಿ ಸಂದೇಶವೆಂದರೆ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳಲ್ಲೆಲ್ಲ ಮಹಿಳೆಯರನ್ನು ಇನ್ನೂ ಆರ್ಥಿಕ ಮತ್ತುರಾಜಕೀಯ ಕ್ಷೇತ್ರಗಳ ಆವರಣವನ್ನು ಪ್ರವೇಶಿಸಲು ಬಿಟ್ಟಿಲ್ಲ. ಪ್ರಪಂಚಾದ್ಯಂತ ನಿಜವಾದ ಅಧಿಕಾರ ಅಥವಾ ನಿರ್ಧಾರ ಕೈಗೊಳ್ಳುವ ಸ್ಥಾನವನ್ನು ಪಡೆಯುವಲ್ಲಿ ಮಹಿಳೆಯರಿನ್ನೂ ಅಲ್ಪಸಂಖ್ಯಾತರಾಗಿಯೇ ಉಳಿದಿದ್ದಾರೆ.

ಮಹಿಳೆ ಮತ್ತು ಮಾಧ್ಯಮ

– ಡಾ. ಎಲ್. ಮಂಜುಳಾಕ್ಷಿ

ಇಪ್ಪತ್ತೊಂದನೆಯ ಶತಮಾನವನ್ನು ಸಮೂಹ ಸಂಪರ್ಕ ಮಾಧ್ಯಮಗಳ ಯುಗ ಅಥವಾ ಮಾಹಿತಿ ಯುಗ ಎಂದು ಕರೆಯುತ್ತಾರೆ. ಮಾಹಿತಿ ಪ್ರಸಾರಕ್ಕೆ ಮಾಧ್ಯಮವೇ ಕೇಂದ್ರ ಬಿಂದು. ಇಂದು ಸಂಪರ್ಕ ಕ್ರಾಂತಿಯು ಕೈಗಾರಿಕಾ ಕ್ರಾಂತಿಯಷ್ಟೇ ಗಾಢವಾಗಿ ನಮ್ಮ ಮೇಲೆ ಪ್ರಭಾವ ಬೀರಿದೆ. ಹಳೆಯ ಮಾಧ್ಯಮಗಳಿಗೆ ಹೊಸ ರೂಪ ದೊರೆತಿದೆ; ಹೊಸ ಮಾಧ್ಯಮಗಳು ಹುಟ್ಟಿಕೊಂಡಿವೆ. ಸಂಪರ್ಕ ಮಾಧ್ಯಮಗಳಾದ ಪತ್ರಿಕೆ, ರೇಡಿಯೋ, ಚಲನಚಿತ್ರ, ದೂರದರ್ಶನ, ವೀಡಿಯೊ ಮತ್ತು ಗಣಕಯಂತ್ರಗಳು ಇತ್ತೀಚೆಗೆ ಅಗಾಧವಾಗಿ ಬೆಳೆದು ತಮ್ಮ ಕ್ಷೇತ್ರವನ್ನು ವಿಸ್ತರಿಸಿವೆ. ಇವು ಒಂದು ಸಂದೇಶವನ್ನು ಇಡೀ ಮನುಕುಲಕ್ಕೆ ತಲುಪಿಸುವ ತಾಂತ್ರಿಕ ಸಾಧನಗಳಾಗಿ ಮಾತ್ರ ಉಳಿದಿಲ್ಲ ಬದಲಾಗಿ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪ್ರಭಾವ ಬೀರುವ ಪ್ರಬಲ ಶಕ್ತಿಗಳಾಗಿವೆ. ಮಹಿಳೆಯರಿಗೆ ಹೆಚ್ಚಿನ ಉದ್ಯೋಗವಕಾಶ ಒದಗಿಸಿರುವುದೇ ಅಲ್ಲದೆ ಮಹಿಳೆಯರಲ್ಲೂ ಶಿಕ್ಷಣ, ಕೌಶಲ್ಯ, ಪ್ರತಿಭೆ ಮತ್ತು ತಿಳಿವಳಿಕೆ ಬೆಳೆಸಲು ಕೂಡ ಈ ಮಾದ್ಯಮಗಳು ಕಾರಣವಾಗಿದೆ.

ಮಹಿಳೆ ಸೃಷ್ಟಿಯು ಪೂರ್ವದಿಂದಲೂ ಅತ್ಯುನ್ನತ ಮಟ್ಟದಲ್ಲಿ ಸಮಾಜ ಮತ್ತು ಕುಟುಂಬದ ಕೇಂದ್ರ ಬಿಂದುವಾಗಿದ್ದಾಳೆ. ಆದರೆ ಇವಳ ಪಾತ್ರವು ಒಂದು ಕಡೆ ವೈಭವೀಕರಿಸಲ್ಪಟ್ಟಿದ್ದರೆ, ಇನ್ನೊಂದು ಕಡೆ ಸಮಾಜದ ಎರಡನೆಯ ದರ್ಜೆಯ ಪ್ರಜೆಯಾಗಿ ಸಮಾಜದ ಎಲ್ಲಾ ಕಟ್ಟುಪಾಡು, ನೀತಿ-ನಿಯಮ, ನಿಷೇಧ, ಬಂಧನಗಳ ಸಂಕೋಲೆ ಗಳಲ್ಲಿ ಸಿಕ್ಕಿ ಬಳಲುತ್ತಿದ್ದಾಳೆ. ಪ್ರಸ್ತುತ ಪ್ರಬಂಧದಲ್ಲಿ ಮಾಧ್ಯಮಗಳಲ್ಲಿ ಮಹಿಳೆಯ ಪಾತ್ರ, ಸ್ಥಾನಮಾನ, ಆಸಕ್ತಿ ಮುಂತಾದುವುಗಳ ಕಿರುಪರಿಚಯ ಮಾಡಿಕೊಡಲಾಗಿದೆ.

ಮಾದ್ಯಮ ಮತ್ತು ಪರಿಸರ

ಮಾಧ್ಯಮಗಳು ಮಾನವನ ಜೀವನದಲ್ಲಿ ಬಹಳಷ್ಟು ಮಹತ್ವ ಪಡೆದಿವೆ. ಆದರೆ ಎಷ್ಟೋ ಜನ ತಮ್ಮ ಕಛೇರಿ ವೇಳೆಯಷ್ಟನ್ನೇ ಇವುಗಳೊಂದಿಗೆ ಕಳೆಯುತ್ತಿದ್ದಾರೆ.

ಬದುಕಿಗೆ ಉಸಿರು ಎಷ್ಟು ಮುಖ್ಯವೋ ಹಾಗೆಯೇ ಇಂದಿನ ವ್ಯವಸ್ಥಿತ ಬದುಕಿಗೂ ಮಾಧ್ಯಮಗಳ ಅತ್ಯಗತ್ಯವೆನ್ನುವಷ್ಟರ ಮಟ್ಟಿಗೆ ಮನುಷ್ಯನನ್ನು ಅವು ಆವರಿಸಿಕೊಂಡಿವೆ.

ಉದಾಹರಣೆಗೆ ಬೆಳಗಿನ ಕಾಫಿ ಹೇಗೆ ಅವಶ್ಯಕವೋ ಹಾಗೆಯೇ ಪತ್ರಿಕೆ ದಿನಚರಿಯನ್ನು ಆರಂಭಿಸಲು ಅವಶ್ಯ. ಒಂದು ಗುಂಡಿಯನ್ನು ಕುಳಿತಲ್ಲಿಯೇ ಒತ್ತಿದರೆ ರೇಡಿಯೋ ಅಥವಾ ಟೆಲಿವಿಷನ್‌ಗಳು ದೇಶ ವಿದೇಶಗಳ ಸುದ್ದಿ ಹೇಳುತ್ತವೆ, ಹಾಡುತ್ತವೆ ಹಾಗೂ ಮನೋರಂಜನೆ ಒದಗಿಸುತ್ತವೆ. ಇವಿಲ್ಲದ ಪ್ರಪಂಚದ ಕಲ್ಪನೆ ಅಸಾಧ್ಯವಾಗಿದೆ. ಇಡೀ ದೇಶ, ಪ್ರಪಂಚದ ವಿಷಯವನ್ನು ಮನೆಮಾತಿನ ಹಾಗೆ ಪರಿಚಯಿಸುವುದೇ ಅಲ್ಲದೆ ಪ್ರಪಂಚದ ಜನರನ್ನು ಚಿರಪರಿಚಿತರನ್ನಾಗಿ ಮಾಡಿವೆ. ಎಂದೂ ಭೇಟಿಯಾಗದ, ನೇರವಾಗಿ ನೋಡಲು ಮಾತನಾಡಿಸಲು ಸಾಧ್ಯವಾಗದ ಜನರನ್ನು ನೋಡುವಂತೆ ಅಲ್ಲದೆ ಅವರೊಂದಿಗೆ ದೂರವಾಣಿಯ ಮೂಲಕ ಮಾತನಾಡಿಸಲು ಸಹ ಈ ಮಾಧ್ಯಮಗಳಿಂದ ಸಾಧ್ಯವಾಗಿದೆ.

ಸಮಾಜದ ಸಂಪರ್ಕ ವಿಶಾಲವಾದ ಹಲವು ಮಟ್ಟಗಳಲ್ಲಿರುವ ಅನಾಮಿಕ ಶ್ರೋತೃಗಳನ್ನು ಉದ್ದೇಶಿಸಿರುತ್ತದೆ. ಸಮೂಹ ಮಾಧ್ಯಮಗಳ ಶ್ರೋತೃವರ್ಗ ಸ್ವಾಭಾವಿಕವಾಗಿಯೇ ದೊಡ್ಡದು. ಒಂದು ಪತ್ರಿಕೆಗೆ ಲಕ್ಷ ಜನ ಓದುಗರಿರುತ್ತಾರೆ. ಅದೇ ರೀತಿ ಚಲನಚಿತ್ರವನ್ನು, ರೇಡಿಯೋ ಕಾರ್ಯಕ್ರಮವನ್ನು ಹಲವಾರು ಜನ ನೋಡುತ್ತಾರೆ. ಸಮೂಹ ಮಾಧ್ಯಮಗಳು ಮಾಡುತ್ತಿರುವ ಮತ್ತೊಂದು ಮುಖ್ಯ ಕಾರ್ಯ ಜನರಿಗೆ ಮನೋರಂಜನೆಯನ್ನು ಒದಗಿಸುವುದು. ಅದರಲ್ಲೂ ಚಲನಚಿತ್ರ 'ಮನೋರಂಜನೆಯ ಚಕ್ರವರ್ತಿ' ಮಾಧ್ಯಮವೆನ್ನುತ್ತಾರೆ.

ಇಂಥ ಮಾಧ್ಯಮವು ಸಮಾಜದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿದೆ. ಸಾಮಾಜಿಕ ನೀತಿ ನಿಯಮಗಳನ್ನು ಹೆಚ್ಚು ಬಿಗಿಯಾಗಿ ವಿಧಿಸಲು ಮಾಧ್ಯಮಗಳಿಗೆ ಇರುವ ಶಕ್ತಿಯನ್ನು ಲಜರ್ಸ್ ಫೆಲ್ಡ ಮತ್ತು ಮರ್ಟನ್ ಎಂಬುವರು ಗುರುತಿಸಿ ಇದನ್ನು ನೀತಿ ಪಾಲನೆಯ ಕಾರ್ಯವೆಂದು ಕರೆದಿದ್ದಾರೆ. ಇಂದು 'ಲೇಖನಿಯ ಶಕ್ತಿ' ಎನ್ನುವ ಮಾತು ಸಮೂಹ ಮಾಧ್ಯಮಗಳ ಶಕ್ತಿಯನ್ನು ಸೂಚಿಸುತ್ತದೆ.

ಆಧುನಿಕ ಜೀವನದಲ್ಲಿ ಮಾಧ್ಯಮಗಳು

ಮಾಧ್ಯಮಗಳು ಆಧುನಿಕ ಸಮಾಜದಲ್ಲಿ ತುಂಬ ಮುಖ್ಯ ಸ್ಥಾನವನ್ನು ಪಡೆದಿವೆ. ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಇವು ಪ್ರಮುಖ ಪಾತ್ರ ವಹಿಸುತ್ತವೆ.

ಸಾಮಾಜಿಕ ಕ್ಷೇತ್ರ

ಸಾಮಾಜಿಕವಾಗಿ ತೀರ ವೈಯುಕ್ತಿಕ ಎಂದು ಹೇಳಬಹುದಾದ ಹಲವು ನಡತೆಗಳ ಮೇಲೆ ಸಹ ಮಾಧ್ಯಮಗಳು ಪ್ರಭಾವ ಬೀರಿವೆ. ಒಟ್ಟಿಗೆ ಸಿನಿಮಾ ನೋಡುವುದು ಸಮಾನ

ವಯಸ್ಕರ ಚಟುವಟಿಕೆಯಲ್ಲಿ ಇದು ಒಂದು ಮುಖ್ಯ ಸ್ಥಾನ ಪಡೆದಿದೆ. ಇಂದು ಹಲವರ ಸಾಮಾಜಿಕ ಒಡನಾಟಕ್ಕೆ ಮಾಧ್ಯಮಗಳು ಕಾರಣವಾಗುತ್ತವೆ. ತರುಣ ಪೀಳಿಗೆಯವರ ಸಂಭಾಷಣೆಯ ಮುಖ್ಯ ವಿಷಯ ಸಿನಿಮಾ. ಇಲ್ಲಿ ಇರುವ ಒಂದೊಂದು ವಿಷಯವೂ ಮಧ್ಯಮ ವರ್ಗದ ಮಹಿಳೆಯರಲ್ಲಿ ಮಾತುಕತೆಯ ಮುಖ್ಯ ವಿಷಯವಾಗುತ್ತದೆ. ಇನ್ನೂ ಮುಖ್ಯವಾದ ಅಂಶವೆಂದರೆ ಹೆಚ್ಚು ಜನರ ನಡುವೆ ಬೆರೆಯದ ಮನೋಭಾವವುಳ್ಳವರಿಗೆ ಸಹ ಸಮೂರ ಮಾಧ್ಯಮಗಳು ಸಾಮಾನ್ಯ ಆಸಕ್ತಿ ಸೃಷ್ಟಿಸುತ್ತವೆ. ಹೆಣ್ಣು ಗಂಡು ಪರಸ್ಪರ ಆಕರ್ಷಿಸುವ ರೀತಿಗಳನ್ನು ಸಹ ಸಂಪರ್ಕ ಮಾಧ್ಯಮದಿಂದ ಕಲಿಯುತ್ತಿದ್ದಾರೆ. ಇದೇ ಮುಖ್ಯ ಉದ್ದೇಶವಾಗಿರುವ ಫ್ಯಾಷನ್, ಸೌಂದರ್ಯ ಸಲಹೆ ಮೊದಲಾದ ಪತ್ರಿಕೆಗಳ ವಿಭಾಗಗಳ ಜೊತೆ ಸಿನಿಮಾ ಕಾದಂಬರಿ ಕತೆಗಳಲ್ಲಿನ ನಾಯಕ-ನಾಯಕಿಯ ನಡವಳಿಕೆಗಳನ್ನು ನೋಡಿ ಸಹ ಕಲಿಯಲು ಸಾಧ್ಯವಿದೆ.

ರಾಜಕೀಯ ಕ್ಷೇತ್ರ

ಈ ಕ್ಷೇತ್ರದಲ್ಲಿ ಮಾಧ್ಯಮಗಳ ಸ್ಥಾನ ಮುಖ್ಯವಾದುದು. ರಾಜಕೀಯ ಮುಖಂಡರು ಜನರೊಂದಿಗೆ ನಿಕಟವಾದ ಸಂಬಂಧವನ್ನು ಇಟ್ಟುಕೊಳ್ಳಲು ಇರುವ ಸಾಧನ ಮಾಧ್ಯಮಗಳು ಮಾತ್ರ. ಪತ್ರಿಕೆಯನ್ನು ರಾಜಕೀಯ ವಿಷಯಗಳ ಅಂಗಡಿಯೆಂದು ಕೆಲವು ಸಲ ಹೇಳುತ್ತಾರೆ. ರಾಜಕೀಯ ಬೆಳವಣಿಗೆ, ಸರ್ಕಾರದ ನಿರ್ಧಾರ ಗೊತ್ತಾಗುವುದು ಮಾಧ್ಯಮದಿಂದ. ಇವುಗಳ ಪರ ಹಾಗೂ ವಿರೋಧವಾಗಿರುವ ಜನ ಇವನ್ನು ಪರೀಕ್ಷಿಸುವುದು ಮಾಧ್ಯಮಗಳ ಮೂಲಕವೇ. ಹೊಸ ಬೆಳವಣಿಗೆಗಳ ಸುದ್ದಿ, ಅವುಗಳ ವಿಶ್ಲೇಷಣೆಯನ್ನು ಕೊಡುವುದರ ಜೊತೆಗೆ ಮಾಧ್ಯಮಗಳು ರಾಜಕೀಯ ಮುಖಂಡರ ಮಾತುಗಳಿಗೆ ಅವರು ಕೊಡುವ ಭರವಸೆಗಳಿಗೆ ಒಂದು ಮೂರ್ತರೂಪವನ್ನು ಕೊಡುತ್ತಾರೆ. ಅಮೆರಿಕಾದಂತಹ ದೇಶದಲ್ಲಿ ಟೆಲಿವಿಷನ್ ಮಾಧ್ಯಮ ಇಂದು ರಾಜಕೀಯ ಚಟುವಟಿಕೆಯ ಗತಿಯನ್ನು ಬದಲಾಯಿಸಿದೆ. ರಾಜಕೀಯಕ್ಕೆ ಹೊಸ ಅರ್ಥ ಕೊಟ್ಟಿದೆ. ಸಮೂಹ ಮಾಧ್ಯಮಗಳು ಅಷ್ಟು ಪ್ರಚಲಿತವಿಲ್ಲದ ನಮ್ಮ ದೇಶದಲ್ಲೂ ರಾಜಕೀಯ ಕ್ಷೇತ್ರದಲ್ಲಿ ಪತ್ರಿಕೆಗಳ ಪ್ರಭಾವ ಮುಖ್ಯವಾಗಿದೆ.

ಆರ್ಥಿಕ ಕ್ಷೇತ್ರ

ಸಮರ್ಪಕವಾದ ಸಂಪರ್ಕ ಮಾಧ್ಯಮಗಳಿಲ್ಲದಿದ್ದರೆ ಕೈಗಾರಿಕಾ ಆರ್ಥಿಕ ವ್ಯವಸ್ಥೆ ಕೆಲಸ ಮಾಡಲು ಸಾಧ್ಯವಾಗಲಾರದು. ಸಂಪರ್ಕ ಮಾಧ್ಯಮಗಳು, ಜಾಹಿರಾತುಗಳ ಮೂಲಕ ತಯಾರಿಸುವ ಹೊಸ ವಸ್ತುಗಳ ವಿವರಗಳನ್ನು ಜನರಿಗೆ ತಲುಪಿಸುತ್ತವೆ. ಅಲ್ಲದೆ ಇಲ್ಲದ ವಸ್ತುಗಳನ್ನು ಜನರು ಬಯಸುವಂತೆ ಮಾಡುತ್ತದೆ. ವಾಣಿಜ್ಯ ಕ್ಷೇತ್ರದಲ್ಲಿ ಮಾರುಕಟ್ಟೆಯ ದರ, ಸ್ಟಾಕ್ ಮಾರ್ಕೆಟ್ಟಿನಲ್ಲಿ ಏರುಪೇರುಗಳನ್ನು ತ್ವರಿತವಾಗಿ ಮಾಧ್ಯಮಗಳು ತಿಳಿಸಬಲ್ಲವು. ಹಲವು ಆಧುನಿಕ ಆರ್ಥಿಕ ಸಂಸ್ಥೆಗಳ ಇರುವಿಕೆಗೆ ಸಂಪರ್ಕ

ಮಾಧ್ಯಮಗಳು ತೀರಾ ಅಗತ್ಯ. ಆರ್ಥಿಕ ಅಭಿವೃದ್ಧಿಗೂ ಸಂಪರ್ಕ ಮಾಧ್ಯಮಗಳಿಗೂ ನಿಕಟ ಸಂಬಂಧವಿದೆ. ಇದು ಶಕ್ತವಾಗಿದ್ದರೆ ಪ್ರಗತಿಪರವಾಗಿದ್ದರೆ ಮಾತ್ರ ಆರ್ಥಿಕ ಅಭಿವೃದ್ಧಿ ಸಾಧ್ಯ.

ಸಾಂಸ್ಕೃತಿಕ ಕ್ಷೇತ್ರ

ಈ ಕ್ಷೇತ್ರಗಳಲ್ಲಿ ಮಾಧ್ಯಮಗಳ ಸೇವೆ ಅನುಪಮವಾದುದು. ಲೇಖಕ, ಕಲಾವಿದ, ಸಂಗೀತಕಾರ, ಮೊದಲಾದವರಿಗೆ ಪ್ರೋತ್ಸಾಹ ಕೊಡುವುದು, ಸಂಸ್ಕೃತಿ ಬೆಳೆಯಲು ಉಳಿಯಲು ಅತ್ಯಂತ ಅವಶ್ಯಕ. ಹಿಂದೆ ಇಂತಹ ಪ್ರೋತ್ಸಾಹ ಸಿಗುತ್ತಿದ್ದುದು ಆಳುವ ಅರಸರಿಂದ. ರಾಜಾಶ್ರಯದಲ್ಲಿ ಬೆಳೆದು ಬಂದ ಕಲೆಗಳಿಗೆ ಇಂದು ಹೆಚ್ಚಿನ ನೆರವು ಬರುತ್ತಿರುವುದು ಮಾಧ್ಯಮಗಳಿಂದ. ವಾರ, ಮಾಸಪತ್ರಿಕೆಗಳು, ದಿನಪತ್ರಿಕೆಗಳ ವಾರದ ವಿಭಾಗದಲ್ಲಿ ಲೇಖಕ, ಕಲಾವಿದರನ್ನು ಪರಿಚಯ ಮಾಡಿಕೊಡುವ ಲೇಖನಗಳು, ರೇಡಿಯೋದಲ್ಲಿನ ಶಾಸ್ತ್ರೀಯ ಹಾಗೂ ಲಘು ಸಂಗೀತ ಕಾರ್ಯಕ್ರಮಗಳು, ಚಲನಚಿತ್ರದಲ್ಲಿ ನಟರಿಗೆ, ಹಾಡುಗಾರರಿಗೆ, ಲೇಖಕರಿಗೆ ಇರುವ ಅವಕಾಶಗಳು ಇಂದು ಕಲಾವಿದರಿಗೆ ಹಿಂದೆಂದೂ ಇಲ್ಲದಷ್ಟು ಶ್ರೋತೃಗಳನ್ನು ಒದಗಿಸಿವೆ.

ಮಹಿಳೆ ಮತ್ತು ಮಾಧ್ಯಮ

ಸಮೂಹ ಮಾಧ್ಯಮಗಳು ಇಂದು ಅತ್ಯಂತ ಉತ್ಕೃಷ್ಟ ಪ್ರಭಾವಿ. ಮಾಧ್ಯಮಗಳು ಆದ ಕಾರಣದಿಂದಲೇ ಅವು ಏಕಕಾಲದಲ್ಲಿ ಉಪಕಾರಿ ಮತ್ತು ಅಪಾಯಕಾರಿ ಎರಡೂ ಆಗಿರುತ್ತದೆ. ಅಲ್ಲದೆ ಸಮೂಹ ಮಾಧ್ಯಮಗಳಿಗೂ ಬಂಡವಾಳಕ್ಕೂ ನಿಕಟ ಸಂಬಂಧವಿದೆ. ನಮ್ಮ ದೇಶದ ಸಂದರ್ಭಕ್ಕೆ ಬಂದಾಗ ಪತ್ರಿಕೆ ಮತ್ತು ದೂರದರ್ಶನಗಳು ಸರ್ಕಾರದ ಹಿಡಿತದಲ್ಲಿವೆ. ಪತ್ರಿಕೆಗಳನ್ನು ಹೊರತುಪಡಿಸುವ ಕೆಲಸ ಒಂದು ಉದ್ಯಮ ವಾಗಿದೆಯೆಂಬುದನ್ನು 'ಪತ್ರಿಕೋದ್ಯಮ' ಎಂಬ ಹೆಸರೇ ಸೂಚಿಸುತ್ತದೆ. ಆದ್ದರಿಂದ ಅದರ ಪ್ರಧಾನ ಲಕ್ಷಣಗಳು ಉದ್ದಿಮೆಯ ಸೂತ್ರಗಳನ್ನು ಅವಲಂಬಿಸಿರುತ್ತವೆ. ಸಿನಿಮಾ ಒಂದು ದೊಡ್ಡ ಉದ್ಯಮವಾಗಿರುವಂತೆಯೇ ಕಲೆಯೂ ಆಗಿದೆ. ಇದು ಸಮೂಹ ಮಾಧ್ಯಮಗಳಲ್ಲಿಯೇ ವಿಶಿಷ್ಟವಾದುದು.

ಮಹಿಳೆ ಮತ್ತು ಸಿನಿಮಾ ಮಾಧ್ಯಮ

ಸಮೂಹ ಮಾಧ್ಯಮಗಳನ್ನು ನಿಯಂತ್ರಿಸುವ ಶಕ್ತಿಗಳ ದೃಷ್ಟಿಕೋನವೇ ಅವುಗಳಲ್ಲಿ ಬರುವ 'ಮಹಿಳೆ'ಯ ನೆಲೆ ನಿಲುವುಗಳನ್ನು ನಿರ್ಧರಿಸುತ್ತವೆ. ಸಿನಿಮಾಗಳಲ್ಲಿ ಬರುವ ಮಹಿಳೆಯನ್ನು ನೋಡಿದಾಗ ಅದರ ವಸ್ತುವೆಂದರೆ ಪ್ರೇಮ, ಭಾವನಾತ್ಮಕ ಸೆಳೆತಗಳನ್ನು ಹೊಂದಿದ ಮತ್ತು ಅಂಥ ಸೆಳೆತವನ್ನು ಉಂಟು ಮಾಡಬಲ್ಲ ಶಕ್ತಿಯನ್ನು ಹೊಂದಿದೆ. ಈ ವಸ್ತುವಿನಲ್ಲಿ ಮೂಡುವ ಮಹಿಳೆ ಮಜುನುವಿನ ಲೈಲಾ ಆಗುವುದರಲ್ಲಿ ಸಾರ್ಥಕತೆ

ಪಡೆಯುತ್ತಾಳೆ. ಈ ಪ್ರೇಮದಲ್ಲಿ ಭಾವೋನ್ಮತ್ತತೆಯೇ ಪ್ರಧಾನವಾಗಿ ಬಿಡುವುದರಿಂದ ಹೆಣ್ಣು ತನ್ನನ್ನು ಪುರುಷನಿಗೆ ಸಂಪೂರ್ಣ ಸಮರ್ಪಿಸಿಕೊಳ್ಳುವುದರಲ್ಲಿ ಸಾರ್ಥಕತೆ ಕಾಣುವುದು ಸ್ವಾಭಾವಿಕ.

ಪ್ರೇಮದ ವಿವಿಧ ವಿಭಾಗಗಳಲ್ಲಿ ಮಹಿಳೆ ನಿಷ್ಠಾವಂತ ಹೆಂಗಸಾಗಿ ಕಾಣಿಸಿಕೊಂಡಿರುವುದೇ ಹೆಚ್ಚು. ನಮ್ಮ ಸಿನಿಮಾಗಳಲ್ಲಿ ಎಂಥದೇ ಸಂದರ್ಭದಲ್ಲಾಗಲೀ ಸಾಮಾನ್ಯವಾಗಿ ಮಹಿಳೆ ತನ್ನ ಪ್ರೇಮಕ್ಕೆ ವಂಚನೆ ಮಾಡುವುದಿಲ್ಲ. ಕಡೆವರೆಗೂ ಪುರುಷ ಪ್ರೇಮಿಗೆ ಭಾವನಾತ್ಮಕವಾಗಿ ಒಪ್ಪಿಕೊಂಡಿರುತ್ತಾರೆ. ಸಮಾಜದಲ್ಲಿ ಪ್ರೇಮ ಭಾವೋನ್ಮತ್ತವೂ ಆಗಬಲ್ಲದು. ರಮ್ಯ ಅಥವಾ ಧೀರೋದಾತ್ತವೂ ಆಗಬಲ್ಲದು. ಇಂಥ ಸಂಧರ್ಭಗಳಲ್ಲಿ ಮಹಿಳೆ ನಿರ್ಣಯಾತ್ಮಕಳಾಗುವುದು ಅಪರೂಪ. ಅಸಹಾಯಕಳಾಗಿರುವುದೇ ಹೆಚ್ಚು. ಸಿನಿಮಾವನ್ನು ನಿಯಂತ್ರಿಸುವ ಶಕ್ತಿಗಳು ಇಂಥ ಮಾದರಿಗಳ ನಿರ್ಮಿತಿಯು ಅನಿವಾರ್ಯವಾಗಿರುತ್ತವೆ. ಇಲ್ಲಿ ಪ್ರೇಮವೇ ಬಂಡವಾಳ ಸಂಗ್ರಹಣೆಯ ಸಾಧನವಾಗಿರುವುದರಿಂದ ಅದಕ್ಕೆ ಅನುಗುಣವಾಗಿ ಮಹಿಳೆಯ ಪಾತ್ರ ನಿರ್ಮಾಣಗೊಳ್ಳುತ್ತದೆ. ಇದೇ ಅಲ್ಲದೆ ಹಿಂಸಾ ಪ್ರವೀಣ ಪತಿ-ಪುರುಷನಿಂದುಂಟಾದ ಸಕಲ ಸಂಕಟಗಳನ್ನು ಸಂಯಮದಿಂದ ತಡೆದುಕೊಳ್ಳುವ ಪತ್ನಿಯ ಪಾತ್ರ ಇಂದು ಮಾರಾಟದ ಮಾದರಿಯಾಗಿವೆ. ಆದ್ದರಿಂದಲೇ ಇಲ್ಲಿ ವೇಶ್ಯೆಯ ಪಾತ್ರವು ಸುಲಭ ಆದರ್ಶೀಕರಣಕ್ಕೊಳಗಾಗಿ ಸಮಸ್ಯೆಯ ಸೂಕ್ಷ್ಮಗಳು ಹಿನ್ನೆಲೆಗೆ ಸರಿಯುತ್ತವೆ. ಇದಕ್ಕೆ ವಿರುದ್ಧವಾದ ಸ್ತ್ರೀ ಪಾತ್ರಗಳು ಕಾಣಿಸಿಕೊಂಡಿರುವುದೂ ಉಂಟು. ಅವು ಸಾಮಾನ್ಯವಾಗಿ ಅತ್ತೆ ಪಾತ್ರಗಳು ಇಲ್ಲವೆ ಬಜಾರಿ ಪಾತ್ರಗಳು. ಇದು ಎಷ್ಟರ ಮಟ್ಟಿಗೆ ಪ್ರಭಾವಿತವಾಗಿರುತ್ತದೆಂದರೆ ಇಲ್ಲಿ ಹೆಣ್ಣು ಸಾಮಾನ್ಯವಾಗಿ ದಢೂತಿ ಹೆಣ್ಣುಗಳೇ ಆಗಿರುತ್ತಾರೆ. ಹಾಗೆ ನೋಡಿದರೆ ಹೆಣ್ಣು ಬಜಾರಿಯಾಗುವ, ಗತ್ತಿನ ಅತ್ತೆಯಾಗುವ ಪ್ರಕ್ರಿಯೆಯ ಪರಿಶೋಧನೆಯೇ ಚಿತ್ರವೊಂದರ ವಸ್ತುವಾಗಬಲ್ಲದು. ಆದರೆ ಸಿನಿಮಾ ಮಾಧ್ಯಮವು ಶೋಧನಾತ್ಮಕತೆಗಿಂತ ಹೆಚ್ಚಾಗಿ ಸಿದ್ಧರೂಪುಗಳನ್ನು ಸ್ವೀಕರಿಸುತ್ತದೆ. ಈ ದೃಷ್ಟಿಯಿಂದ ಯಥಾ ಸ್ಥಿತಿ ರೂಢಿಯಾಗುತ್ತಿದೆ. ಏಕೆಂದರೆ ಸಾಮಾಜಿಕ ವಿನ್ಯಾಸವೊಂದು ಸ್ಪಷ್ಟವಾಗಿ ರೂಪುಗೊಳ್ಳುವ ಮೊದಲು ಮತ್ತು ಅದು ಸಮೂಹ ಸಂಸ್ಕೃತಿಯ ಭಾಗವಾಗುವುದಕ್ಕಿಂತ ಮುಂಚೆಯೇ ಅದನ್ನು ಸ್ವೀಕರಿಸುವ ಸವಾಲನ್ನು ಸಮೂಹ ಮಾಧ್ಯಮಗಳು ಒಪ್ಪಿಕೊಳ್ಳುವುದಿಲ್ಲ.

ಆ ಕಾರಣದಿಂದಲೇ ವೈಭವೀಕೃತಗೊಂಡ ವೀರವನಿತೆಯರ ತ್ಯಾಗಮಯಿ ಪ್ರೇಮಿಗಳು ಪತಿಯೇ ಪರದೈವವೆಂದುಕೊಂಡ ಪತಿವ್ರತೆಯರೂ ಸಿನಿಮಾ ಮಾಧ್ಯಮದಲ್ಲಿ ವಿಜೃಂಭಿಸುತ್ತಾರೆ. ಇಲ್ಲಿ ಮಾರಾಟವಾಗುವ ಯಾವ ವಿಷಯವೂ ನಿಷಿದ್ಧವಲ್ಲ. ಅದು ಪತಿವ್ರತೆಯ ಚಿತ್ರವಾಗಬಹುದು, ಅಹಿಂಸೆಯ ಚಿತ್ರವಾಗಬಹುದು. ಅಥವಾ ಹಿಂಸೆಯ ಚಿತ್ರವಾಗಬಹುದು. ಆಯಾ ವಸ್ತುವಿಗೆ ಸಂಬಂಧಿಸಿದ ವಿವರ ಸಂಗ್ರಹಕ್ಕಾಗಿ, ಖರ್ಚಿಗಾಗಿ

ಸರ್ವ ಪ್ರಯತ್ನ ಮಾಡಲು ಸಿದ್ಧರಿರುವ ಬಂಡವಾಳಶಾಹಿ ಸಂಸ್ಕೃತಿಗೆ ಯಾವ ಕ್ಷೇತ್ರದ ಪರಿಣಿತರನ್ನಾದರೂ ಒಪ್ಪಿಕೊಳ್ಳುವ ಆರ್ಥಿಕ ಶಕ್ತಿ ಮತ್ತು ಆಸಕ್ತಿಗಳಿರುತ್ತವೆ.

ನಮ್ಮ ಸಮೂಹ ಮಾಧ್ಯಮಗಳಲ್ಲಿ ಕೆಳವರ್ಗದ ಮಹಿಳೆ ತನ್ನೆಲ್ಲ ದುಃಖ ದುಮ್ಮಾನಗಳೊಂದಿಗೆ ಚಿತ್ರಿತಗೊಂಡಿರುವುದು ತೀರಾ ಕಡಿಮೆ. ಪತ್ರಿಕೆಗಳಲ್ಲಿ ಕೆಲವು ಲೇಖನಗಳು ಬಂದಿವೆ. ಸಿನಿಮಾದಲ್ಲಿ ಕೆಲವು ಪಾತ್ರಗಳು ಅದೇ ರೀತಿ ದೂರದರ್ಶನ ದಲ್ಲಿಯೂ ಕೆಳವರ್ಗದ ಮತ್ತು ಆದಿವಾಸಿಗಳ ಚಿತ್ರಣ ತೀರ ವಿರಳ. ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಕೆಳವರ್ಗದ ಹೆಣ್ಣು ಸಮೂಹ ಮಾಧ್ಯಮಗಳಲ್ಲೂ ಅದೇ ಸ್ಥಿತಿಯಲ್ಲಿರುವುದು ಸ್ವಾಭಾವಿಕ. ಸಿನಿಮಾಗಳಲ್ಲಿ ಕೆಳವರ್ಗದ ಹೆಣ್ಣು ಪಾತ್ರಗಳು ಬಂದಿದ್ದರೂ ಅವು ಮುಗ್ಧತೆಯ ಮಾದರಿಗಳಾಗಿವೆ ಇಲ್ಲವೆ ಅತ್ಯಾಚಾರಕ್ಕಾಗಿಯೇ ಸೃಷ್ಟಿಯಾದ ಹೆಂಗಸರದಾಗಿವೆ. ಇದನ್ನು ಮೀರಿದ ಗ್ರಾಮೀಣ ಸಮಾಜದ ಸಂಬಂಧಗಳ ಸಂದರ್ಭದಲ್ಲಿ ಸೃಷ್ಟಿಯಾಗುವ ಸಂಪೂರ್ಣ ಸ್ತ್ರೀ ವ್ಯಕ್ತಿತ್ವಗಳನ್ನು ಇಂದು ಸೃಷ್ಟಿಸಬೇಕಾಗಿದೆ.

ಮಹಿಳೆ ಮತ್ತು ದೂರದರ್ಶನ

ಇಪ್ಪತ್ತೊಂದನೆಯ ಶತಮಾನದ ಅತ್ಯಂತ ಪರಿಣಾಕಾರಿ ಮಾಧ್ಯಮಗಳಲ್ಲಿ ದೂರದರ್ಶನ ಪ್ರಮುಖವಾದದ್ದು. ರೇಡಿಯೋ ಮತ್ತು ಸಿನಿಮಾಗಳು ಹೆಚ್ಚು ಪ್ರಚಲಿತವಾಗಿದ್ದಾಗ ಟಿ. ವಿ. ಜನರನ್ನು ಹೆಚ್ಚು ಆಕರ್ಷಿಸಿತು. ಇದು ೧೯೪೦ರ ದಶಕದಲ್ಲಿಯೇ ರೇಡಿಯೋ ಮಾಧ್ಯಮ ಹೆಚ್ಚು ಜನಪ್ರಿಯವಾಗಿದ್ದ ಕಾಲದಲ್ಲಿಯೇ ಬಳಕೆಗೆ ಬಂದಿತ್ತು. ಇದು ಅನೇಕ ಅನ್ವೇಷಣೆಗಳ ಫಲವಾಗಿದೆ.

ಸಿನಿಮಾಕ್ಕಿಂತ ಅತ್ಯಂತ ಪರಿಣಾಮಕಾರಿ ಹಾಗೂ ಜನಪ್ರಿಯ ಮಾಧ್ಯಮ ಟಿ. ವಿ. ಸಿನಿಮಾ ಮಾಧ್ಯಮಕ್ಕೆ ಹೋಲಿಸಿದಾಗ ಕಂಡು ಬರುವ ಪ್ರಮುಖ ಅಂಶ ಟಿ.ವಿ. ಕ್ಯಾಮರಾದಿಂದ ಯಾವುದೇ ಚಿತ್ರೀಕರಣವನ್ನು ನೇರವಾಗಿ ಪ್ರಸಾರ ಮಾಡಬಹುದು. ಆದರೆ ಸಿನಿಮಾ ಮಾಧ್ಯಮದಿಂದ ಸಾಧ್ಯವಿಲ್ಲ. ಕೇವಲ ಶಿಕ್ಷಣಕ್ಕಾಗಿ ರೂಪುಗೊಂಡು ಇದು ಇಂದು ಮನರಂಜನೆಯ ಪ್ರಬಲ ಮಾಧ್ಯಮವಾಗಿ ರೂಪುಗೊಂಡಿದೆ.

ಟಿ.ವಿಯ ಬೆಳವಣಿಗೆ ಮತ್ತು ಉಪಗ್ರಹ ಟಿ.ವಿಯ ಉದಯ, ಭಾರತೀಯ ಸಮಾಜದ ಮೇಳೆ ಹೆಚ್ಚು ಪರಿಣಾಮವನ್ನುಂಟುಮಾಡಿದೆ. ಇದು ಅವರ ಜೀವನದಲ್ಲಿ ಬದಲಾವಣೆ ತಂದಷ್ಟು ಬೇರೆ ಯಾವ ಮಾಧ್ಯಮ ತಂದಿಲ್ಲ. ಈ ಮಾಧ್ಯಮದ ಪ್ರಮುಖ ಆಕರ್ಷಣೆ ಅದರ ಸುಲಭ ಸೌಲಭ್ಯ. ಆದರೂ ಟಿ.ವಿ. ಮಾಧ್ಯಮ ಇಂದು ಮಹಿಳೆಯನ್ನು ತಪ್ಪು ದಾರಿಯೆಡೆಗೆ ಕೊಂಡೊಯ್ಯುತ್ತಿದೆ ಎಂಬ ಅಪವಾದವಿದೆ. ಆದರೆ ಇದು ಪರೋಕ್ಷವಾಗಿ ಟಿ.ವಿ. ಚಾನಲ್ ಮತ್ತು ಅದರ ನಿರ್ಮಾಪಕರಿಗೆ ಆಗುತ್ತಿದೆ.

ಇಂದಿನ ಸಮಾಜದ ಜನರ ಸಂಪ್ರದಾಯ, ಮೂಢನಂಬಿಕೆ ಮಹಿಳೆಯರ ಸ್ಥಾನಮಾನ ಹಾಗೂ ಇತರ ಎಲ್ಲಾ ಕ್ಷೇತ್ರಗಳಲ್ಲೂ ಬದಲಾವಣೆ ಮತ್ತು ಅಭಿವೃದ್ಧಿ ಹೊಂದಲು

ನೇರವಾಗಿ ಈ ಮಾಧ್ಯಮದಿಂದ ಸಾಧ್ಯವಾಗಿದೆ. ಪ್ರತಿಯೊಂದು ಅಂಶಗಳ ಒಳಿತು ಕೆಡುಕುಗಳನ್ನು ಕಥೆ, ಧಾರವಾಹಿಗಳ ಮೂಲಕ ತೋರಿಸುವುದರಿಂದ ಇಂದಿನ ಕುಟುಂಬ ಗಳಲ್ಲಿ ಎಷ್ಟೋ ಬದಲಾವಣೆಗಳಾಗಿವೆ. ಅಲ್ಲದೆ ಜನರು ವೈಜ್ಞಾನಿಕವಾಗಿ ಚಿಂತಿಸಲು ಸಾಧ್ಯವಾಗಿದೆ. ಸಮಾಜದಲ್ಲಿದ್ದ ಕೆಟ್ಟ ಪಿಡುಗುಗಳು ದೂರವಾಗುತ್ತಿವೆ. ಅಲ್ಲದೆ ಜನಸಂಖ್ಯೆ ನಿಯಂತ್ರಣ, ವಿಧವಾ ವಿವಾಹ, ಅಂತರ್ಜಾತಿ ವಿವಾಹ, ವರದಕ್ಷಿಣೆ, ನಿರುದ್ಯೋಗ ಸಮಸ್ಯೆ, ಯುವ ಪೀಳಿಗೆಯವರ ಹೋರಾಟ, ಹಿರಿಯರ ಅನುಭವಗಳು, ಪ್ರತಿಯೊಂದರ ಮುಕ್ತ ಚರ್ಚೆ ಇಲ್ಲಿ ನಡೆಯುವುದರಿಂದ ಪ್ರತಿಯೊಬ್ಬರೂ ತಮ್ಮ ತಪ್ಪುಗಳನ್ನು ತಿದ್ದಿಕೊಂಡು ನಡೆಯಲೂ ಹಾಗೂ ಅವರ ಜೀವನ ನೆಮ್ಮದಿಯಿಂದ ಸಾಗಿಸಲು ಸಾಧ್ಯವಾಗಿದೆ. ಈ ಮಾಧ್ಯಮದಿಂದ ಎಷ್ಟು ವಿಷಯಗಳನ್ನು ನೋಡಬಹುದು, ನಾವು ನೋಡುವುದಕ್ಕೆ ಅಥವಾ ಕೇಳುವುದಕ್ಕೆ ಸಾಧ್ಯವಾಗದ ಅಂಶಗಳನ್ನು ತಿಳಿದುಕೊಳ್ಳಬಹುದಾಗಿದೆ. ಈ ಮಾಧ್ಯಮದಿಂದ ಇಡೀ ವಿಶ್ವದ ಸಾಂಸ್ಕೃತಿಕ ಅಂಶಗಳು ಸಂಸ್ಕೃತಿ, ಆಚಾರ-ವಿಚಾರ, ಧಾರ್ಮಿಕ, ಸಾಮಾಜಿಕ , ಶೈಕ್ಷಣಿಕ, ರಾಜಕೀಯ ಅಂಶಗಳನ್ನು ತಿಳಿದುಕೊಳ್ಳಬಹುದು.

ಒಟ್ಟಿನಲ್ಲಿ ಆಕ್ಷೇಪಾರ್ಹ ವಿಷಯಗಳನ್ನು ಮನರಂಜನೆ ಎನ್ನುವ ಹೆಸರಿನಲ್ಲಿ ನೋಡಿದಾಗ ಟಿ.ವಿ. ಮಾಧ್ಯಮದ ದುರ್ಬಳಕೆಯಾಗುತ್ತದೆ. ಮಾಧ್ಯಮಗಳಲ್ಲಿ ಅತ್ಯಂತ ಪ್ರತಿಷ್ಠಿತ ಮತ್ತು ಪರಿಣಾಮಕಾರಿ ಮಾಧ್ಯಮ ಟಿ.ವಿ. ಇಲ್ಲಿ ಜನರು ಏನನ್ನು ಬಯಸುತ್ತಾರೆ ಎನ್ನುವುದು ಮುಖ್ಯವಲ್ಲ. ಜನರ ಅಭಿರುಚಿಯನ್ನು ಯಾವ ರೀತಿ ಉತ್ತಮಪಡಿಸಬೇಕು ಎನ್ನುವ ಹೊಣೆಗಾರಿಕೆ ಮಾಧ್ಯಮದ್ದು. ಜನರಿಗೆ ಸರಿಯಾದ ಮಾಹಿತಿ ಮತ್ತು ಮಾರ್ಗದರ್ಶನ ನೀಡವುದು ಮಾಧ್ಯಮದ ಸಾಮಾಜಿಕ ಜವಾಬ್ದಾರಿಗಳಲ್ಲೊಂದು. ಇದನ್ನು ಮಾಧ್ಯಮಗಳು ತೃಪ್ತಿಕರವಾಗಿ ನಿರ್ವಹಿಸದಿದ್ದಾಗ ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತದೆ. ಮುಖ್ಯವಾಗಿ ಸಾಮಾಜಿಕ ಕಳಕಳಿ ಮಾಧ್ಯಮ ಗಳಿಗಿರಬೇಕಾಗುತ್ತದೆ.

ಮಹಿಳೆ ಮತ್ತು ಜಾಹಿರಾತು

ಜಾಹಿರಾತು ಉತ್ಪನ್ನಗಳನ್ನು ಮಾರಾಟ ಮಾಡಲು ಬಳಸುವ ಸಾಧನ. ಜಾಹಿರಾತಿಗೂ ಮಾಧ್ಯಮಕ್ಕೂ ನಿಕಟವಾದ ಸಂಬಂಧವಿದೆ. ಮಾಧ್ಯಮಕ್ಕೆ ಜಾಹಿರಾತೇ ಆರ್ಥಿಕ ಬುನಾದಿ. ಒಂದು ಮಾಧ್ಯಮ ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕಾದಲ್ಲಿ ಜಾಹಿರಾತಿನ ಬೆಂಬಲ ಅಗತ್ಯ. ಪತ್ರಿಕೆಗಳಿಗೆ ಎರಡು ಮೂಲದಿಂದ ಆದಾಯವಿದೆ. ಒಂದು ಪತ್ರಿಕಾ ಮಾರಾಟದಿಂದ, ಇನ್ನೊಂದು ಜಾಹಿರಾತಿನಿಂದ. ಈ ಎರಡರಲ್ಲಿ ಜಾಹಿರಾತಿನಿಂದ ಬರುವ ಆದಾಯವೇ ಹೆಚ್ಚು. ಆದ್ದರಿಂದ ಪತ್ರಿಕೆಗಳಲ್ಲಿ ಇದಕ್ಕೆ ಹೆಚ್ಚಿನ ಆದ್ಯತೆ. ಜಾಹಿರಾತಿನ ಪ್ರಮಾಣ ಸಂಖ್ಯೆಯನ್ನು ಅವಲಂಬಿಸಿರುತ್ತದೆ.

ಜಾಹಿರಾತು ಗುಣಮಟ್ಟವನ್ನು ನೋಡಿದಾಗ ಅದರ ಮೌಲ್ಯ ನಿರ್ಧರಿಸುವುದು ಕಷ್ಟ.

ಆದರೆ ಜಾಹಿರಾತಿನಲ್ಲಿ ಮಹಿಳೆಯ ಚಿತ್ರಣದ ಬಗ್ಗೆ ವಿಚಾರವಿದೆ. ಏಕೆಂದರೆ ಜಾಹಿರಾತಿನಲ್ಲಿ ಮಹಿಳೆಯ ಅವಶ್ಯಕತೆ ಇರಲಿ ಬಿಡಲಿ ಅವರನ್ನು ಬಳಸಲಾಗುತ್ತಿದೆ. ಕಾರಿನ ಟೈರಿನಿಂದ ಹಿಡಿದು ವಾಹನದ ತೈಲದವರೆಗೂ ಮಹಿಳೆಯನ್ನು ಒಂದಲ್ಲ ಒಂದು ರೀತಿ ಬಳಸಲಾಗುತ್ತಿದೆ. ಜಾಹಿರಾತಿನಲ್ಲಿ ಮಹಿಳೆಯರನ್ನೂ ಅವ್ಯಾಹತವಾಗಿ ಬಳಸಲಾಗುತ್ತದೆ. ಕನಿಷ್ಠ ಉಡುಪು ತೊಟ್ಟ ಮಹಿಳೆಯರು ಉದ್ರೇಕಕಾರಿ ಭಂಗಿಗಳಲ್ಲಿ ಅಂಗಾಂಗ ಪ್ರದರ್ಶನ ಮಾಡುವುದೇ ಇಂದಿನ ಜಾಹಿರಾತಿನ ಶೈಲಿ. ಮಾರಾಟ ಪದಾರ್ಥಕ್ಕೂ ಹೇಳುವ ವಿಷಯಕ್ಕೂ, ಅವರು ತೋರಿಸುವ ಮಹಿಳೆಯ ಚಿತ್ರಕ್ಕೂ ಯಾವ ಸಂಬಂಧವಿರುವುದಿಲ್ಲ. ಇಂದು ಜಾಹಿರಾತಿನಲ್ಲಿ ಮಹಿಳೆಯರನ್ನು ವ್ಯಾಪಾರೀಕರಣ ಮನೋಭಾವದಿಂದಲೇ ಪ್ರದರ್ಶಿಸಲಾಗುತ್ತಿದೆ.

ಮಕ್ಕಳಿಗೆ ನೀಡುವ ಪೌಷ್ಟಿಕಾಂಶದ ಪಾನೀಯಗಳನ್ನು ಗಂಡು ಮಕ್ಕಳಿಗಾಗಿ ಹೆಚ್ಚಾಗಿ ನೀಡುವ ಸಂಪ್ರದಾಯವನ್ನು ಚಿತ್ರಿಸುತ್ತವೆ. ಅಂದರೆ ಶಕ್ತಿ, ಧೈರ್ಯ, ಪೈಪೋಟಿ ಹಾಗೂ ಬುದ್ಧಿವಂತಿಕೆ ಗಂಡು ಮಕ್ಕಳಿಗೆ ಅವಶ್ಯಕ ಮತ್ತು ಅದರ ಪೋಷಣೆಗೆ ಈ ಪಾನೀಯ ಗಳನ್ನು ಬಳಸುವುದು ಸೂಕ್ತ ಎನ್ನುವುದು ಈ ಜಾಹಿರಾತಿನ ವಾದ. ಅದೇ ರೀತಿ ಎಷ್ಟೋ ಜಾಹಿರಾತುಗಳು ಮನೆ ಕೆಲಸದ ಸಂಪೂರ್ಣ ಜವಾಬ್ದಾರಿ ಮಹಿಳೆಯದ್ದೇ ಎಂದು ಚಿತ್ರಿಸಲಾಗಿದೆ. ಮನೆ ಕೆಲಸಗಳಾದ ಬಟ್ಟೆ ಒಗೆಯುವುದು, ಅಡಿಗೆ ಮಾಡುವುದು, ಇತ್ಯಾದಿ ಕೆಲಸಗಳು ಮಹಿಳೆಯರಿಗೆ ಸೀಮಿತ ಎಂದು ಅರ್ಥ ಕೊಡುತ್ತವೆ. ಇದರಿಂದಾಗಿ ಮಕ್ಕಳಲ್ಲಿ ಅದರಲ್ಲೂ ಬಾಲಕ ಬಾಲಕಿಯರ ಬಗ್ಗೆ ತಾತ್ಸಾರ ಬೆಳೆಯುವುದು ಸಹಜ.

ಮಹಿಳೆಯರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ್ದರೂ ಜಾಹಿರಾತಿನಲ್ಲಿ ಅವರ ಪರಿಣತಿ ಮತ್ತು ಪ್ರಗತಿಪರ ಧೋರಣೆ ಚಿತ್ರಿತವಾಗಿಲ್ಲ. ಕೇವಲ ಪುರುಷರ ಜೊತೆ ಅಲಂಕಾರಿಕ ಚಿಹ್ನೆಗಳಾಗಿ ಬಳಸಲಾಗುತ್ತಿದೆ. ಅದರಲ್ಲಿ ಮಹಿಳೆಯ ಚಿತ್ರಿಕರಣದಲ್ಲೂ ಹೆಚ್ಚಾಗಿ ಮೇಲ್ವರ್ಗದ ಮಹಿಳೆಯರ ಚಿತ್ರಣವೇ ಪ್ರಮುಖವಾಗಿವೆ. ಕೆಳವರ್ಗದ ಮಹಿಳೆಯರ ಜೀವನಶೈಲಿ ಜಾಹಿರಾತಿನಲ್ಲಿ ಮೂಡಿ ಬರುವುದೇ ವಿರಳ.

ಟಿ.ವಿ. ಮಾಧ್ಯಮಗಳಲ್ಲಿ ಇವುಗಳದ್ದೇ ಪ್ರತ್ಯೇಕ ಲೋಕ. ಅಲ್ಲಿ ಮಹಿಳೆಯ ದುರ್ಬಳಕೆ ಎಲ್ಲೆ ಮೀರಿದೆ. ಮೈ ಸಾಬೂನಿನ ಜಾಹಿರಾತುಗಳಂತೂ ಮಹಿಳೆಯರ ಸ್ನಾನ ಮಾಡುವ ಶೈಲಿಯ ಪ್ರದರ್ಶನವೋ ಅಥವಾ ಸಾಬೂನಿನದೋ ಎಂಬ ಸಂಶಯ ಬರುತ್ತದೆ. ಟಿ.ವಿ. ಮಾಧ್ಯಮ ಸಂಪೂರ್ಣವಾಗಿ ಮಹಿಳೆಯರಿಗೆ ಕೆಡಕನ್ನುಂಟು ಮಾಡಿದೆ ಎಂದು ಹೇಳಲಾಗುವುದಿಲ್ಲ ಏಕೆಂದರೆ ಬದಲಾಗುತ್ತಿರುವ ಮೌಲ್ಯಗಳನ್ನು ಕೂಡ ಇವು ಚಿತ್ರಿಸಿವೆ. ಅವುಗಳಲ್ಲಿ ಪ್ರಮುಖವಾದುದು, ಮಹಿಳೆಯನ್ನು ಗೃಹಿಣಿಯಾಗಿ ಮತ್ತು ದುಡಿಯುವ ಮಹಿಳೆಯಾಗಿ ಆಕೆಗೊಂದು ಬೇರೆ ವ್ಯಕ್ತಿತ್ವವನ್ನು ಜಾಹಿರಾತುಗಳಲ್ಲಿ ಗುರುತಿಸಲಾಗುವುದು. ಉದಾಹರಣೆಗೆ : ಇಂದು ಮನೆಕೆಲಸದಲ್ಲಿ ಲಿಂಗಬೇಧ

ಮಾಡುವುದಿಲ್ಲ ಎನ್ನುವುದರಲ್ಲಿ surf excel ಜಾಹಿರಾತು ಒಂದು ಮುಖ್ಯ ಉದಾಹರಣೆಯಾಗಿದೆ. ಬಟ್ಟೆ ಸಾಬೂನು ಪುಡಿಯ ಮಹತ್ವವನ್ನು ಮುಂಬೈನಂತಹ ಮಹಾನಗರಗಳಲ್ಲಿ ಒಬ್ಬ ಪುರುಷ ಇನ್ನೊಬ್ಬನಿಗೆ ಹೇಳುವುದು. ಇಲ್ಲಿ ಬಟ್ಟೆ ಒಗೆಯುವುದನ್ನು ಒಬ್ಬ ಪುರುಷ ಚಿತ್ರಣ, ಜಾಹಿರಾತುಗಳಲ್ಲಾಗುತ್ತಿರುವುದು ಬದಲಾವಣೆಗಳ ಸಂಕೇತ. ಈ ರೀತಿಯ ಬದಲಾವಣೆ ಇತರ ಜಾಹಿರಾತುಗಳಲ್ಲಿ ಆಗಬೇಕಾಗಿದೆ.

ಮಕ್ಕಳಲ್ಲಿ ಅದರಲ್ಲೂ ಹೆಣ್ಣು ಮಕ್ಕಳಿಗೆ ವಿರುದ್ಧವಾದ ಜಾಹಿರಾತು ಮೈ ಬಣ್ಣವನ್ನು ಕಪ್ಪಿನಿಂದ ಬಿಳಿ ಬಣ್ಣಕ್ಕೆ ಬದಲಾಯಿಸುವ ಕ್ರೀಮ್‌ಗಳು ಪ್ರಮುಖವಾದುವು. ಇಲ್ಲಿ ಹೆಣ್ಣು ಮಕ್ಕಳಿಗೆ ವಿವಾಹವಾಗಬೇಕಾದರೆ ಅವರ ಮೈ ಬಣ್ಣ ಮುಖ್ಯ ಎಂಬ ಪರಿಕಲ್ಪನೆಯನ್ನು ಜಾಹಿರಾತುಗಳು ಸುಮಾರು ಎರಡು ದಶಕಗಳಿಂದ ಹುಟ್ಟು ಹಾಕಿದ್ದು ಇಂದಿಗೂ ಚಾಲ್ತಿಯಲ್ಲಿದೆ. ಇದರಿಂದ ಹೆಣ್ಣು ಮಕ್ಕಳು ಆತ್ಮಸ್ಥೈರ್ಯವನ್ನು ಕಳೆದು ಕೊಳ್ಳುವ ಪರಿಸ್ಥಿತಿಯುಂಟಾಗಿದೆ. ಅಂದರೆ ವಿವಾಹಕ್ಕೆ ಮೈ ಬಣ್ಣ ಮುಖ್ಯ ಎಂಬ ವಾದವನ್ನು ಹೆಣ್ಣು ಮಕ್ಕಳು ನಂಬಿದ್ದಾರೆ. ಆಧುನಿಕ ಯುಗದಲ್ಲಿ ಅನೇಕ ಸಾಹಸಮಯ ಕೆಲಸಗಳನ್ನು ಮಾಡುತ್ತಿರುವ ಅವಳಿಗೆ ಹಳೇ ಜಾಡಿನ ವಿಷಯಗಳಿಂದ ಆಕೆಯ ವ್ಯಕ್ತಿತ್ವವನ್ನು ಕುಂಠಿಸುವ ಪ್ರಯತ್ನ ಇದಾಗಿದೆ. ಮಾಧ್ಯಮಗಳಲ್ಲಿ ಮಹಿಳೆಯರ ದುರ್ಬಳಕೆಯನ್ನು ನಿಗ್ರಹಿಸಲು ಕೇಂದ್ರ ಸರ್ಕಾರದ The Indescent Representation of Women (prohibition) Act 1986. ಮಸೂದೆ ಇದ್ದರೂ ಕೂಡ ಇವನ್ನು ಮನರಂಜನೆಯ ಹೆಸರಿನಲ್ಲಿ ಉಲ್ಲಂಘಿಸಲಾಗುತ್ತಿದೆ.

ಜಾಹಿರಾತುಗಳು ಪತ್ರಿಕೆಗಳಲ್ಲಿ ಬರಲಿ, ದೂರದರ್ಶನದಲ್ಲಿ ಬರಲಿ, ಹೆಣ್ಣನ್ನು ನೋಡುವ ದೃಷ್ಟಿ ತುಂಬ ಭಿನ್ನವಾಗಿದೆ. ಇಲ್ಲಿ ಬೀಡಿ, ಸಿಗರೇಟಿನ ಜಾಹಿರಾತಿಗೂ ಅರೆಬೆತ್ತಲೆ ಹೆಣ್ಣು ಬೇಕು. ಸ್ಕೂಟರ್, ಮೋಟಾರ್ ಬೈಕ್‌ಗಳಂತೂ ಹೆಣ್ಣು ಹಿಂದು ಕುಳಿತುಕೊಳ್ಳದಿದ್ದರೆ ಬೈಕ್ ಮುಂದಕ್ಕೆ ಹೋಗುವುದೇ ಇಲ್ಲ. ಇತ್ತೀಚೆಗೆ ಮಾತ್ರ ಕೆಲವರು ಹೆಣ್ಣಿಗೆ ಸ್ವತಂತ್ರವಾಗಿ ಡ್ರೈವ್ ಮಾಡುವ ಅವಕಾಶ ಕೊಡುವಷ್ಟು ಮುಂದುವರೆದಿದ್ದಾರೆ. ಸೋಪಿನ ಜಾಹಿರಾತುಗಳಲ್ಲಿ ಸೋಪುಗಳು ಮಹಿಳೆಯರ ಮೈಯನಲ್ಲದೆ ಪುರುಷರ ಮೈಯನ್ನು ಮುಟ್ಟುವುದು ವಿರಳವಾಗಿದೆ. ಅಂದರೆ ಸಮಾಜದಲ್ಲಿರುವ ವ್ಯಾಪಾರಿ ದೃಷ್ಟಿಕೋನ ಸಮೂಹ ಮಾಧ್ಯಮಗಳ ಜಾಹಿರಾತುಗಳಲ್ಲಿ ಸಂಕೇತಿಸಲ್ಪಟ್ಟಿದೆ. ಜಾಹಿರಾತಿನ ಕಡೆಗಳಲ್ಲೆಲ್ಲಾ ಹೆಣ್ಣನ್ನು ಕೇಂದ್ರವಾಗಿಟ್ಟುಕೊಂಡು ವ್ಯಾಪಾರಿ ಮನೋಭಾವ ಹೆಚ್ಚಾಗುತ್ತವೆ. ಜಾಹಿರಾತುಗಳಲ್ಲಿ ಹೆಣ್ಣನ್ನು ಪರೋಕ್ಷವಾಗಿ ಶೋಷಣೆ ಮಾಡುತ್ತಿರುವುದೇ ಅಲ್ಲದೆ ಸಮಾಜದಲ್ಲಿ ಅವರ ಸ್ಥಾನಮಾನ ಕೆಳಮಟ್ಟಕ್ಕೆ ಕೊಂಡೊಯ್ಯುವಲ್ಲಿ ಪ್ರಬಲತೆಯನ್ನು ಸಾಧಿಸುತ್ತಿದೆ.

ಮಹಿಳೆ ಮತ್ತು ಪತ್ರಿಕೋದ್ಯಮ

ಮಹಿಳೆ ಇರದ ಕ್ಷೇತ್ರವೇ ವಿರಳವಾಗಿರವ ಈ ಆಧುವಿಕ ವಿಜ್ಞಾನ ಮತ್ತು ತಂತ್ರಜ್ಞಾನ ಯುಗದಲ್ಲಿ ಪತ್ರಿಕೋದ್ಯಮ ವೃತ್ತಿಗೆ ಮಹಿಳೆಯರು ಪ್ರವೇಶ ಹೊಸದಲ್ಲ. ಕಳೆದ ಒಂದು ಶತಮಾನದಿಂದಲೂ ಮಹಿಳೆಯರು ಪತ್ರಿಕಾರಂಗದಲ್ಲಿ ದುಡಿಯುತ್ತಿದ್ದಾರೆ. ಮಹಿಳೆಯರ ಒಡನಾಟ ಕೇವಲ ಅಡಿಗೆ ಮನೆಗೆ ಮಾತ್ರ ಸೀಮಿತವಾಗಿದ್ದ ಕಾಲದಲ್ಲಿ ೧೯ನೆಯ ಶತಮಾನದ ಆದಿಯಲ್ಲೇ ಭಾರತದಲ್ಲಿ ಪತ್ರಿಕಾರಂಗಕ್ಕೆ ಮಹಿಳೆಯರು ಕಾಲಿಟ್ಟಿದ್ದು. ಮಹಿಳಾ ಸಬಲೀಕರಣದ ಮೊದಲ ಹೆಜ್ಜೆ.

ಮುಖ್ಯವಾಗಿ ಮಾಧ್ಯಮಗಳಲ್ಲಿ ಮಹಿಳೆಯರ ಸ್ಥಾನ ಇನ್ನೂ ತೃಪ್ತಿಕರವಾಗಿಲ್ಲ. ಅವರು ದ್ವಿತೀಯ ದರ್ಜೆಯ ವ್ಯಕ್ತಿಗಳಾಗಿಯೇ ಇದ್ದಾರೆ ಎಂಬ ಕೂಗು ಕೇಳಿಬರುತ್ತಿರವ ಇಂದಿನ ದಿನಗಳಲ್ಲಿ ಮಹಿಳಾ ಪತ್ರಿಕೋದ್ಯಮ ಒಂದು ಸವಾಲಾಗಿದೆ. ಈ ಮಾಧ್ಯಮದಲ್ಲಿ ಹೆಣ್ಣು ಮಕ್ಕಳು ಗಂಡೆದೆಯ ಹೆಣ್ಣಾಗಿ ಕೆಲಸ ಮಾಡುತ್ತಿರುವ ಅನೇಕ ನಿರ್ದೇಶನಗಳನ್ನು ಕಾಣಬಹುದಾಗಿದೆ. ಹಿಂದೆ ಕನ್ನಡ ಪತ್ರಿಕಾರಂಗದಲ್ಲಿ ಯಶಸ್ವಿಯಾಗಿರುವ ಮಹಿಳೆಯರು ಬೆರಳೆಣಿಕೆಯಷ್ಟು. ಮುಖ್ಯವಾಗಿ ಪತ್ರಿಕೋದ್ಯಮದಲ್ಲಿ ಪದವಿಯನ್ನು ಪಡೆದ ಕರ್ನಾಟಕದ ಪ್ರಥಮ ಮಹಿಳೆ ನಾಗಮಣಿ. ಅನಂತರ ಆರ್. ಪೂರ್ಣಿಮಾ. ಇವರ ಸೇವೆ ಗಮನಾರ್ಹವಾದುದಾಗಿದೆ.

ಮುಖ್ಯವಾಗಿ ಮಹಿಳೆ ಪತ್ರಿಕೆಗಳು ಹುಟ್ಟಲು ಅಥವಾ ಬೆಳೆಯಲು ಕಾರಣವೇನೆಂದರೆ ಹಿಂದೆ ಮಹಿಳಾ ಸುದ್ದಿ ಪತ್ರಿಕೆಗಳಲ್ಲಿ ಯಾವ ಆದ್ಯತೆ ನೀಡಲಾಗುತ್ತಿರಲಿಲ್ಲ. ಅದು ಅಪರಾಧ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿತ್ತು. ಇವರ ಹೋರಾಟ ಹಾಗೂ ನಾಯಕಿಯರ ಸುದ್ದಿಗೆ ಪತ್ರಿಗಳಲ್ಲಿ ಆದ್ಯತೆ ಇರಲಿಲ್ಲ. ಆದರಲ್ಲೂ ಅವರ ಅಭಿಪ್ರಾಯ ವ್ಯಕ್ತಪಡಿಸಲು ಸಹ ಅವಕಾಶವಿರಲಿಲ್ಲ. ಈ ಒತ್ತಡಗಳ ಹಿನ್ನೆಲೆಯಲ್ಲಿ ಮಹಿಳಾ ಪತ್ರಿಕೆಗಳು ಹುಟ್ಟಲು ಕಾರಣವಾಯಿತು. ಸ್ವತಂತ್ರವಾಗಿ ತಮ್ಮ ನೋವು ನಲಿವನ್ನು, ಅಭಿಪ್ರಾಯ, ಧೋರಣೆ ಯನ್ನು ಮನೋಧರ್ಮವನ್ನು ಸಮಾಜದ ಮುಂದಿಡಲು ಮಹಿಳಾ ಪತ್ರಿಕೆಗಳು ಅವಕಾಶ ಮಾಡಿಕೊಟ್ಟವು. ಬದುಕಿನ ಕಷ್ಟಗಳನ್ನು ಇತರ ಮಹಿಳೆಯರೊಂದಿಗೆ ಹಂಚಿಕೊಳ್ಳಲು ಇವು ಪ್ರಬಲವಾದುವು. ಸ್ವಾತಂತ್ರ ಪೂರ್ವದಲ್ಲಿ ಬಂದ ಪತ್ರಿಕೆಗಳು ಹೆಚ್ಚಾಗಿ ಕಥೆ, ಕವನ ಹಾಗೂ ವಿಮರ್ಶೆಗೆ ಹೆಚ್ಚು ಆದ್ಯತೆ ನೀಡಿದವು. ಆದರೆ ಸ್ವಾತಂತ್ರ್ಯ ನಂತರ ಮಹಿಳಾ ಪತ್ರಿಕೆಗಳಲ್ಲಿ ಮಹಿಳಾ ವಿಷಯಗಳ ಚರ್ಚೆಗೆ ಮತ್ತು ಸಂವಾದಕ್ಕೆ ಆದ್ಯತೆ ಕಡಿಮೆಯಾಗಿ ಕಥೆ, ಕವನ, ಹಾಗೂ ಧಾರವಾಹಿಗಳ ಪ್ರಮುಖ ಮಾಧ್ಯಮವಾಯಿತು. ಎಂಬತ್ತರ ದಶಕದಲ್ಲಿ ಮಹಿಳಾ ಪತ್ರಿಕೆಗಳ ಮಹಾಪೂರವೇ ಹರಿಯಿತು. ಅನಂತರ ಈವ್ಸ್ ಇಂಡಿಯಾ, ನಾರಿ ಟುಡೆ, ವುಮನ್ಸ್ ಇರಾ, ನಾರಿ, ಕೂಬ್‌ಸೂರತ್, ಸ್ಯಾವಿ, ಸರಿತಾ, ಮೊದಲಾದ ನಿಯತಕಾಲಿಕೆಗಳು ಪ್ರಕಟಗೊಂಡವು. ಕನ್ನಡದಲ್ಲೂ ವನಿತಾ ಎನ್ನುವ ಬಹುಭಾಷಾ ಮಹಿಳಾ ಪತ್ರಿಕಾ ಸಮೂಹದ ಸಂಚಿಕೆ ಪ್ರಕಟಗೊಂಡಿತು. ತರುವಾಯ ಮಂಗಳ, ಗೃಹಶೋಭ ಪತ್ರಿಕೆಗಳು ಹೊರಬಂದವು.

ಸುಶಿಕ್ಷಿತ ಮಹಿಳೆಯರು ಕಡಿಮೆಯಿದ್ದ ೧೯ನೆಯ ಶತಮಾನದಲ್ಲಿ ಕವಿ ರವೀಂದ್ರನಾಥ ಠಾಕೂರ್ ಸಹೋದರಿ ಸ್ವರ್ಣದೇವಿ ಕುಮಾರಿ ಎನ್ನುವರು 'ಭಾಮಬಾದಿನಿ ಪತ್ರಿಕೆ' ನಡೆಸಿ ಭಾರತದಲ್ಲಿ ಪ್ರಥಮ ಮಹಿಳಾ ಸಂಪಾದಕಿ ಎನ್ನುವ ಕೀರ್ತಿಗೆ ಪಾತ್ರರಾದರು. ಸ್ವಾತಂತ್ರ್ಯ ಪೂರ್ವದಲ್ಲಿ ಪತ್ರಿಕೋದ್ಯಮ ಕ್ಷೇತ್ರವನ್ನು ಅವಲೋಕಿಸಿದಾಗ ಅಲ್ಲಿ ಕಾಣುವುದು ದೇಶ ಸೇವೆಗಾಗಿ ಮೀಸಲಿಟ್ಟ ಪತ್ರಿಕಾಧರ್ಮ. ಇದೇ ನಿಟ್ಟಿನಲ್ಲಿ ಅಂದು ಮಹಿಳಾ ಬರಹಗಾರ್ತಿಯರ ಉದ್ದೇಶ ಸ್ವಾತಂತ್ರ್ಯ ಚಳವಳಿ, ಸಮಾಜ ಸುಧಾರಣೆ, ಮಹಿಳೆಯರ ಉನ್ನತಿ, ವಿಧವಾವಿವಾಹ, ಸತಿಪದ್ಧತಿಯ ವಿರುದ್ಧ ಹಾಗೂ ಮಹಿಳೆಯ ಆರೋಗ್ಯ ಶಿಕ್ಷಣದಂತಹ ಸಮಾಜೋದ್ಧಾರಕ ಕಾರ್ಯಗಳಿಗೆ ಮಹಿಳೆಯರ ಪತ್ರಿಕೆಯನ್ನು ಪ್ರಬಲ ಅಸ್ತ್ರವಾಗಿ ಬಳಸಿಕೊಂಡರು. ಅಂದು ಮಹಿಳೆಯರ ಗುರಿ ದೇಶಸೇವೆಯ ಜೊತೆಗೆ ಪತ್ರಿಕೆಯನ್ನು ಸಾಮಾಜಿಕ ಮತ್ತು ರಾಜಕೀಯ ಪರಿವರ್ತನೆಗಳಿಗಾಗಿ ಸಮರ್ಥವಾಗಿ ಬಳಸಿಕೊಳ್ಳುವ ಸಾಮೂಹಿಕ ಪ್ರಯತ್ನ ಅವರದ್ದಾಗಿತ್ತು.

ಸಾಂಪ್ರದಾಯಿಕ ಕುಟುಂಬ ವರ್ಗದಲ್ಲಿ ಹುಟ್ಟಿ ಸಮಾಜದಲ್ಲಿ ಟೀಕೆ, ನಿಂದನೆಗಳಿಗೆ ಹೆದರದೆ ಪತ್ರಿಕೆಗಳನ್ನು ನಡೆಸುವ ಗತ್ತು, ಅದನ್ನು ಸಮಾಜ ಸುಧಾರಣೆಗೆ ಬಳಸಿಕೊಳ್ಳುವ ಛಲ, ಎದೆಗಾರಿಕೆ ಇದೆಲ್ಲವನ್ನೂ ನಮ್ಮ ಹಳೆಯ ತಲೆಮಾರಿನ ಮಹಿಳಾ ಪತ್ರಕರ್ತೆಯರು ತೋರಿಸಿದ್ದಾರೆ. ಅವರಲ್ಲಿ ಪ್ರಮುಖರು ಸರಳಾದೇವಿ, ಕುಮುದಿನಿ ಮಿತ್ತನ್, ಹರದೇವಿ, ಮದಾಂ.ಕೆ.ಆರ್. ಕಾಮ, ಶಾರದಾ ಮೆಹತಾ, ಕಮಲದಾಸ್‌ಗುಪ್ತಾ, ರಾಮೇಶ್ವರಿ ನೆಹರೂ, ಲೀಲಾರಾಯ್, ಅನಿಬೆಸೆಂಟ್, ಕಮಲಾದೇವಿ ಚಟ್ಟೋಪಾಧ್ಯಾಯ, ಅರುಣಾ ಅಸಫ್‌ಆಲಿ ಮತ್ತು ಮ್ಯಾಡಂ ಸೋಫಿಯಾ ವಾಡಿಯಾ ಪ್ರಮುಖರು. ಈ ದಿಟ್ಟ ಪತ್ರಕರ್ತೆಯರು ಮಹಿಳೆಯ ಪ್ರವೇಶಕ್ಕೆ ಭದ್ರ ಬುನಾದಿ ಹಾಕಿದರು. ಇವರ ಕೃಷಿಯ ಫಲ, ಸೃಜನಶೀಲತೆ, ಉತ್ತಮ ಭಾಷಾಶೈಲಿ ಮತ್ತು ಅಭಿರುಚಿ ಪತ್ರಿಕೋದ್ಯಮದಲ್ಲೂ ಬೆಳೆಯಲು ಅವಕಾಶವಾಯಿತು.

ಅನಂತರ ಭಾರತೀಯ ಪತ್ರಿಕಾರಂಗದಲ್ಲಿ ಉಚ್ಛ್ರಾಯ ಶ್ರೇಣಿಯಲ್ಲಿರುವ ಪ್ರಮುಖರಲ್ಲಿ ಚಿತ್ರಾ ಸುಬ್ರಮಣ್ಯಂರವರೂ ಒಬ್ಬರು. ಇವರು ರಾಜಕಾರಣಿಗಳನ್ನು ಮತ್ತು ಕೈಗಾರಿಕೋದ್ಯಮಿಗಳನ್ನು ಬಯಲಿಗೆಳೆದು ಸರಕಾರವನ್ನೇ ತಪ್ಪಿತಸ್ಥ ಸ್ಥಾನದಲ್ಲಿ ನಿಲ್ಲಿಸಿರುವ ಕೀರ್ತಿ ಇವರದು.

ಅನಂತರ ಪ್ರಜ್ಞಾಶೀಲ ಪತ್ರಕರ್ತೆ ಸುಚೇತಾ ದಲಾಲ್ ಇವರು ಹರ್ಷದ್ ಮೆಹ್ತಾ ಮತ್ತು ಹಿತನ್ ದಲಾಲ್ ಎಂಬುವರ ಶೇರುಪೇಟೆಯ ಅವ್ಯವಹಾರವನ್ನು ಬಹಿರಂಗ ಮಾಡಿ ಪತ್ರಿಕಾರಂಗದಲ್ಲೇ ಗಣ್ಯಸ್ಥಾನ ಪಡೆದಿದ್ದಾರೆ.

ಆಂಗ್ಲಾ ಭಾಷಾ ಪತ್ರಿಕೆಗಳಲ್ಲಿ ಕೆಲಸ ಮಾಡುವ ಪ್ರಮುಖರಲ್ಲಿ ಪುಷ್ಪಗಿರಿಮಾಜಿ ಯವರು ಪ್ರಮುಖರು. ಇವರು ರಾಷ್ಟ್ರ ಹೆಸರಾಂತ ಪತ್ರಿಕೆ ಇಂಡಿಯನ್ ಎಕ್ಸ್‌ಪ್ರೆಸ್ ನ ಪತ್ರಿಕಾ ಆವೃತ್ತದಲ್ಲಿ ವರದಿಗಾರರಾಗಿ ಬೆಂಗಳೂರಿನಲ್ಲಿ ಕೆಲಸಮಾಡಿ ಸಾಮಾಜಿಕ ಜವಾಬ್ದಾರಿ ಪತ್ರಿಕೆಗಳಿಗೂ ಇದೆ ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ.

ಆ ಕಾಲದಲ್ಲಿಯೇ ಮಹಿಳೆಯರು ಪತ್ರಿಕಾ ಮಾಧ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೆಂಬುದಕ್ಕೆ ಮೇಲೆ ತಿಳಿಸಿರುವ ಪತ್ರಕರ್ತೆಯರೇ ಸಾಕ್ಷಿಯಾಗಿದ್ದಾರೆ. ಅದೂ ಅಲ್ಲದೆ ವರದಿಗಾರಿಕೆ ಅತ್ಯಂತ ಜವಾಬ್ದಾರಿಯುತ ಕೆಲಸ ಎಂದು ಮಹಿಳಾ ಪತ್ರಕರ್ತೆಯರು ತಮ್ಮ ಕಾರ್ಯದ ಮೂಲಕ ಸಾಬೀತು ಪಡಿಸಿದ್ದಾರೆ. ಅಂತಹ ಪ್ರಮುಖ ಪತ್ರಕರ್ತೆ ಶೀಲಬರ್‌ಸೇಯವರು. ಇವರು ಅತ್ಯಂತ ಸಾಮಾಜಿಕ ಕಳಕಳಿ ಹೊಂದಿದ ಮಹಿಳೆ. ಶೋಷಿತ ಮಹಿಳೆಯರಷ್ಟೇ ಅತ್ಯಂತ ದುಸ್ತರ ಜೀವನ ನಡೆಸುತ್ತಿರುವ ಕಾರಾಗೃಹದಲ್ಲಿ ಬಂಧಿಸಲ್ಪಟ್ಟಿರುವ ಅಸಂಖ್ಯಾತ ಮಹಿಳೆಯರು. ಇವರ ಜೀವನ ತಮ್ಮ ಸುಧಾರಣೆಯನ್ನು ಗುರಿಯನ್ನಾಗಿ ಮಾಡಿಕೊಂಡು ಅವರ ಯಶಸ್ಸಿಗೆ ಕಾರಣರಾದರು.

ಪ್ರಗತಿಪರ ಧೋರಣೆ, ಧೈರ್ಯ ಹಾಗೂ ಸಾಹಸಕ್ಕೆ ಹೆಸರಾದ ಇನ್ನೊಬ್ಬ ಪತ್ರಕರ್ತೆ ತವಲೀನಸಿಂಗ್. ಈಕೆ ಹಿಂದೆ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಗೆ ಅಂಕಣ ಬರೆಯುತ್ತಿದ್ದು ಅನಂತರ ಇಂಡಿಯಾ ಟುಡೆ ಎಂಬ ವಾರ ಪತ್ರಿಕೆಯ ಅಂಕಣಕಾರ್ತೆಯಾಗಿದ್ದರು. ರಾಜಕೀಯ ಯುದ್ಧ ಮತ್ತು ಕೋಮುವಾದ ವಿಷಯಗಳಲ್ಲಿ ಅಪಾರ ಪರಿಣತಿ ಪಡೆದಿರುವ ಇವರು ವಿಶೇಷ ವರದಿಗಳಿಗೆ ಹೆಸರಾದವರು. ಮಹಿಳಾ ಪತ್ರಕರ್ತರ ಧೋರಣೆ, ಉತ್ಸಾಹ ಮತ್ತು ಅವರು ಈ ಕ್ಷೇತ್ರದಲ್ಲಿ ಆಯ್ದುಕೊಳ್ಳುವ ವಿಷಯಗಳು ಭಿನ್ನವಾದವು. ಯಾವ ವ್ಯಕ್ತಿಗೂ ಬಾಗದೇ ಧೈರ್ಯದಿಂದ ಪ್ರಶ್ನೆಗಳ ಪ್ರಹಾರದಿಂದ ರಾಜಕಾರಣಿಗಳನ್ನೇ ದಂಗು ಪಡಿಸಿರುವ ಪತ್ರಕರ್ತೆಯರಲ್ಲಿ ತವಲೀನ್‌ಸಿಂಗ್ ಒಬ್ಬರು.

ಅನಂತರದಲ್ಲಿ ಅನೇಕ ಪತ್ರಿಕೆಗಳು ಹೊರಬಂದವು, ಫೆಮಿನಾ, 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕಾ ಗುಂಪಿಗೆ ಸೇರಿದ ರಾಷ್ಟ್ರದಲ್ಲೇ ಪ್ರತಿಷ್ಠಿತ ಸ್ಥಾನ ಹೊಂದಿದ ಮಹಿಳಾ ಪತ್ರಿಕೆ. ಇದರ ಸಂಪಾದಕಿ ವಿಮಲಾ ಪಾಟೀಲ್. ಇವರು ಇದನ್ನು ಉತ್ತಮ ಪತ್ರಿಕೆಯನ್ನಾಗಿ ಮಾಡಲು ಶ್ರಮಿಸಿದರು. ಇದರ ಫಲವಾಗಿ ಈ ಪತ್ರಿಕೆ ನಗರೀಕರಣಗೊಂಡು ಮಹಿಳೆಯ ಜೀವನಾಡಿಯಾಯಿತು. ಇದರಲ್ಲಿ ಪಾಶ್ಚಾ ಉಡುಪು, ವೈವಿಧ್ಯ ಮತ್ತು ಸೌಂದರ್ಯದಂತಹ ವಿಷಯಗಳಿಗೆ ಆದ್ಯತೆ ದೊರೆಯಿತು. ಈ ಪತ್ರಿಕೆಯ ಮತ್ತೊಂದು ಆಸಕ್ತಿ ಗೃಹಾಲಂಕಾರ ಮತ್ತು ಅಡುಗೆ. ಇದು ಮಹಿಳಾ ಪತ್ರಿಕೆಗಳಲ್ಲಿ ಯಾವ ವಿಷಯಗಳಿಗೆ ಆದ್ಯತೆ ನೀಡಬೇಕು ಎನ್ನುವುದನ್ನು ನಿರ್ಧರಿಸಿ ಯೋಜನೆಗೆ ತಂದಿತು. ಅದರ ಪ್ರಕಾರ ಯಾವುದೇ ಮಹಿಳಾ ಪತ್ರಿಕೆ, ಮಹಿಳಾ ಸೌಂದರ್ಯ, ಗೃಹಾಲಂಕಾರ, ಅಡುಗೆ, ಮಕ್ಕಳ ಪಾಲನೆ, ಕಸೂತಿ, ಕಥೆ ಹಾಗೂ ಉಡುಗೆ ತೊಡುಗೆ ವಿಷಯಗಳಿಗೆ ಸೀಮಿತವಾಯಿತು. ಅಲ್ಲದೆ ವೈದ್ಯಕೀಯ ಅಂಕಣ, ಗುಪ್ತಸಮಾಲೋಚನೆ, ವೈಯಕ್ತಿಕ ವಿಷಯಗಳನ್ನು ಪತ್ರಮುಖೇನ ಉತ್ತರ ಪಡೆಯಲು ಈ ಪತ್ರಿಕೆ ದಾರಿ ಮಾಡಿಕೊಟ್ಟಿತು.

ವಿವಾಹ ಜಾಹಿರಾತು ಈಗ ದಿನಪತ್ರಿಕೆಗಳ ಅದರಲ್ಲೂ ಭಾನುವಾರದ ಸಂಚಿಕೆಗಳ ಮುಖ್ಯ ವಿಭಾಗ. ಇದನ್ನು ಮಹಿಳಾ ಪತ್ರಿಕೆಗೂ ತಂದದ್ದು ವುಮೆನ್ಸ್ ಇರಾ ಎನ್ನುವ

ಇನ್ನೊಂದು ಮಹಿಳಾ ಪತ್ರಿಕೆ. ಅದೇ ರೀತಿ ಇಂದಿನ ಪತ್ರಿಕೆಗಳಲ್ಲಿ ವೈದ್ಯಕೀಯ ಹಾಗೂ ಲೈಂಗಿಕ ವಿಷಯಗಳ ಅಂಕಣಗಳು ಎಲ್ಲಾ ಮಹಿಳಾ ಪತ್ರಿಕೆಗಳ ಶಾಶ್ವತ ಭಾಗವಾಗಿದೆ. ಇಂದಿನ ಪತ್ರಿಕೆಗಳ ಇನ್ನೊಂದು ಆಕರ್ಷಣೆ ಎಂದರೆ ಮಹಿಳಾ ಪತ್ರಿಕೆಗಳಲ್ಲಿ ಬರುವ ಜಾಹಿರಾತಿನ ಸಾಮಾಗ್ರಿ ಹಾಗೂ ಅವುಗಳ ಉಪಯೋಗಿಕರಣದ ವಿಷಯಗಳನ್ನು ಲೇಖನಗಳ ಮೂಲಕ ಮತ್ತು ಅತ್ಯಾಕರ್ಷಕ ಪುಟ ವಿನ್ಯಾಸದಿಂದ ಇಂದು ಬಳಕೆದಾರರ ಉತ್ಪಾದನೆಗಳನ್ನು ಮಾರಾಟ ಮಾಡುವ ವೇದಿಕೆಗಳಾಗಿ ಮಾರ್ಪಟ್ಟಿವೆ. ಅಲ್ಲದೆ ಸಮಾಜವನ್ನು ಕಿತ್ತು ತಿನ್ನುತ್ತಿರುವ ಹಾಗೂ ನಾಗರೀಕ ಸಮಾಜಕ್ಕೆ ಸವಾಲಾಗಿರುವ ಅನೇಕ ಮಹಿಳಾ ಸಮಸ್ಯೆಗಳಿಗೆ ಹಾಗೂ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸಲು ವೇದಿಕೆ ಆಗಬೇಕಿದ್ದ ಇದು ಮಹಿಳೆಯರ ಶೃಂಗಾರ ಸಾಧನಗಳಲ್ಲಿ ಒಂದಾಗಿರುವ ಮಹಿಳೆಯರ ಆಸಕ್ತಿಗೆ ಮೌಲ್ಯಗಳಿಗೆ ವಿರುದ್ಧವಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ, ವೈದ್ಯಕೀಯ ಹಾಗೂ ಕಾನೂನು ಕ್ಷೇತ್ರಗಳಲ್ಲಿ ಮಹಿಳೆಯರು ಅಪಾರವಾದ ಪ್ರಗತಿ ಸಾಧಿಸಿದ್ದರೂ ಅವರ ಸಾಧನೆಯ ಚಿತ್ರಣ ಪತ್ರಿಕೆಗಳಲ್ಲಿ ಇಂದು ಕಾಣುತ್ತಿಲ್ಲ. ಅನೇಕ ಇಂಗ್ಲಿಷ್ ಭಾಷಾ ದಿನಪತ್ರಿಕೆಗಳು ಮತ್ತು ಟಿವಿಯ ಜನಪ್ರಿಯತೆಯಿಂದಾಗಿ ಓದುಗರ ಪ್ರಮಾಣ ಕಡಿಮೆ ಆದಾಗ ಮುಖಪುಟದಲ್ಲಿ ಪ್ರತಿದಿನ ಕನಿಷ್ಠ ಉಡುಪು ತೊಟ್ಟ ವಿದೇಶಿ ಮಹಿಳೆಯ ಚಿತ್ರಗಳನ್ನು ಪ್ರಕಟಿಸಲು ಪ್ರಾರಂಭಿಸಿದರು. ಆದರೂ ಓದುಗರ ಕಟುಟೀಕೆಗೆ ಒಳಗಾಗಿ ನಿಲ್ಲಿಸಲಾಯಿತು. ಅಂದರೆ ಇಂದು ಪತ್ರಿಕಾ ದೃಷ್ಟಿಯಲ್ಲಿ ಮಹಿಳೆಯರನ್ನು ಅಲಂಕಾರಿಕ ವಸ್ತುಗಳ ರೀತಿಯಲ್ಲಿ ಬಳಸಲಾಗುತ್ತಿದೆ. ಇಂದಿನ ದಿನಗಳಲ್ಲಿ ಮಹಿಳೆಯ ಮೇಲಿನ ಹಿಂಸಾಚಾರದ ಪ್ರಮಾಣ ಹೆಚ್ಚಾಗುತ್ತಿದೆ. ಅದರಲ್ಲಿ ಮುಖ್ಯವಾಗಿ ಅವರ ಮೇಲೆ ಸಾಮೂಹಿಕ ಹಿಂಸೆ ಹೆಚ್ಚಿ, ಲೈಂಗಿಕ ಕಿರುಕುಳ, ಅಪ್ರಾಪ್ತ ವಯಸ್ಸಿನ ಬಾಲಕಿಯರ ಕಳ್ಳಸಾಗಾಣಿಕೆ, ಹೆಣ್ಣು ಭ್ರೂಣ ಹತ್ಯೆಯ ಪ್ರಮಾಣ ಹೆಚ್ಚಾಗುತ್ತಿದೆ. ಮಸೂದೆಯ ಪರಿಣಾಮ ಇದರ ಮೇಲೆ ಆಗಿಲ್ಲ. ಇಂತಹ ಪ್ರಮುಖ ವಿಚಾರಗಳನ್ನು ಮಾಧ್ಯಮಗಳು, ಮಹಿಳಾ ಸಂಘಟನೆಗಳ ಜೊತೆ ಸೇರಿ ಚರ್ಚಿಸಿ ಪ್ರಕಟಿಸಬೇಕಾಗಿದೆ.

ಒಟ್ಟಿನಲ್ಲಿ ಈ ಮಾಧ್ಯಮಗಳು ಮಹಿಳೆಯರಿಗೆ ವರವೂ ಹೌದು, ಶಾಪವೂ ಹೌದು ಎಂದು ಹೇಳಬಹುದು. ಇವು ಮಹಿಳೆಯರಿಗೆ ಸಂಪೂರ್ಣವಾಗಿ ಕೆಡಕನ್ನು ಉಂಟು ಮಾಡಿದೆ ಎನ್ನಲಾಗುವುದಿಲ್ಲ. ಏಕೆಂದರೆ ಮಹಿಳೆಯರಿಗೆ ಮಾಹಿತಿಯೇ ಅಧಿಕಾರ ಪಡೆಯಲು ಇರುವ ಪ್ರಬಲ ಅಸ್ತ್ರ. ಇದನ್ನು ಮಹಿಳೆಯರಿಗೆ ತಲುಪಿಸಲು ಮಾಧ್ಯಮಗಳ ಸಹಕಾರ ಅಗತ್ಯವಾಗಿದೆ. ಇಂದಿಗೂ ವರದಕ್ಷಿಣೆ ಹಿಂಸೆ, ಅತ್ಯಾಚಾರ, ಕೌಟುಂಬಿಕ ದಬ್ಬಾಳಿಕೆಗಳಂತಹ ಅಪರಾಧಗಳ ಪ್ರಮಾಣದಲ್ಲಿ ಇಳಿಮುಖವಾಗಿಲ್ಲ. ಈ ನಿಟ್ಟಿನಲ್ಲಿ ಮಾಧ್ಯಮಗಳು ಮಹಿಳಾಸಕ್ತಿ ವಿಷಯಗಳಿಗೆ ಸಮರ್ಪಕವಾದ ವೇದಿಕೆಯಾಗಿ ಕಾರ್ಯ ನಿರ್ವಹಿಸಬೇಕಾಗಿದೆ. ಮಾಧ್ಯಮಗಳು ಮಹಿಳಾಶಕ್ತಿಯ ದನಿಯಾದಾಗ ಮಾತ್ರ ಅವುಗಳ ಪ್ರಾಬಲ್ಯದ ಸಂಪೂರ್ಣ ಬಳಕೆಯಾಗಬಹುದು.

ಕನ್ನಡ ಭಾಷಾವಿಜ್ಞಾನ ಕ್ಷೇತ್ರಕ್ಕೆ ಪ್ರೊ. ಕೆ. ಕೆಂಪೇಗೌಡ ಅವರ ಕೊಡುಗೆ

– ಡಾ. ಆರ್. ರಾಮಕೃಷ್ಣ

೧

ಭಾಷಾವಿಜ್ಞಾನ ಕ್ಷೇತ್ರದಲ್ಲಿ ಪ್ರೊ. ಕೆ. ಕೆಂಪೇಗೌಡರು ಅಪರಿಚಿತರೇನಲ್ಲ. ಅವರು ಈಗಾಗಲೇ ಹಲವಾರು ಕೃತಿಗಳನ್ನು ಹೊರತಂದಿದ್ದಾರೆ. ಅನೇಕ ಸಂಪ್ರಬಂದಗಳನ್ನೂ ಲೇಖನಗಳನ್ನೂ ಪ್ರಕಟಿಸಿದ್ದಾರೆ. ಕನ್ನಡದಲ್ಲಿ ಮೊತ್ತ ಮೊದಲಿಗೆ 'ಭಾಷಾವಿಜ್ಞಾನ ಕೋಶ (೧೯೭೬)'ವನ್ನು ರಚಿಸಿ, ಭಾಷಾವಿಜ್ಞಾನ ಕ್ಷೇತ್ರ ಕನ್ನಡದಲ್ಲಿ ಬಹುಮುಖವಾಗಿ ಬೆಳೆಯಲು ಸುಭದ್ರ ತಳಪಾಯ ಹಾಕಿದ್ದಾರೆ. ಭಾಷಾವಿಜ್ಞಾನ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಹಾಗೂ ಕನ್ನಡದಲ್ಲಿ ಭಾಷಿಕ ಕೃತಿಗಳನ್ನು ರಚಿಸುವ ಅಥವಾ ಅನುವಾದಿಸುವ ಇಚ್ಛೆಯುಳ್ಳ ಲೇಖಕರಿಗೆ ಮತ್ತು ಅನುವಾದಕರಿಗೆ ಈ ಕೋಶ ಹೆಚ್ಚು ಉಪಯುಕ್ತವಾದುದು. ಪ್ರಸ್ತುತ ಕೋಶದಲ್ಲಿ ಭಾಷಾವಿಜ್ಞಾನಕ್ಕೆ ಸಂಬಂಧಿಸಿದ ಇಂಗ್ಲಿಷ್ ಶಬ್ದಗಳನ್ನು ಕಲೆಹಾಕಿ, ಅವನ್ನು ವ್ಯವಸ್ಥಿತ ರೀತಿಯಲ್ಲಿ ಅಳವಡಿಸಿ ಅವಕ್ಕೆ ಸಂವಾದಿಯಾದ ಕನ್ನಡ ಶಬ್ದಗಳನ್ನು ಕೊಡಲಾಗಿದೆ. ಸಂವಾದಿ ರೂಪವನ್ನು ಕೊಡುವಾಗ ಯುಕ್ತವೆಂದು ತೋರಿದ ಕಡೆ ಸಂಸ್ಕೃತ ಶಬ್ದಗಳನ್ನು ಸ್ವೀಕರಿಸಿ ಅವನ್ನು ಕನ್ನಡದ ಜಾಯಮಾನಕ್ಕೆ ಒಗ್ಗುವ ರೀತಿಯಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಹೀಗೆ ಮಾಡುವಲ್ಲಿ ಹಿಂದೀ ಭಾಷೆಯ ಪಾರಿಭಾಷಿಕ ಶಬ್ದಗಳ ನೆರವನ್ನೂ ಪಡೆದುಕೊಳ್ಳ ಲಾಗಿದೆ. ಈ ಕೋಶದಲ್ಲಿ ಅಲ್ಲಲ್ಲಿ ಸಾಮಾನ್ಯ ಕೋಶಕ್ಕೆ ಸಂಬಂಧಿಸಿದ ಹಲವಾರು ಶಬ್ದಗಳನ್ನು ಬಳಸಿಕೊಂಡಿರುವ ಅಂಶ ಕಂಡುಬರುತ್ತದೆ. ಆದರೂ ಅವು ಭಾಷಾವಿಜ್ಞಾನ ಕ್ಷೇತ್ರಕ್ಕೆ ಅಗತ್ಯ ಹಾಗೂ ಅನಿವಾರ್ಯವೆಂದು ತೋರಿದ ಕಾರಣದಿಂದಾಗಿ ಸಂದರ್ಭಕ್ಕೆ ತಕ್ಕಂತೆ ಸೇರಿಸಿಕೊಂಡು ಅವಕ್ಕೂ ಸಂವಾದಿಯಾದ ಕನ್ನಡಶಬ್ದವನ್ನು ಕೊಟ್ಟು ಉಳಿಸಿಕೊಳ್ಳ ಲಾಗಿದೆ. ಕೆಲವು ಸಂದರ್ಭಗಳಲ್ಲಿ, ಒಂದೊಂದು ಶಬ್ದಕ್ಕೆ ಒಂದಕ್ಕಿಂತ ಹೆಚ್ಚು ಶಬ್ದಗಳನ್ನು ಒಂದೇ ಅರ್ಥದಲ್ಲಿ ಬಳಸಿಕೊಳ್ಳಲಾಗಿದೆ. ಇದಕ್ಕೆ ಪ್ರಮುಖ

ಕಾರಣವೆಂದರೆ, ಅವೆಲ್ಲ ಬೇರೆ ಬೇರೆ ಭಾಷಾವಿಜ್ಞಾನ ಪಂಥಗಳ ಪ್ರಭಾವದಿಂದಾಗಿ, ಅವುಗಳ ಸಂವಾದಿಯಾಗಿ ಬಳಕೆಗೆ ಬರಬಲ್ಲ ಸಾಮರ್ಥ್ಯವನ್ನು ಪಡೆದಿರುವುದೇ ಆಗಿದೆ. ಕೆಲವು ಸಂದರ್ಭಗಳಲ್ಲಿ ಅಗತ್ಯತೆ ಹಾಗೂ ಅನಿವಾರ್ಯತೆಗಳ ದೃಷ್ಟಿಯಿಂದ ಕನ್ನಡದಲ್ಲಿ ಅವುಗಳ ಸಾಂದರ್ಭಿಕ ಅರ್ಥವನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. 'ಈ ಕೋಶ ಸಮಗ್ರವೂ ಅನ್ಯೂನವೂ ಆದ್ದದೆಂದು ನಾನು ಭಾವಿಸಿಲ್ಲ. ಇದಕ್ಕೆ ಇದರದೇ ಆದ ಇತಿಮಿತಿಗಳಿವೆ' ಎಂಬುದಾಗಿ ಲೇಖಕರು ಹೇಳಿಕೊಂಡಿದ್ದಾರೆ.

ಕೆಂಪೇಗೌಡರ ಮಹತ್ವಾಕಾಂಕ್ಷೆಯ ಉದ್ಗ್ರಂಥ 'ಸಾಮಾನ್ಯ ಭಾಷಾವಿಜ್ಞಾನ' (೧೯೯೩, ೧೯೯೬) ಭಾಷೆ, ಭಾಷಾವಿಜ್ಞಾನ ಮತ್ತು ಉಪಭಾಷಾ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಎಲ್ಲ ವಿಚಾರಗಳನ್ನು ಪರಿಚಯಮಾಡಿಕೊಡುವ ಈ ಕೃತಿ ಕನ್ನಡ ಭಾಷಾ ವಿಜ್ಞಾನ ಕ್ಷೇತ್ರದಲ್ಲಿ ಒಂದು ಪ್ರಧಾನ ಗುರುತಾಗಿ ಉಳಿಯುವಂಥದು. ಇಂಗ್ಲಿಷಿನ ಉತ್ತಮ ಗ್ರಂಥಗಳನ್ನು ಅಧ್ಯಯನ ಮಾಡಿ, ವಿಷಯಗಳನ್ನು ಅರಗಿಸಿಕೊಂಡು ಅವುಗಳ ಸಾರವನ್ನು ಕನ್ನಡಕ್ಕೆ ಭಟ್ಟಿ ಇಳಿಸಿ, ಸಾಧ್ಯವಾದ ಕಡೆಯಲ್ಲೆಲ್ಲ ಕನ್ನಡದ ಉದಾಹರಣೆಗಳ ಮೂಲಕ ವಿಷಯವನ್ನು ಸ್ಪಷ್ಟಪಡಿಸಲು ಲೇಖಕರು ಯತ್ನಿಸಿದ್ದಾರೆ. ಭಾಷಾವಿಜ್ಞಾನ ವಿಷಯವನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಇದೊಂದು ಅಮೂಲ್ಯ ಆಕರ ಗ್ರಂಥ. ಭಾಷಿಕ ವಿಚಾರಗಳನ್ನು ಪರಿಚಯ ಮಾಡಿಕೊಳ್ಳಬೇಕೆಂಬುವವರಿಗೆ ಸುಲಭವಾಗಿ ಸರಳವಾಗಿ ಈ ಗ್ರಂಥ ಆ ವಿಷಯವನ್ನು ತಿಳಿಸಿಕೊಡುತ್ತದೆ. ಕನ್ನಡ ವಿದ್ಯಾರ್ಥಿಗೆ ಸಾಮಾನ್ಯ ಭಾಷಾವಿಜ್ಞಾನಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳೂ ಈ ಗ್ರಂಥದಲ್ಲಿ ಸಿಗುತ್ತದೆ.

೧೨೭೪ ಪುಟಗಳುದ್ದಕ್ಕೂ ಹರಡಿಕೊಂಡಿರುವ ಈ ಕೃತಿಯಲ್ಲಿ ಒಟ್ಟು ೭೭ ಅಧ್ಯಾಯಗಳಿವೆ ಎಂದರೆ ಆಶ್ಚರ್ಯವಾಗದಿರದು. ನಾಗರಿಕ ವ್ಯಕ್ತಿಯ ಎಲ್ಲ ಹಂತಗಳಲ್ಲಿ ಭಾಷೆ ಪ್ರಧಾನ ಪಾತ್ರ ವಹಿಸುತ್ತದೆ ಎಂಬ ವಿಚಾರ ಎಲ್ಲರಿಗೂ ತಿಳಿದುದೇ ಆಗಿದೆ. ಆದರೆ ಆ ಮಾತಿನ ಆಳ ಎಷ್ಟು ಎಂಬುದನ್ನು ಹೆಚ್ಚುಜನ ತಿಳಿದಿಲ್ಲ. ಕೆಂಪೇಗೌಡರು, ಭಾಷೆ ಎಂದರೇನು, ಭಾಷೆಯ ಸ್ವರೂಪ ಸ್ವಭಾವ, ಪ್ರಯೋಜನ, ಉಗಮ ಮತ್ತು ವಿಕಾಸ ಭಾಷೆಯ ವಿವಿಧ ರೂಪಗಳು. ಭಾಷೆ ಮತ್ತು ಬರಹ, ಭಾಷೆ ಮತ್ತು ಸಾಹಿತ್ಯ, ಭಾಷೆ, ಸಮಾಜ, ಸಂಸ್ಕೃತಿ ಮೊದಲಾದ ವಿಚಾರಗಳನ್ನು ಸವಿಸ್ತಾರವಾಗಿ ವಿವರಿಸಿದ್ದಾರೆ. ಭಾಷಾವರ್ಗೀಕರಣ, ಮೂಲತತ್ವಗಳು, ಭಾರತೀಯ ಭಾಷೆಗಳ ವರ್ಗೀಕರಣ, ಪ್ರತಿಯೊಂದೂ ವರ್ಗದ ವೈಶಿಷ್ಟ್ಯಗಳು. ಜಗತ್ತಿನ ಭಾಷಾಪರಿವಾರಗಳು ಮೊದಲಾದ ಮಾಹಿತಿಗಳನ್ನು ಒದಗಿಸಿದ್ದಾರೆ. ಇಂಥ ಮಾಹಿತಿಗಳನ್ನು ಕಲೆಹಾಕಲು ಲೇಖಕ ಪಡಬೇಕಾದ ಶ್ರಮ ಎಷ್ಟೆಂದು, ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವವರಿಗೇ ಗೊತ್ತು.

ಮುಂದಿನ ಅಧ್ಯಾಯಗಳಲ್ಲಿ ಭಾಷಾವಿಜ್ಞಾನದ ವಿವಿಧ ಮುಖಗಳನ್ನು ಪರಿಚಯಿಸಿ, ಈ ಕ್ಷೇತ್ರ ಕಲೆಯೋ ಅಥವಾ ವಿಜ್ಞಾನವೋ ಎಂದು ಚರ್ಚಿಸಿದ್ದಾರೆ. ಭಾಷಾವಿಜ್ಞಾನದ ಮಾನವಿಕಗಳಿಂದ ಸಾಮಾಜಿಕ ವಿಜ್ಞಾನದ ಕಡೆಗೆ ಸಾಗಿ ಅದು ಈಗ ಶುದ್ಧ ವಿಜ್ಞಾನದ

ಕಡೆಗೆ ಮುನ್ನಡೆಯುತ್ತಿದೆ.(ಪು. ೨೭೨) ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ. ಮುಂದೆ ಭಾಷಾವಿಜ್ಞಾನ ಕ್ಷೇತ್ರದ ವಿವಿಧ ವಿಭಾಗಗಳ ಪರಿಚಯವನ್ನು ವಿವಿಧ ಅಧ್ಯಾಯಗಳಲ್ಲಿ ಮಾಡಿಕೊಟ್ಟಿದ್ದಾರೆ. ಉಪಭಾಷಾವಿಜ್ಞಾನಕ್ಕೆ ಸಂಬಂಧಿಸಿದ ಒಂಭತ್ತು ಅಧ್ಯಾಯಗಳಿವೆ. (ಪು ೩೫೩-೪೬೪), ವಿವರಣಾತ್ಮಕ, ಐತಿಹಾಸಿಕ ಮತ್ತು ತೌಲನಿಕ ಭಾಷಾವಿಜ್ಞಾನಗಳು, ಅವುಗಳ ಪರಸ್ಪರ ಸಂಬಂಧ (೪೬೫-೪೮೦), ಧ್ವನಿ ವಿಜ್ಞಾನ ಮತ್ತು ಧ್ವನಿಮಾವಿಜ್ಞಾನ (ಪು. ೪೮೧-೭೩೭). ಆಕೃತಿಮಾವಿಜ್ಞಾನ (ಪು. ೭೩೮-೯೦೮) ವಾಕ್ಯವಿಜ್ಞಾನ (ಪು.೯೦೯-೯೭೪), ಅರ್ಥವಿಜ್ಞಾನ (ಪು. ೯೭೫-೯೯೧) ಅಧ್ಯಾಯಗಳು. ಸೈದ್ಧಾಂತಿಕ ವಿಚಾರಗಳನ್ನು ಸರಳವಾಗಿ ತಿಳಿಸಿಕೊಡುವುದರಲ್ಲಿ ಯಶಸ್ವಿಯಾಗಿವೆ. ಇವೇ ಅಲ್ಲದೆ ವ್ಯಾಕರಣಶಾಸ್ತ್ರ, ಶಬ್ದವಿಜ್ಞಾನ, ಕೋಶವಿಜ್ಞಾನ, ವ್ಯುತ್ಪತ್ತಿ ಶಾಸ್ತ್ರ, ಭಾಷಿಕಶೈಲಿವಿಜ್ಞಾನ, ವ್ಯಕ್ತಿ ಭಾಷಾವಿಜ್ಞಾನ ಅಧ್ಯಾಯಗಳು (ಪು. ೯೯೨-೧೦೭೬) ಭಾಷೆಗೆ ಸಂಬಂಧಿಸಿದ ಹಲವಾರು ಹೊಸ ವಿಚಾರಗಳನ್ನು ತಿಳಿಸಿಕೊಡಲಾಗುತ್ತವೆ. ಕ್ಷೇತ್ರಭಾಷಾವಿಜ್ಞಾನ ಒಂದು ಆಕರ್ಷಕ ಅಧ್ಯಾಯ. ಸಂಶೋಧಕನ ಅರ್ಹತೆ, ಉತ್ತಮ ವಕ್ತೃ, ಕ್ಷೇತ್ರದ ಮಹತ್ವ, ಕ್ಷೇತ್ರ ಕಾರ್ಯದ ಪ್ರಯೋಜನ ಮೊದಲಾದ ವಿಚಾರಗಳನ್ನು ಒಳಗೊಂಡಿರುವಂಥದು (ಪು. ೧೦೭೭-೧೦೯೧), ಐತಿಹಾಸಿಕ ಭಾಷಾವಿಜ್ಞಾನ ಕ್ಷೇತ್ರಕ್ಕೆ ಸೇರಿದ ಭಾಷಿಕ ಪರಿವರ್ತನೆ, ಧ್ವನಿ ಪರಿವರ್ತನೆ, ಅರ್ಥಪರಿವರ್ತನೆ, ಭಾಷಿಕ ಸ್ವೀಕರಣ, ಸಾದೃಶ್ಯ ಸೃಷ್ಟಿ, ಭಾಷಿಕ ಪುನರ್ರಚನೆ, ಭಾಷಾ ಕಾಲಕ್ರಮವಿಜ್ಞಾನ, ಲಿಪಿಯ ಹುಟ್ಟು ಮತ್ತು ಬೆಳವಣಿಗೆ (ಪು. ೧೦೯೨-೧೨೬೩) ಅಧ್ಯಾಯಗಳು ಭಾಷೆ ಬಗೆಗಿನ ಅನೇಕ ಮಾಹಿತಿಗಳನ್ನು ನೀಡುವಲ್ಲಿ ಯಶಸ್ವಿಯಾಗಿವೆ.

ಕೆಂಪೇಗೌಡರ 'ತೌಲನಿಕ ದ್ರಾವಿಡ ಭಾಷಾವಿಜ್ಞಾನ' ವೆಂಬ ಮತ್ತೊಂದು ಉದ್ಗ್ರಂಥ ೧೯೯೬ರಲ್ಲಿ ಪ್ರಕಟವಾಯಿತು. ೭೦೬ ಪುಟಗಳ ಈ ಗ್ರಂಥದಲ್ಲಿ ತೌಲನಿಕ ದ್ರಾವಿಡ ಭಾಷಾವಿಜ್ಞಾನ, ದ್ರಾವಿಡರು ಯಾರು? ದ್ರಾವಿಡ ಶಬ್ದದ ಪ್ರಾಚೀನತೆ ಮತ್ತು ನಿಷ್ಪತ್ತಿ, ದ್ರಾವಿಡ ಭಾಷೆಗಳ ವೈಶಿಷ್ಟ್ಯಗಳು, ದ್ರಾವಿಡ ಭಾಷೆಗಳು, ದ್ರಾವಿಡ ಭಾಷೆಗಳ ವರ್ಗೀಕರಣ, ದ್ರಾವಿಡ ಧ್ವನಿಮಾಗಳು, ದ್ರಾವಿಡ ನಾಮಪದಗಳು, ಲಿಂಗ ಮತ್ತು ವಚನ ವ್ಯವಸ್ಥೆ, ಸರ್ವನಾಮಗಳು, ದ್ರಾವಿಡ ಭಾಷೆಗಳಲ್ಲಿ ಆಗಮಗಳು, ವಿಭಕ್ತಿ ಪ್ರತ್ಯಯಗಳು, ಸಂಖ್ಯಾವಾಚಕಗಳು, ಗುಣವಾಚಕಗಳು, ದ್ರಾವಿಡ ಕ್ರಿಯಾಪದಗಳು, ಕಾಲವಾಚಕ ಪ್ರತ್ಯಯಗಳು, ದ್ರಾವಿಡ ನಿಷೇಧಾತ್ಮಕ ಪ್ರತ್ಯಯಗಳು, ಸಾರ್ವನಾಮಿಕ ಪ್ರತ್ಯಯಗಳು, ದ್ರಾವಿಡ ಕ್ರಿಯಾರ್ಥಗಳು ಎಂಬ ೧೯ ಅಧ್ಯಾಯಗಳಿವೆ. ಪ್ರತಿಯೊಂದು ಅಧ್ಯಾಯವೂ ಆಯಾ ಅಧ್ಯಾಯಕ್ಕೆ ಸಂಬಂಧಿಸಿದ ವಿಚಾರಗಳನ್ನು ಕೂಲಂಕುಷವಾಗಿ ಚರ್ಚಿಸುವಂಥದು. ದ್ರಾವಿಡ ಭಾಷಗಳಲ್ಲಿಯ ನಾಮಪದ ಮತ್ತು ಕ್ರಿಯಾಪದಗಳ ಆಕೃತಿಮಾ ವಿಜ್ಞಾನ ವಿಚಾರಗಳನ್ನು ವಿಸ್ತೃತವಾಗಿ ವಿವೇಚಿಸಿರುವ ಕೃತಿಯಿದು. ಇಂಡೋ ಆರ್ಯನ್, ಆಸ್ಟ್ರಿಕ್, ಸಿನೋಟಿಬೆಟನ್, ಮೊದಲಾದ ಭಾಷಾವರ್ಗಗಳಿಗಿಂತ ದ್ರಾವಿಡಭಾಷಾವರ್ಗ ಹೇಗೆ ಬಿನ್ನವಾಗಿದೆ, ಏನೆಲ್ಲ ವೈಶಿಷ್ಟ್ಯಗಳನ್ನು ಪಡೆದುಕೊಂಡಿದೆ, ಮೊದಲಾದ ಸಂಗತಿಗಳನ್ನು

ಯುಕ್ತ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸುವ ತಾತ್ವಿಕ ಗ್ರಂಥವಿದು. ಈ ಗ್ರಂಥದ ಕೊನೆಯಲ್ಲಿ ಕೊಟ್ಟಿರುವ ಇಂಗ್ಲಿಷ್-ಕನ್ನಡ ಪದಸೂಚಿ (ಪು. ೬೩೧-೭೦೦) ಕೋಶ ವಿಜ್ಞಾನಿಗಳಿಗೆ ಹೆಚ್ಚು ಉಪಯುಕ್ತವಾದುದು.

ದ್ರಾವಿಡ ಭಾಷೆಗಳಲ್ಲಿ ನಾಮಪದ ಕ್ರಿಯಾಪದಗಳ ವರ್ಗೀಕರಣ ಸುಲಭವೇನಲ್ಲ. ಭಾಷಾವಿಜ್ಞಾನಿಗಳು ತಮ್ಮ ತಮ್ಮ ದೃಷ್ಟಿಕೋನಗಳಿಗೆ ಅನುಗುಣವಾಗಿ ಅವನ್ನು ವರ್ಗೀಕರಿಸಿದ್ದಾರೆ. ಪ್ರಸ್ತುತ ಕೃತಿಯಲ್ಲೂ ಅಂಥ ಒಂದು ಪ್ರಯತ್ನ ನಡೆದಿರುವುದನ್ನು ಕಾಣಬಹುದು. ನಾಮಪದಗಳನ್ನು ಪ್ರಧಾನವಾಗಿ ಸಾಮಾನ್ಯ ನಾಮಪದಗಳು ಮತ್ತು ಸಾಧಿತ ನಾಮಪದಗಳೆಂದು ವರ್ಗೀಕರಿಸಬಹುದು. ಅವನ್ನು ಮತ್ತೆ ಬೇರೆ ಬೇರೆ ಉಪವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾದ ಸಾಧ್ಯತೆಗಳಿವೆಯೆಂದು ಹೇಳಿ ಲೇಖಕರು ಆ ಉಪವರ್ಗಗಳನ್ನು ತಿಳಿಸಿಕೊಟ್ಟಿದ್ದಾರೆ. ಸಾಮಾನ್ಯ ನಾಮಪದಗಳಲ್ಲಿ ಮಾನವವಾಚಕ (human nouns), ವ್ಯಕ್ತಿವಾಚಕ, ಪುಲ್ಲಿಂಗ ವಾಚಕ, ಸ್ತ್ರೀಲಿಂಗ ವಾಚಕ, ವ್ಯಕ್ತಿಯೇತರ ವಾಚಕ, ಸಂಬಂಧವಾಚಕ, ಸಂಬಂಧೇತರ ವಾಚಕ, ಮಾನವೇತರ ವಾಚಕ (non-human nouns), ಅಂಕಿತನಾಮ, ರೂಢನಾಮ, ರಾಶಿವಾಚಕ, ವಿಶೇಷಣ ರಾಶಿವಾಚಕ, ವಿಶೇಷಣರಹಿತ ರಾಶಿವಾಚಕ, ಗಣನಾತ್ಮಕ, ಸ್ಥಳವಾಚಕ, ದಿಕ್ಸೂಚಕ, ಕಾಲವಾಚಕ, ದಿನವಾಚಕ, ಮಾಸವಾಚಕ, ವರ್ಷವಾಚಕ, ಸಂಖ್ಯಾವಾಚಕ, ಪೂರ್ಣಾಂಕ, ಅಪೂರ್ಣಾಂಕ, ಸಾಧಿತ ನಾಮಪದಗಳಲ್ಲಿ ಕ್ರಿಯಾಪದಗಳಿಂದ ನಿಷ್ಪನ್ನವಾದ ನಾಮಪದ ಗಳು, ವಿಶೇಷಣಗಳಿಂದ ನಿಷ್ಪನ್ನವಾದ ನಾಮಪದಗಳು, ಸರ್ವನಾಮಗಳಿಂದ ನಿಷ್ಪನ್ನವಾದ ನಾಮಪದಗಳು, ಸಂಖ್ಯಾವಾಚಕಗಳಿಂದ ನಿಷ್ಪನ್ನವಾದ ನಾಮಪದಗಳು ಮೊದಲಾಗಿ ವರ್ಗೀಕರಿಸಿರುವ ಪ್ರಯತ್ನವನ್ನು ಕಾಣಬಹುದು.

ಸರ್ವನಾಮಗಳಲ್ಲಿ ಉತ್ತಮಪುರುಷ ಏಕವಚನ, ಬಹುವಚನ, ಅಸಮಾವೇಶಕ, ಸಮಾವೇಶಕ, ಮಧ್ಯಮಪುರುಷ ಏಕವಚನ, ಬಹುವಚನ, ಆತ್ಮಾರ್ಥಕ ಏಕವಚನ, ಬಹುವಚನ, ಪ್ರಥಮ ಪುರುಷ ಏಕವಚನ, ಬಹುವಚನ ಪ್ರತ್ಯಯಗಳನ್ನು ಸೋದಾಹರಣ ವಾಗಿ ವಿವರಿಸಿದ್ದಾರೆ, ವಿಶ್ಲೇಷಿಸಿದ್ದಾರೆ. ಜೊತೆಗೆ ಮೂಲದ್ರಾವಿಡ ರೂಪವನ್ನೂ ಕೊಟ್ಟಿದ್ದಾರೆ. ತರುವಾಯ ಸಾಧಿತ ಸರ್ವನಾಮಗಳನ್ನು ದೂರವರ್ತಿ, ಸಮೀಪವರ್ತಿ, ಪ್ರಶ್ನಾರ್ಥಕ ಎಂಬುದಾಗಿ ವಿಭಜಿಸಿ ಯುಕ್ತ ಉದಾಹರಣೆಗಳೊಂದಿಗೆ ಸ್ಪಷ್ಟಪಡಿಸಿದ್ದಾರೆ.

ಸಂಖ್ಯಾವಾಚಕಗಳನ್ನು ಮೂಲಾಂಕಸೂಚಕ, ಕ್ರಮಾಂಕಸೂಚಕ, ಭಿನ್ನಾಂಶಸೂಚಕ ವೆಂದು ವರ್ಗೀಕರಿಸಲಾಗಿದೆ. ಉದಾಹರಣೆಗಳನ್ನು ನೀಡಲಾಗಿದೆ. ಪ್ರಾಕ್‌ರೂಪವನ್ನು ನಿರ್ಧರಿಸಲಾಗಿದೆ.

ಕ್ರಿಯಾಪದಗಳನ್ನು ಪೂರ್ಣಕಾಲಿಕ, ಅಪೂರ್ಣಕಾಲಿಕ ಎಂದು ಎರಡು ಪ್ರಮುಖ ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಲಾಗಿದೆ. ಧಾತು, ಏಕಾಕ್ಷರ, ದ್ವ್ಯಯಕ್ಷರ, ತ್ರಯಕ್ಷರ ಧಾತುಗಳು, ಸಕರ್ಮಕ, ಅಕರ್ಮಕ, ಪ್ರೇರಣಾರ್ಥಕ, ಸಹಾಯಕ ಕ್ರಿಯಾಪದ, ಸಂಯುಕ್ತ

ಕ್ರಿಯಾಪದ, ಮೊದಲಾದವನ್ನು ವ್ಯಾಖ್ಯಾನಿಸಲಾಗಿದೆ. ಮುಂದೆ ಕಾಲವಾಚಕ ಪ್ರತ್ಯಯಗಳು, ನಿಷೇಧಾತ್ಮಕ ಪ್ರತ್ಯಯಗಳಾವುವು ಎಂಬುದನ್ನು ವಿವರವಾಗಿ ತಿಳಿಸಿ ಕೊಡಲಾಗಿದೆ.

ದ್ರಾವಿಡ ಕ್ರಿಯಾರ್ಥಗಳು ಎಂಬುದು ವಿಶಿಷ್ಟವಾದ ಹಾಗೂ ಮುಖ್ಯವಾದ ಅಧ್ಯಾಯ. ಆಜ್ಞಾರ್ಥಕ, ನಿಷೇಧಾತ್ಮಕ, ಅನುಮತಿ ಬೋಧಕಾರ್ಥ, ಇಚ್ಛಾರ್ಥಕ, ಪ್ರೇರಕಾರ್ಥಕ, ವಿವರಣಾತ್ಮಕ, ನಿಶ್ಚಯಾತ್ಮಕ, ಅಪರಿಮಿತ ಕ್ರಿಯಾರ್ಥಗಳು, ಸಂಕೇತಾರ್ಥಕ, ಸ್ಥಿತ್ಯಾರ್ಥಕ ಮೊದಲಾದ ಪ್ರತ್ಯಯಗಳನ್ನು ವಿವಿಧ ದ್ರಾವಿಡ ಭಾಷೆಗಳಿಗನುಸಾರವಾಗಿ ವಿವರಿಸಲಾಗಿದೆ.

ಒಟ್ಟಿನಲ್ಲಿ ದ್ರಾವಿಡ ಭಾಷೆಗಳಲ್ಲಿ ಕಾಣಿಸಿಕೊಳ್ಳುವ ವ್ಯಾಕರಣ ವಿಚಾರಗಳನ್ನು ತೌಲನಿಕವಾಗಿ ಅಭ್ಯಸಿಸಿರುವ ಸ್ತುತ್ಯರ್ಹ ಪ್ರಯತ್ನ ಈ ಗ್ರಂಥದಲ್ಲಿ ನಡೆದಿದೆ.

೪೪೬ ಪುಟಗಳಲ್ಲಿ ಕನ್ನಡ ಭಾಷೆಯ ಇತಿಹಾಸವನ್ನು ನಿರೂಪಿಸುವ. ಮತ್ತೊಂದು ಕೃತಿ 'ಕನ್ನಡ ಭಾಷಾ ಚರಿತ್ರೆ (೧೯೯೪). ಭಾಷೆ ಚಿರಪರಿವರ್ತನಶೀಲ ಗುಣವನ್ನು ಪಡೆದಿರುವಂಥದು. ಇದು ಕಾಲದಿಂದ ಕಾಲಕ್ಕೆ, ಸ್ಥಳದಿಂದ ಸ್ಥಳಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತಿರುತ್ತದೆ. ಇದು ಜೀವಂತ ಭಾಷೆಯ ಪ್ರಮುಖ ಲಕ್ಷಣ. ಭಾಷೆ ಬದಲಾಗದಿದ್ದರೆ ಪ್ರಪಂಚದಲ್ಲಿ ಅನೇಕ ಭಾಷೆಗಳು ಉಗಮಗೊಂಡು ವಿಕಾಸಗೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಕನ್ನಡ ಭಾಷೆಯೂ ಈ ವಿಚಾರಕ್ಕೆ ಹೊರತೇನಲ್ಲ. ಪ್ರಾಚೀನ ಕಾಲದಿಂದಲೂ, ಕನ್ನಡವು ಹಂತ ಹಂತವಾಗಿ ಪರಿವರ್ತನೆ ಪಡೆದು, ಇಂದಿನ ದಿನಗಳಲ್ಲಿ ಹಲವಾರು ಪ್ರಾದೇಶಿಕ ಮತ್ತು ಸಾಮಾಜಿಕ ಉಪಭಾಷೆಗಳನ್ನು ಹೊಂದಿದೆ. ಹೀಗೆ ಬೆಳೆದು ಬಂದ ಬಗೆಯನ್ನು ತಿಳಿಸಿಕೊಡುವ ಪ್ರಯತ್ನವನ್ನು ಪ್ರಸ್ತುತ ಪುಸ್ತಕದಲ್ಲಿ ಮಾಡಲಾಗಿದೆ. ಇದರಲ್ಲಿ ಆರು ಅಧ್ಯಾಯಗಳಿವೆ. 'ಭಾಷೆಯ ಗುರಿ ಮತ್ತು ವ್ಯಾಪ್ತಿ (ಪು. ೧ - ೨೦) ಅಧ್ಯಾಯದಲ್ಲಿ ಭಾಷೆಯ ಸ್ವರೂಪ, ಲಕ್ಷಣ ಮತ್ತು ಪ್ರಯೋಜನಗಳನ್ನು ತಿಳಿಸಲಾಗಿದೆ. 'ಭಾರತೀಯ ಭಾಷೆಗಳಲ್ಲಿ ದ್ರಾವಿಡ ಭಾಷೆಗಳು' (ಪು. ೨೧-೭೭) ಎಂಬುದು ಎರಡನೆಯ ಅಧ್ಯಾಯ. ಇದರಲ್ಲಿ ಇಂಡೋ ಆರ್ಯನ್, ದ್ರಾವಿಡ, ಆಸ್ಟ್ರಿಕ್, ಟಿಬೇಟೋ ಬರ್ಮನ್ ಮತ್ತು ಅವರ್ಗೀಕೃತ ಭಾಷೆಗಳ ವೈಶಿಷ್ಟ್ಯಗಳನ್ನು ಹೇಳಲಾಗಿದೆ. ಮೂರನೆಯ ಅಧ್ಯಾಯವಾದ 'ಕನ್ನಡ ಭಾಷೆ' (ಪು. ೭೮-೧೬೪)ಯಲ್ಲಿ ಕನ್ನಡ ಭಾಷೆಯ ಪ್ರಾಚೀನತೆ, ಅವಸ್ಥಾಭೇದಗಳು, ಕನ್ನಡ ಲಿಪಿಯ ಸ್ವರೂಪ, ಕನ್ನಡ ಸಂಸ್ಕೃತ ಪ್ರಾಕೃತ ಮತ್ತಿತರ ಭಾಷೆಗಳ ಸಂಬಂಧ, ಕನ್ನಡ ಶಬ್ದಕೋಶ, ಭಾಷಾ ಪ್ರಭೇದಗಳನ್ನು ಕುರಿತಾದ ಮಾಹಿತಿಯಿದೆ.

'ಕನ್ನಡ ವ್ಯಾಕರಣ ಪರಂಪರೆ' (ಪು. ೧೬೫-೨೨೫) ಎಂಬುದು ನಾಲ್ಕನೆಯ ಅಧ್ಯಾಯ ಕವಿರಾಜಮಾರ್ಗ, ಕರ್ಣಾಟಕ ಭಾಷಾಭೂಷಣ ಮತ್ತು ಕಾವ್ಯಾವಲೋಕನ, ಶಬ್ದಮಣಿ ದರ್ಪಣಂ, ಕರ್ಣಾಟಕ ಶಬ್ದಾನುಶಾಸನ, ಹೊಸಗನ್ನಡ ವ್ಯಾಕರಣಗಳು, ಕನ್ನಡ ವ್ಯಾಕರಣಗಳ ಮೇಲೆ ಸಂಸ್ಕೃತ ವ್ಯಾಕರಣಗಳ ಪ್ರಭಾವ ಮೊದಲಾದ ವಿಚಾರಗಳು ಈ ಅಧ್ಯಾಯದಲ್ಲಿ ಅಭಿವ್ಯಕ್ತಿಗೊಂಡಿವೆ.

ಪ್ರಸ್ತುತ ಕೃತಿಯ ಪ್ರಮುಖ ಅಧ್ಯಾಯಗಳಾಗಿ ಕಾಣಿಸಿಕೊಂಡಿವೆ ಐದು ಮತ್ತು ಆರನೆಯ ಅಧ್ಯಾಯಗಳು. 'ಕನ್ನಡ ವರ್ಣಗಳ ಬೆಳವಣಿಗೆ (ಪ್ರ. ೨೨೬ - ೨೫೯) ಐದನೆಯ ಅಧ್ಯಾಯ. ಸ್ವರ, ವ್ಯಂಜನ, ಗುಣಿತಾಕ್ಷರ ಮೊದಲಾದ ವರ್ಣಗಳ ಬೆಳವಣಿಗೆ ಕುರಿತು ವಿಚಾರ ಮಾಡಿರುವಂಥದು. ಆರನೆಯ ಅಧ್ಯಾಯವಾದ 'ಕನ್ನಡ ಪದಗಳ ಬೆಳವಣಿಗೆ' (ಪು. ೨೬೦-೪೪೧) ಎಂಬುದು ಸಾಕಷ್ಟು ದೀರ್ಘವಾದುದು. ಇದರಲ್ಲಿ ನಾಮಪದ, ಲಿಂಗ-ವಚನ ವಿಭಕ್ತಿ ವ್ಯವಸ್ಥೆ, ವಿಭಕ್ತಿ ಪಲ್ಲಟ, ಆಗಮಗಳು, ಸಾಧಿತ ನಾಮಪದಗಳು, ಸರ್ವನಾಮ, ಸಂಖ್ಯಾವಾಚಕ, ಗುಣವಾಚಕ, ಸಮಾಸ ಪದಗಳು, ಕ್ರಿಯಾಪದಗಳು ಹಾಗೂ ಅವ್ಯಯಗಳನ್ನು ಕುರಿತಾದ ವಿಸ್ತೃತ ವಿವೇಚನೆಯಿದೆ.

ಕನ್ನಡ ಭಾಷೆ ಐತಿಹಾಸಿಕವಾಗಿ ಯಾವ ರೀತಿಯಲ್ಲಿ ಬೆಳೆದು ಬಂದು ತನ್ನ ಅಸ್ತಿತ್ವವನ್ನು ವೈಶಿಷ್ಟ್ಯಗಳನ್ನು ಸಂಪಾದಿಸಿಕೊಂಡಿದೆ ಎಂಬ ವಿಚಾರವನ್ನು ಸೊಗಸಾಗಿ ಸರಳವಾಗಿ ತಿಳಿಸಿಕೊಡುವ ಪುಸ್ತಕವಿದು.

ಕೆಂಪೇಗೌಡರ 'ಕನ್ನಡ ಭಾಷಾಸ್ವರೂಪ' (೧೯೯೭) ಎಂಬುದು ಹೆಸರೇ ಸೂಚಿಸುವಂತೆ, ಕನ್ನಡ ಭಾಷೆಯ ಸ್ವರೂಪವನ್ನು ಹಿಡಿದಿಡಲು ಪ್ರಯತ್ನಿಸಿರುವ ಪುಸ್ತಕ. ವಿಶ್ವವಿದ್ಯಾಲಯ ಧನಸಹಾಯ ಆಯೋಗದ ವತಿಯಿಂದ ವಿಶ್ವವಿದ್ಯಾಲಯ ಮಟ್ಟದ ಪಠ್ಯ ಪುಸ್ತಕ ರಚಿಸುವ ಯೋಜನೆಯ ಅಡಿಯಲ್ಲಿ ರಚಿತವಾದ ಕೃತಿಯಿದು. ೨೧೩ ಪುಟಗಳ ವ್ಯಾಪ್ತಿಯುಳ್ಳ ಇದರಲ್ಲಿ ೧೮ ಅಧ್ಯಾಯಗಳಿವೆ. ಕನ್ನಡ ಭಾಷೆ, ಕನ್ನಡ ಧ್ವನಿಮಾ, ಆಕೃತಿಮಾಗಳ ಸ್ವರೂಪ, ಕನ್ನಡ ಸರ್ವನಾಮ, ಸಂಖ್ಯಾವಾಚಕ, ಲಿಂಗ-ವಚನ ವಿಭಕ್ತಿ ಪ್ರತ್ಯಯ, ಸಂಧಿ ಸಮಾಸ, ಗುಣವಾಚಕ, ಕ್ರಿಯಾಪದ, ಅವ್ಯಯ, ಕನ್ನಡ ವಾಕ್ಯಗಳ ಸ್ವರೂಪ, ರಚನೆ ಮತ್ತು ವಿಶ್ಲೇಷಣೆಗೆ ಸಂಬಂಧಿಸಿದಂತೆ ವಿಪುಲ ಮಾಹಿತಿ ಈ ಕೃತಿಯಲ್ಲುಂಟು. ಭಾಷಾವಿದ್ಯಾರ್ಥಿಗಳನ್ನು ಪ್ರಮುಖವಾಗಿ ಗಮನದಲ್ಲಿರಿಸಿಕೊಂಡು ಇದನ್ನು ರಚಿಸಲಾಗಿದೆ.

ಭಾಷಾವಿಜ್ಞಾನ ಕ್ಷೇತ್ರದಲ್ಲಿ ಗೌಡರಿಗೆ ಅತ್ಯಂತ ಪ್ರಿಯವಾದ ಕ್ಷೇತ್ರವೆಂದರೆ ಉಪಭಾಷಾವಿಜ್ಞಾನ ಕ್ಷೇತ್ರ. ಇದಕ್ಕೆ ಸಂಬಂಧಿಸಿದಂತೆ ಅನೇಕ ವರ್ಷಗಳ ಕಾಲ ಅವರು ರಾಜ್ಯದ ಒಳಗಡೆ ಮತ್ತು ಹೊರಗಡೆ ಕ್ಷೇತ್ರಕಾರ್ಯ ನಡೆಸಿ ವಿಪುಲ ಸಾಮಾಗ್ರಿಯನ್ನು ಕಲೆ ಹಾಕಿದ್ದರು. ಇದರ ಫಲವೇ ಅವರು ಹೊರತಂದಿರುವ 'ಕನ್ನಡ ಉಪಭಾಷೆಗಳ ಅಧ್ಯಯನ' ಎಂಬ ಬೃಹದ್ಗ್ರಂಥ (೨೦೦೨). ಕನ್ನಡ ಉಪಭಾಷೆಗಳನ್ನು ಕರಾವಳಿ ಕನ್ನಡ, ದಕ್ಷಿಣ ಕನ್ನಡದ ಕನ್ನಡ, ಉತ್ತರ ಕನ್ನಡ ಜಿಲ್ಲೆಯ ಕನ್ನಡ, ಒಳನಾಡ ಕನ್ನಡ (ಗುಲಬರ್ಗಾ, ಮೈಸೂರು, ಧಾರವಾಡ ಮೊದಲಾದ ಪ್ರಭೇದಗಳು) ಗಡಿನಾಡ ಕನ್ನಡ (ಮರಾಠಿ, ತೆಲುಗು, ತಮಿಳು, ಮಲಯಾಳ ಕೊಂಕಣಿ ಮಿಶ್ರಿತ ಕನ್ನಡ ಪ್ರಭೇದಗಳು), ಹೊರನಾಡ ಕನ್ನಡ (ಚೆನ್ನೈ, ದೆಹಲಿ, ಮುಂಬೈ, ಹೈದರಾಬಾದ್, ಮದುರೈ ಕನ್ನಡ ಪ್ರಬೇಧಗಳು) ವೆಂದು ವರ್ಗೀಕರಿಸಿಕೊಂಡು ಅಭ್ಯಸಿಸಲಾಗಿದೆ. ಉಪಭಾಷಾವಿಜ್ಞಾನ ಕ್ಷೇತ್ರಕ್ಕೆ ಇದೊಂದು ಅಪೂರ್ವ ಕೊಡುಗೆ.

ಈವರೆಗೆ ಪ್ರಸ್ತಾಪಿಸಿದ ಪುಸ್ತಕಗಳೇ ಅಲ್ಲದೆ ಹಲವಾರು ಕಿರುಪುಸ್ತಕಗಳನ್ನೂ ಕೆಂಪೇಗೌಡರು ಹೊರತಂದಿದ್ದಾರೆ. ಅಲ್ಲದೆ ಅನೇಕ ಸಂಪ್ರಬಂಧಗಳನ್ನೂ ಲೇಖನಗಳನ್ನೂ ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಬರೆದು ಪ್ರಕಟಿಸಿದ್ದಾರೆ. ಇವೆಲ್ಲವನ್ನೂ ಪರಿಚಯಿಸಲು ಇಲ್ಲಿ ಸಾಧ್ಯವಿಲ್ಲ. ಒಂದು ಅಂದಾಜಿನಂತೆ ಅವಲ ಲೇಖನಗಳ ಸಂಖ್ಯೆ ನೂರೈವತ್ತನ್ನು ದಾಟಿವೆ!

೨

ಇಷ್ಟೆಲ್ಲ ಸಾಧನೆ ಮಾಡಿರುವ ಕಂಪೇಗೌಡರ ಜನನ, ವಿದ್ಯಾಭ್ಯಾಸ, ವೃತ್ತಿ ಮೊದಲಾದ ವಿಚಾರಗಳ ಬಗ್ಗೆ ಕುತೂಹಲ ಮೂಡುವುದು ಸಹಜ, ಕೆಂಪೇಗೌಡರು ೧೯೩೯ ಆಗಸ್ಟ್ ೧೫ ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕು ಬ್ಯಾಡರಹಳ್ಳಿ ಎಂಬ ಕುಗ್ರಾಮದಲ್ಲಿ ಜನಿಸಿದರು. ತಾಯಿ ನಿಂಗಮ್ಮ ತಂದೆ ಕೆಂಪೇಗೌಡ, ಹುಟ್ಟಿದ ಗ್ರಾಮದಲ್ಲಿಯೇ ಪ್ರಾಥಮಿಕ ಶಿಕ್ಷಣ ಮುಗಿಸಿದರು. ಮಾಧ್ಯಮಿಕ ಶಿಕ್ಷಣವನ್ನು ಶೆಟ್ಟಿಹಳ್ಳಿಯಲ್ಲಿ ಪಡೆದರು. ಚನ್ನಪಟ್ಟಣದಲ್ಲಿ ಹೈಯರ್ ಸೆಕೆಂಡರಿ ಶಿಕ್ಷಣ ಪಡೆದ ತರುವಾಯ, ಮೈಸೂರಿನ ಯುವರಾಜ ಮತ್ತು ಮಹಾರಾಜ ಕಾಲೇಜುಗಳಲ್ಲಿ ಕಾಲೇಜು ಶಿಕ್ಷಣವನ್ನು ಮುಂದುವರಿಸಿ ೧೯೬೧ರಲ್ಲಿ ಬಿ.ಎ. ಪದವಿ ಗಳಿಸಿದರು. ೧೯೬೩ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ. ಹಿಂದಿ ಪದವಿ ಪಡೆದ ಬಳಿಕ, ಪುಣೆಯ ಡೆಕನ್ ಕಾಲೇಜಿನಲ್ಲಿ ಶಿಕ್ಷಣ ಪಡೆದು ಭಾಷಾವಿಜ್ಞಾನ ವಿಷಯದಲ್ಲಿ ಎಂ.ಎಂ. ಪದವಿ ಗಳಿಸಿದರು (೧೯೬೫).

೧೯೬೫ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಕನ್ನಡ ವಿಭಾಗದಲ್ಲಿ ಕ್ಷೇತ್ರಕಾರ್ಯಕ್ಕೆ ಹಂಗಾಮಿ ಸಂಶೋಧನಾ ಸಹಾಯಕರಾಗಿ ಸೇರಿ, ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ ಗೌಡರು, ಅನಂತರದ ದಿನಗಳಲ್ಲಿ ಮಹಾರಾಜ ಕಾಲೇಜಿನಲ್ಲಿ ಭಾಷಾವಿಜ್ಞಾನ ಅಧ್ಯಾಪಕರಾದರು. ೧೯೭೦ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಭಾಷಾವಿಜ್ಞಾನ ವಿಭಾಗದ ಅಧ್ಯಾಪಕರಾಗಿ ಸೇರಿದ ಇವರು ತಮ್ಮ ಬೋಧನೆ ಜೊತೆಗೆ ಸಂಶೋಧನೆ ಕೈಗೊಂಡು, ಡಾ. ಹಾ. ಮಾ. ನಾಯಕರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ 'A Descriptive Analysis of Irula Dialect' ಎಂಬ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ ೧೯೭೪ ರಲ್ಲಿ ಪಿಎಚ್.ಡಿ. ಪದವಿ ಗಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಭಾಷಾವಿಜ್ಞಾನ ವಿಷಯದಲ್ಲಿ ಪಿಎಚ್.ಡಿ. ಪದವಿ ಗಳಿಸಿದವರಲ್ಲಿ ಅವರೇ ಮೊದಲಿಗರು. ೧೯೮೦ರಲ್ಲಿ ರೀಡರ್ ಹುದ್ದೆಗೆ ಆಯ್ಕೆಯಾದ ಗೌಡರು ೧೯೮೮ರಲ್ಲಿ ಪ್ರಾಧ್ಯಾಪಕರಾಗಿ ಬಡ್ತಿ ಬಡೆದರು. ೧೯೯೫-೯೭ರ ವರೆಗೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು. ಸ್ವಲ್ಪಕಾಲ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಭಾಷಾವಿಜ್ಞಾನ ಕ್ಷೇತ್ರದಲ್ಲಿ ಪ್ರೊ. ಕೆಂಪೇಗೌಡರು ತ್ರಿವಿಕ್ರಮ ವ್ಯಕ್ತಿ. ಬರಹ, ಬೋಧನೆ ಅವರ ಜೀವನದ ಉಸಿರು. ನಿರಂತರ ಅಧ್ಯಯನ ಶೀಲ ವ್ಯಕ್ತಿಯಾದ, ಗೌಡರಿಗೆ, ಭಾಷಾವಿಜ್ಞಾನ ಸಂಬಂಧಿ ಬರೆಹ ಒಂದು ತಪಸ್ಸಿನಂತೆ. ಅವರ 'ಸಾಮಾನ್ಯ ಭಾಷಾವಿಜ್ಞಾನ' ಎಂಬ ಮಹಾಪ್ರಬಂಧಕ್ಕೆ ೧೯೯೫ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಡಿ.ಲಿಟ್. ಪದವಿ ನೀಡಿದೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಭಾಷಾವಿಜ್ಞಾನ ವಿಷಯದಲ್ಲಿ ಡಿ.ಲಿಟ್. ಪದವಿ ಅವರೊಬ್ಬರಿಗೆ ಮಾತ್ರ ಸಂದಿರುವುದು ಸಂತೋಷದ ಹಾಗೂ ಹೆಮ್ಮೆಯ ಸಂಗತಿ.

ಡಾ. ಕೆಂಪೇಗೌಡ ಅವರು ಕೇರಳ ರಾಜ್ಯದ ಅಂತಾರಾಷ್ಟ್ರೀಯ ದ್ರಾವಿಡ ಸಂಘ, ದ್ರಾವಿಡ ಭಾಷಾವಿಜ್ಞಾನ ಸಂಘ, ಪುಣೆಯ ಭಾರತೀಯ ಭಾಷಾವಿಜ್ಞಾನ ಸಂಘಗಳ ಸದಸ್ಯರಾಗಿದ್ದು, ದ್ರಾವಿಡ ಭಾಷಾವಿಜ್ಞಾನ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ರಾಷ್ಟ್ರೀಯ, ಅಂತಾರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಹಲವಾರು ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿ ಸಂಪ್ರಬಂಧಗಳನ್ನು ಮಂಡಿಸಿದ್ದಾರೆ. ದಕ್ಷಿಣ ಭಾರತದ ಅನೇಕ ವಿಶ್ವವಿದ್ಯಾನಿಲಯಗಳ ಭಾಷಾವಿಜ್ಞಾನ ಮತ್ತು ಕನ್ನಡ ಸ್ನಾತಕೋತ್ತರ ಪರೀಕ್ಷಾ ಪತ್ರಿಕೆಗಳ ಪರೀಕ್ಷಕರಾಗಿ, ಪರೀಕ್ಷಾ ಮಂಡಳಿ ಸದಸ್ಯರಾಗಿ, ಅಧ್ಯಯನ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಭಾಷಾವಿಜ್ಞಾನ ಅಧ್ಯಯನ ಮಂಡಳಿ ಹಾಗೂ ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ವಿಶ್ವವಿದ್ಯಾನಿಲಯ ಸೆನೆಟ್, ಅಕಾಡೆಮಿಕ್ ಕೌನ್ಸಿಲ್, ಸಿಂಡಿಕೇಟ್ ಸದಸ್ಯರಾಗಿ ದುಡಿದಿದ್ದಾರೆ. ಕಲಾ ನಿಕಾಯದ ಡೀನ್ ಆಗಿ ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಶೈಕ್ಷಣಿಕ ಸಿಬ್ಬಂದಿ ಕಾಲೇಜಿನಲ್ಲಿ ಅಧ್ಯಾಪಕರಿಗೆ ಹಲವಾರು ಉಪನ್ಯಾಸಗಳನ್ನು ನೀಡಿದ್ದಾರೆ. ೨೦೦೦-೨೦೦೨ರ ಅವಧಿಯಲ್ಲಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಎಮಿರಿಟಸ್ ಪ್ರೊಫೆಸರ್ ಆಗಿ ನೇಮಕಗೊಂಡು ಸೇವೆ ಸಲ್ಲಿಸಿದ್ದಾರೆ. ಹಲವಾರು ದೇಶೀಯ ಹಾಗೂ ವಿದೇಶೀಯ ವಿದ್ಯಾರ್ಥಿಗಳು ಇವರ ಮಾರ್ಗದರ್ಶನದಲ್ಲಿ ಪಿಎಚ್.ಡಿ.ಪದವಿ ಗಳಿಸಿದ್ದಾರೆ.

ಪ್ರೊ. ಕೆಂಪೇಗೌಡರು ಸರಳಜೀವಿ, ನಿಗರ್ವಿ, ನಿಷ್ಕಪಟಿ. ಜೀವನದುದ್ದಕ್ಕೂ ಸ್ವಾಭಿಮಾನಿಯಾಗಿ ಬಾಳುತ್ತಾ ಬಂದವರು. ಉದಾರವ್ಯಕ್ತಿತ್ವ ಅವರದು. ವಿದ್ಯಾರ್ಥಿಗಳನ್ನು ಕಂಡರೆ ಅವರಿಗೆ ಅಪಾರ ಅಕ್ಕರೆ. ಕನ್ನಡ ಭಾಷಾ ವಿಜ್ಞಾನ ಕ್ಷೇತ್ರಕ್ಕೆ ಉನ್ನತಿಯನ್ನು ಯೋಗ್ಯ ಸ್ಥಾನಮಾನವನ್ನು ದೊರಕಿಸಿಕೊಡುವುದೇ ಅವರ ಧ್ಯೇಯ. ಕಳೆದ ಮೂರೂವರೆ ದಶಕಗಳಿಂದ ಅವರು ಕಲಿಯುವ ಕಲಿಸುತ್ತಿರುವ ವಿಷಯವೆಲ್ಲ ಭಾಷಾವಿಜ್ಞಾನವೇ ಆಗಿದೆ. ಅವರ ತಲೆಯಲ್ಲಿ ಭಾಷಾವಿಜ್ಞಾನಕ್ಕೆ ಸಂಬಂಧಿಸಿದ ವಿಚಾರಗಳೇ ಸದಾ ಸುಳಿಯುತ್ತಿರುತ್ತವೆ. ಮುಂದಿನ ದಿನಗಳಲ್ಲಿ 'ಭಾರತೀಯ ಭಾಷೆ ಮತ್ತು ಸಾಹಿತ್ಯ' ಎಂಬ ಹೆಬ್ಬೊತ್ತಿಗೆಯನ್ನು ಹೊರತರುವ ಸನ್ನಾಹದಲ್ಲಿದ್ದಾರೆ.

ಭಾರತದ ರಾಷ್ಟ್ರೀಯ ಹೋರಾಟ : ಹೊಸಬೆಳಕು

– ಡಾ. ಕೆ. ವಿಶ್ವನಾಥ್

ಭಾರತದ ರಾಷ್ಟ್ರೀಯ ಹೋರಾಟ ಆಧುನಿಕ ವಿಶ್ವದ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಮೊದಲು ಸಶಸ್ತ್ರದಂಗೆಗಳ ರೂಪದಲ್ಲಿ ಬ್ರಿಟಿಷರ ವಿರುದ್ಧ ಪ್ರಾರಂಭವಾದ ಈ ಹೋರಾಟ ಭಾರತದ ಸ್ವಾತಂತ್ರ್ಯ ಘೋಷಣೆಯೊಂದಿಗೆ ಅಂತ್ಯಗೊಂಡಿತು. ತನ್ನ ಆರಂಭದಕಾಲದಲ್ಲಿ ಹಿಂಸಾತ್ಮಕವಾಗಿದ್ದ ಅದು ಕೊನೆಗೆ ಅಹಿಂಸಾತ್ಮಕ ಜನತಾ ಆಂದೋಲನದ ರೂಪತಾಳಿ ಭಾರತವನ್ನು ಬ್ರಿಟಿಷ್ ವಸಾಹುತ ಶಾಹಿ ಮತ್ತು ಸಾಮ್ರಾಜ್ಯಶಾಹಿ ದಾಸ್ಯ ಮತ್ತು ಶೋಷಣೆಗಳಿಂದ ಮುಕ್ತಗೊಳಿಸುವುದ ರೊಂದಿಗೆ ಕೊನೆಗಂಡಿತು. ೧೯ನೇ ಶತಮಾನದ ಅಂತ್ಯದಲ್ಲಿ ಟಿಪ್ಪು ಸುಲ್ತಾನನ ಬ್ರಿಟಿಷ್ ವಿರೋಧಿ ಹೋರಾಟದೊಂದಿಗೆ ಪ್ರಾರಂಭವಾದ ಭಾರತದ ಸ್ವಾತಂತ್ರ್ಯ ಹೋರಾಟ ೧೯ನೇ ಶತಮಾನದಲ್ಲಿ ನಾನಾ ರೂಪಗಳನ್ನು ತಾಳಿ ೨೦ನೇ ಶತಮಾನದ ಮೊದಲಾರ್ಧದಲ್ಲಿ ಭಾರತವನ್ನು ಸ್ವತಂತ್ರ ಗೊಳಿಸುವುದರಲ್ಲಿ ಯಶಸ್ವಿಯಾಯಿತು. ಪ್ರಸ್ತುತ ಲೇಖನದಲ್ಲಿ ಭಾರತದ ರಾಷ್ಟ್ರೀಯ ಹೋರಾಟದ ವಿವಿಧ ಮುಖಗಳನ್ನು ಪರಿಚಯಿಸುವ ಪ್ರಯತ್ನ ಮಾಡಲಾಗಿದೆ.

ಭಾರತದ ಇತಿಹಾಸದಲ್ಲಿ ಮೇರುಸ್ಥಾನವನ್ನು ಪಡೆದಿರುವ ಭಾರತ ರಾಷ್ಟ್ರೀಯ ಹೋರಾಟವನ್ನು ವೈವಿಧ್ಯಾಮಯವಾಗಿ ಚಿತ್ರಿಸು ವಿಪುಲ ಸಾಹಿತ್ಯ ರಚನೆಯಾಗಿದ್ದು ಈ ಹೋರಾಟವನ್ನು ನಾನಾ ದೃಷ್ಟಿಕೋನಗಳಿಂದ ಅಧ್ಯಯನ ಮಾಡಲಾಗಿದೆ. ಭಾರತದ ರಾಷ್ಟ್ರೀಯ ಹೋರಾಟವನ್ನು ಮೊತ್ತಮೊದಲು ಅಧ್ಯಯನ ಮಾಡಲು ಪ್ರಯತ್ನಿಸಿದ ಬ್ರಿಟಿಷ್ ಅಧಿಕಾರಿಗಳು ಮತ್ತು ಆಡಳಿತಗಾರರು ತಮ್ಮ ಬರಹಗಳಲ್ಲಿ ಭಾರತದಲ್ಲಿ ಬ್ರಿಟಿಷರ ಆಡಳಿತವನ್ನು ಸಮರ್ಥಿಸಿ ಇಲ್ಲಿನ ರಾಷ್ಟ್ರೀಯ ಹೋರಾಟವನ್ನು ಬ್ರಿಟಿಷರ ವಿರುದ್ಧ ಅತೃಪ್ತರು ನಡೆಸಿದ ದಂಗೆಗಳು ಎಂದು ವರ್ಣಿಸಿದ್ದಾರೆ. ೧೮೫೭ರ ಸಶಸ್ತ್ರ ಹೋರಾಟವನ್ನು 'ಸಿಪಾಯಿದಂಗೆ' ಎಂದು ಸಮರ್ಥಿಸುವುದರ ಮೂಲಕ ಈ ಪ್ರಯತ್ನ ಮುಂದುವರೆಯಿತು.

ಬ್ರಿಟಿಷ್ ಬರಹಗಾರರ ಈ ರೀತಿಯ ಚಿಂತನೆಯನ್ನು ತೀವ್ರವಾಗಿ ವಿರೋದಿಸಿದ ರಾಷ್ಟ್ರೀಯವಾದಿ ಲೇಖಕರು ಭಾರತ ಬ್ರಿಟಿಷರ ವಿರುದ್ಧ ನಡೆಸಿದ ಸುದೀರ್ಘ ಹೋರಾಟ

ವನ್ನು "ರಾಷ್ಟ್ರೀಯ ಚಳವಳಿ" ಎಂದು ಪ್ರತಿಪಾದಿಸುವ ಪ್ರಯತ್ನವನ್ನು ತಮ್ಮ ಬರವಣಿಗೆಗಳಲ್ಲಿ ಮಾಡಿದರು. ೧೮೫೭ರ ಸಶಸ್ತ್ರ ಹೋರಾಟವನ್ನು 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಎಂದು ಪ್ರತಿಪಾದಿಸುವ ವಿನಾಯಕ ದಾಮೋದರ ಸಾವರ್ಕರ್ ಅವರ ಗ್ರಂಥದೊಂದಿಗೆ ಆರಂಭವಾದ ಈ ರಾಷ್ಟ್ರೀಯವಾದಿ ಸಾಹಿತ್ಯ ಅನೇಕ ದೇಶೀಯ ಲೇಖಕರಿಂದ ಮುಂದುವರೆಸಲ್ಪಟ್ಟಿತು.

ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿ ಬರಹಗಾರರು ಮತ್ತು ರಾಷ್ಟ್ರೀಯವಾದಿ ಲೇಖಕರಿಂದ ಭಿನ್ನವಾಗಿದ್ದು ಕಾರ್ಲ್‌ಮಾರ್ಕ್ಸ್‌ನ ಸಮಾಜವಾದ- ಸಮತಾವಾದಗಳಿಂದ ಪ್ರಭಾವಿತವಾದ ಮತ್ತೊಂದು ಗುಂಪಿನ ಲೇಖಕನರು ಭಾರತದ ರಾಷ್ಟ್ರೀಯ ಹೋರಾಟವನ್ನು 'ಮೇಲ್ವರ್ಗದ ಬುದ್ಧಿಜೀವಿಗಳ ಚಳವಳಿ'ಎಂದು ಗುರುತಿಸಲ್ಪಟ್ಟಿದ್ದನ್ನು ಅಲ್ಲಗಳೆದು ಅದರಲ್ಲಿ ಶ್ರಮಜೀವಿಗಳ ಪಾತ್ರವನ್ನು ನಿರ್ಧರಿಸುವ ಪ್ರಯತ್ನ ನಡೆಸಿದರು. ಮಾರ್ಕ್ಸ್‌ವಾದದಿಂದ ಪ್ರಭಾವಿತರಾಗಿದ್ದ ಈ ಬರಹಗಾರರು ಭಾರತದ ರಾಷ್ಟ್ರೀಯ ಹೋರಾಟದಲ್ಲಿ ಸಮಾಜದ ಕೆಳಸ್ತರಕ್ಕೆ ಸೇರಿದ್ದ ಬುಡಕಟ್ಟುವರ್ಗಗಳು, ರೈತರು, ಕಾರ್ಮಿಕರು, ಮಹಿಳೆಯರು ಮತ್ತು ಹಿಂದುಳಿದ ವರ್ಗಗಳು ವಹಿಸಿದ ಪ್ರಮುಖ ಪಾತ್ರವನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡಿ ನಿರೂಪಿಸಿದರು. ಅವರ ಬರವಣಿಗೆಗಳಿಂದ ಭಾರತದ ರಾಷ್ಟ್ರೀಯ ಹೋರಾಟ ಕೇವಲ ವಿದ್ಯಾವಂತ ಬುದ್ಧಿಜೀವಿಗಳಿಂದ ಕೂಡಿದ್ದ ಮೇಲ್ವರ್ಗದ ಹೋರಾಟವಾಗದೆ ಸಮಾಜದ ಕೆಳಸ್ತರಕ್ಕೆ ಸೇರಿದ್ದ ವರ್ಗಗಳ ಹೋರಾಟವೂ ಆಗಿತ್ತು ಎಂದು ಸುಸ್ಪಷ್ಟವಾಯಿತು.

ಭಾರತದ ರಾಷ್ಟ್ರೀಯ ಹೋರಾಟ ಭಾರತರಾಷ್ಟ್ರೀಯ ಕಾಂಗ್ರೆಸ್ಸಿನ ಹೋರಾಟವಾಗಿದ್ದು ಅಖಿಲಭಾರತ ಕಾಂಗ್ರೆಸ್ಸಿನ ಹೋರಾಟವಾಗಿದ್ದು ಅಖಿಲಭಾರತ ಕಾಂಗ್ರೆಸ್ಸಿನ ಪ್ರಯತ್ನದಿಂದಲೇ ಭಾರತ ಬ್ರಿಟಿಷ್ ವಸಾಹತುಶಾಹಿಯಿಂದ ಸ್ವತಂತ್ರವಾಯಿತು ಎಂಬ ಚಿಂತನೆ ಪ್ರಮುಖ ಸ್ಥಾನವನ್ನು ಪಡೆಯಿತು. ಕಾಂಗ್ರೆಸ್ಸಿನ ನಾಯಕತ್ವವಹಿಸಿದ್ದ ಮಂದಗಾಮಿ ಮತ್ತು ತೀವ್ರಗಾಮಿಗಳು ನಡೆಸಿದ ಚಳವಳಿಗಳೊಂದಿಗೆ ಮಹಾತ್ಮ ಗಾಂಧೀಜಿಯವರು ನಡೆಸಿದ ಅಹಿಂಸಾತ್ಮಕ ಜನತಾ ಆಂದೋಲನ ಭಾರತಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಿತು ಎಂದೇ ಹೇಳಲಾಯಿತು. ಈ ಚಿಂತನೆ ಕಾಂಗ್ರೆಸ್ಸೇತರ ಚಳವಳಿಗಳು ಮತ್ತು ನಾಯಕರುಗಳು ರಾಷ್ಟ್ರೀಯ ಹೋರಾಟದಲ್ಲಿ ವಹಿಸಿದ ಪಾತ್ರವನ್ನು ನಗಣ್ಯಗೊಳಿಸುವುದರಲ್ಲಿ ಯಶಸ್ವಿಯಾಯಿತು. ಭಾರತದಲ್ಲಿ ಕಾಂಗ್ರೆಸ್ ಪಕ್ಷದ ಆಡಳಿತವನ್ನು ಸಮರ್ಥಿಸಲು ಈ ಚಿಂತನೆ ಸಹಾಯಕವಾಯಿತು.

ಭಾರತದ ರಾಷ್ಟ್ರೀಯ ಹೋರಾಟ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಮತ್ತು ಕಾಂಗ್ರೆಸ್ಸಿನ ಮುಂದಾಳುಗಳಾದ ಗೋಖಲೆ, ತಿಲಕ್, ಮಹಾತ್ಮಗಾಂಧಿ ಮುಂತಾದವರ ಹೋರಾಟ ಮಾತ್ರವಾಗದೆ ಕಾಂಗ್ರೆಸ್ಸೇತರ ಪಕ್ಷಗಳು ಹಾಗೂ ನಾಯಕರುಗಳು ನಡೆಸಿದ ಹೋರಾಟವೂ ಆಗಿತ್ತು. ಕಾಂಗ್ರೆಸ್‌ನಿಂದ ಭಿನ್ನ ಧೋರಣೆಯನ್ನು ಹೊಂದಿದ್ದ ಸ್ವರಾಜ್ ಪಕ್ಷ, ಕಾಂಗ್ರೆಸ್

ಸೋಷಲಿಸ್ಟ್ ಪಕ್ಷ ಮತ್ತು ಕಮ್ಯೂನಿಸ್ಟರು ಹಾಗೂ ಕಾಂಗ್ರೆಸ್ಸೇತರ ನಾಯಕರಾದ ಜಯಪ್ರಕಾಶ್ ನಾರಾಯಣ, ಎಂ.ಎನ್.ರಾಯ್ ಮತ್ತು ಸುಭಾಷ್‌ಚಂದ್ರಬೋಸ್ ಅವರು ರಾಷ್ಟ್ರೀಯ ಹೋರಾಟಜಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದ್ದುವೆಂಬುದು ಉಲ್ಲೇಖಾರ್ಹವಾದ ಅಂಶ. ಭಗತ್‌ಸಿಂಗ್, ಚಂದ್ರಶೇಖರ ಅಜಾದ್, ರಾಜಗುರು ಮುಂತಾದ ಕ್ರಾಂತಿಕಾರಿಗಳ ಬಲಿದಾನದ ಹೋರಾಟವೂ ಪ್ರಮುಖ ಪಾತ್ರ ವಹಿಸಿತು.

ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿ ವಿರುದ್ಧ ನಡೆಯುವ ರಾಷ್ಟ್ರೀಯ ಹೋರಾಟಕ್ಕೆ ಪ್ರಪಂಚದ ಬೇರೆದೇಶಗಳಲ್ಲಿ ನಡೆಯುತ್ತಿದ್ದ ಘಟನೆಗಳು ಮತ್ತು ವಿದ್ಯಮಾನಗಳು ಪರೋಕ್ಷವಾಗಿ ಬೆಂಬಲ ನೀಡುವುದರೊಂದಿಗೆ ಹೋರಾಟವನ್ನು ತೀವ್ರಗೊಳಿಸುವುದಲ್ಲದೆ ಬ್ರಿಟಿಷರು ಭಾರತವನ್ನು ಸ್ವತಂತ್ರ ಗೊಳಿಸಲು ಒತ್ತಡವನ್ನುಂಟುಮಾಡಿದುವು. ೧೯೧೭ರ ರಷ್ಯಾದ ಬೋಲ್ಶೆವಿಕ್ ಕ್ರಾಂತಿ, ಪ್ರಪಂಚದ ಎರಡನೆಯ ಮಹಾಯುದ್ಧ, ನಾಜಿಜರ್ಮನಿ ಬ್ರಿಟನ್ನಿನ ಮೇಲೆ ನಡೆಸಿದ ಆಕ್ರಮಣ, ಅಮೆರಿಕಾದಲ್ಲಿ ನಡೆದ ಬೆಳವಣಿಗೆ ಬ್ರಿಟನ್‌ನ ಮೇಲೆ ಪ್ರಭಾವಬೀರಿ ಬ್ರಿಟಿಷ್ ಸರ್ಕಾರ ಭಾರತದ ಆಡಳಿತದಲ್ಲಿ ಅನುಸರಿಸುತ್ತಿದ್ದ ಆಡಳಿತ ನೀತಿಯ ಬಿಗಿಯನ್ನು ಸಡಿಲ ಗೊಳಿಸುವುದರೊಂದಿಗೆ ಅಧಿಕಾರ ವರ್ಗಾವಣೆಯ ಕಾರ್ಯವನ್ನು ತೀವ್ರ ಗೊಳಿಸುವಂತೆ ಮಾಡಿದುವು.

ಭಾರತದ ರಾಷ್ಟ್ರೀಯ ಹೋರಾಟ, ಪ್ರಾರಂಭದಲ್ಲಿ ವಿದ್ಯಾವಂತ ಮೇಲ್ವರ್ಗಕ್ಕೆ ಸೀಮಿತವಾಗಿದ್ದು ಅನಂತರ ಸಮಾಜದ ಎಲ್ಲ ವರ್ಗಗಳನ್ನು ಆಕರ್ಷಿಸಿ ಜನತಾ ಆಂದೋಲನವಾಯಿತು. ಈ ಹೋರಾಟ ಯಾವುದೇ ಒಂದು ಪಕ್ಷ, ಒಬ್ಬ ನಾಯಕ, ಒಂದು ಧರ್ಮ, ಮತ, ಜಾತಿಯ ಏಕಸ್ವಾಮ್ಯವಾಗದೆ ಬೇರೆಬೇರೆ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ರೂಪುಗೊಂಡ ರಾಷ್ಟ್ರೀಯ ಚಳವಳಿಯಾಯಿತು. ಅದು ಏಷ್ಯಾ ಮತ್ತು ಆಫ್ರಿಕಾ ದೇಶಗಳಲ್ಲಿ ನಡೆದ ರಾಷ್ಟ್ರೀಯ ಹೋರಾಟಗಳಿಗೆ ಸ್ಫೂರ್ತಿ ಮತ್ತು ಮಾರ್ಗ ದರ್ಶನಗಳನ್ನು ನೀಡುವುದರೊಂದಿಗೆ ಪ್ರಪಂಚದ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆಯಿತು.

ಶ್ರೀಗಿರಿಯ ಸಿಡ್ಲುಮಲ್ಲಿಕಾರ್ಜುನ ದೇವಾಲಯ

– ಡಾ. ಸೀತಾ ಹನಸೋಗೆ

ಮುಂಜಾನೆಯ ಹಿಮದ ಸೀರೆಯುಟ್ಟು, ಹೊಂಬಿಸಿಲ ಆಭರಣ ತೊಟ್ಟು ಮೆರೆವ ಶ್ರೀಗಿರಿ ಇರುವುದು ಕರ್ನಾಟಕದ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರ ಎಂಬ ಊರಿನ ಆಗ್ನೇಯ ದಿಕ್ಕಿನಲ್ಲಿ. ಹಾಸನ ಮತ್ತು ಪಿರಿಯಾಪಟ್ಟಣದ ರಸ್ತೆಯಲ್ಲಿ ಬರುವ ಆಗ್ನೇಯ ದಿಕ್ಕಿಗೆ ೨ ಕಿಲೋಮೀಟರ್ ಕಚ್ಛಾರಸ್ತೆಯನ್ನು ತುಳಿದರೆ ಶ್ರೀಗಿರಿ ಅಥವಾ ಸಿಡ್ಲು ಮಲ್ಲಿಕಾರ್ಜುನ ಬೆಟ್ಟ ಸಿಗುತ್ತದೆ. ಈ ಶ್ರೀಗಿರಿಯನ್ನು 'ವಿಜಯಗಿರಿ', 'ವಿಜಯಾಚಲ' ಎಂಬ ಹೆಸರುಗಳಿಂದಲೂ ಕರೆಯುವುದುಂಟು.

ಕರ್ನಾಟಕ ರಾಜ್ಯದಲ್ಲಿ ಚಾರಿತ್ರಿಕವಾಗಿ, ಧಾರ್ಮಿಕವಾಗಿ ಹೆಚ್ಚು ಪ್ರಬುದ್ಧವಾದ ಬೆಟ್ಟಗಳಲ್ಲಿ ಮೈಸೂರಿನ ಚಾಮುಂಡಿಬೆಟ್ಟವನ್ನು ಬಿಟ್ಟರೆ, ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರದ ಸಿಡ್ಲುಮಲ್ಲಿಕಾರ್ಜುನ ಬೆಟ್ಟವೊಂದೇ ಎಂದು ಹೇಳಿದರೆ ತಪ್ಪಾಗಲಾರದು. ಪೌರಾಣಿಕ ಕಾಲದಿಂದಲೂ ಖ್ಯಾತಿ ಪಡೆದಿರುವ ಈ ಬೆಟ್ಟ ಸಮುದ್ರದ ಸಮಪಾತಳಿಯಿಂದ ೪೩೮೯ ಅಡಿ ಎತ್ತರದಲ್ಲಿದೆ. ಸುಮಾರು ೧೨೦೦ ಎಕರೆ ಭೂಪ್ರದೇಶವನ್ನು ಆಕ್ರಮಿಸಿ ಕೊಂಡಿರುವ ಈ ಬೃಹತ್ ಶಿಖರದ ಶಿಲಾಖಂಡ ೯ ಕಿಲೋಮೀಟರ್ ಸುತ್ತಳತೆಯಲ್ಲಿ ಹರಡಿಕೊಂಡಿದೆ. ದಕ್ಷಿಣೋತ್ತರವಾಗಿ ನೋಡಿದಾಗ ನಾಗರಹೆಡೆಯಂತೆ ಕಂಡರೂ ಉತ್ತರದ ಕೊನೆಯಲ್ಲಿ ಏಕಶಿಲಾಖಂಡವಾಗಿ ಕಿರಿದಾಗುತ್ತ ಹೋಗುತ್ತದೆ. ಬೆಟ್ಟದ ಮೇಲಿರುವ ಅಖಂಡ ಶಿಲೆಗಳು, ಸೃಷ್ಟಿ ವೈಚಿತ್ರ್ಯಗಳುಳ್ಳ ಗುಹೆಗಳು, ವಿಚಿತ್ರ ಆಕೃತಿಯ ಕಲಾಚಿತ್ತಾರಗಳು, ಧಾರ್ಮಿಕ ಸಂಸ್ಕೃತಿಯನ್ನು ಸಾರುವ ದೇವಾಲಯಗಳು, ಚಾರಿತ್ರಿಕ ಅವಶೇಷಗಳುಳ್ಳ ಸ್ಮಾರಕಗಳು, ತಣ್ಣನೆ ನೀರಿನ ಕೊಳಗಳು, ಇವೇ ಮೊದಲಾದ ರೋಚಕ ಸತ್ಯದ ಸಾಕ್ಷೀಭೂತಗಳು ಪ್ರವಾಸಿಗರಿಗೆ ದಿಗ್ಭ್ರಮೆ ಹುಟ್ಟಿಸುತ್ತವೆ. ಅದೇನೇ ಇರಲಿ, ಬೆಟ್ಟದ ಸಿರಿಯನ್ನು ಕಾಣಲು ಬೆಟ್ಟದ ಮೇಲೇರಲೇಬೇಕು. ಈ ಬೆಟ್ಟವನ್ನು ಏರಲು ಬೆಳಗಿನ ಸಮಯವೇ ಒಳ್ಳೆಯದು. ಏಕೆಂದರೆ ಹಿತವಾದ ಗಾಳಿ, ಎಳೆಬಿಸಿಲಲ್ಲಿ ಮೆಟ್ಟಿಲುಗಳನ್ನು ಏರುತ್ತಿದ್ದರೆ ಆಯಾಸವಾಗುವುದಿಲ್ಲ.

ಶ್ರೀಗಿರಿಯ ಸಿಡ್ಲುಮಲ್ಲಿಕಾರ್ಜುನನಿಗೆ ಸುಮಾರು ಒಂದು ಸಾವಿರ ವರ್ಷಗಳ ಇತಿಹಾಸವಿದೆ. ಚಾರಿತ್ರಿಕವಾಗಿ ಈ ಬೆಟ್ಟ ೧೦ನೇ ಶತಮಾನದ ಅರಸು ಮನೆತನಗಳಿಂದ

ಗುರುತಿಸಲ್ಪಟ್ಟಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಈ ದೇವಾಲಯವನ್ನು ಕುಡುಕೂರು ಹಾಗೂ ಬೆಟ್ಟದ ತುಂಗಗಳಲ್ಲಿ ಸ್ಥಳೀಯ ಪಾಳೇಯಗಾರನಾಗಿದ್ದ ಗಂಗರಸ ಕಟ್ಟಿಸಿದನೆಂದು ತಿಳಿದುಬರುತ್ತದೆ. ಕುಲ್ಲೋತ್ತುಂಗ ಚೋಳನ ಶಾಸನದಲ್ಲಿ ಶ್ರೀಗಿರಿಯ ಪ್ರಸ್ತಾಪ ಬಂದಿದ್ದು, ಅನಂತರ ಚೋಳರ ಮತ್ತು ಹೊಯ್ಸಳರ ಅಧೀನದಲ್ಲಿದ್ದ ಚಂಗಾಳ್ವ ಅರಸರ ಕಾಲದಲ್ಲಿ ಸರ್ವತೋಮುಖ ಅಭಿವೃದ್ಧಿಯಾದುದನ್ನು ಕಾಣುತ್ತೇವೆ. ಅಷ್ಟೇ ಅಲ್ಲ, ನಂಜರಾಜಪಟ್ಟಣ, ಶ್ರೀರಂಗಪಟ್ಟಣ, ಪಿರಿಯಾಪಟ್ಟಣವನ್ನಾಳಿದ ಚಂಗಾಳ್ವ ಅರಸರು ಜೈನಮತದಿಂದ ವೀರಶೈವ ಮತಕ್ಕೆ ಮತಾಂತರಗೊಂಡ ಮೇಲೆ ಇಲ್ಲಿಯ ಅನ್ನದಾನಿ ಮಲ್ಲಿಕಾರ್ಜುನ ದೇವರನ್ನು ತಮ್ಮ ಕುಲದೈವವನ್ನಾಗಿ ಸ್ವೀಕರಿಸಿ, ದೇವಾಲಯವನ್ನು ಕಟ್ಟಿಸಿ ಬೆಟ್ಟವನ್ನು ಅಭಿವೃದ್ಧಿಪಡಿಸಿದರೆಂದು ತಿಳಿದುಬರುತ್ತದೆ. ಚಂಗಾಳ್ವರ ಕಟ್ಟಕಡೆಯ ವೀರರಾಜನ ಕಾಲಕ್ಕಾಗಲೇ ಜೈನಧರ್ಮ ಸಂಪೂರ್ಣವಾಗಿ ನಶಿಸಿ ಹೋಗಿತ್ತಲ್ಲದೆ ಮಲ್ಲಿನಾಥನ ಬಸದಿ ಮಲ್ಲಯ್ಯನ ದೇವಾಲಯವಾಗಿ ಚಂಗ್ಯಾಳರು ಶೈವ ಮತಾವಲಂಬಿಗಳಾದರು. ಬೆಟ್ಟದ ತುಂಗವನ್ನಾಳಿದ ತುಂಡರಸರಾದ ಆದಿಪರಮೇಶ್ವರ, ಬೀರರಾಜು, ಕುಜಿಲಾಪುರ (ಕುಡುಕೂರು) ತುಂಡರಸರು, ವಿಜಯ ನಗರದ ಹರಿಹರದೇವ, ಅಚ್ಯುತರಾಯರ ಪ್ರತಿನಿಧಿಗಳು, ಮೈಸೂರಿನ ಕೃಷ್ಣರಾಜ ಒಡೆಯರ ಪ್ರತಿನಿಧಿಗಳು, ಸ್ಥಳೀಯ ಮುಖ್ಯಸ್ಥರೂ ಈ ಬೆಟ್ಟಕ್ಕೆ ಅನೇಕ ಕಾಣಿಕೆಗಳನ್ನು ಕೊಟ್ಟು ಇಲ್ಲಿ ತೋರಣಗಂಭ, ಮೆಟ್ಟಿಲು, ಗುಡಿ, ದೇವಾಲಯದ ಮೆಟ್ಟಿಲುಗಳನ್ನು ಕಟ್ಟಿಸಿದ್ದಾರೆ.

ಸಿದ್ದುಮಲ್ಲಿಕಾರ್ಜುನನ ಬೆಟ್ಟ ೧೧ನೇ ಶತಮಾನದಿಂದ ೧೭ನೇ ಶತಮಾನದವರೆಗೆ ಆಯಾ ಕಾಲದ ರಾಜರ ಪ್ರತಿನಿಧಿಗಳ ಆಶ್ರಯದಿಂದಲೂ ಪ್ರಸಿದ್ಧಿಯಾಗಿತ್ತೆಂದು ಹೇಳುತ್ತಾರೆ. ಅದರಲ್ಲೂ ೧೧ನೇ ಶತಮಾನದಲ್ಲಿ ಬೆಟ್ಟದಪುರವನ್ನೇ ಕೇಂದ್ರವನ್ನಾಗಿ ಮಾಡಿಕೊಂಡು ಆಳುತ್ತಿದ್ದ ವಿಕ್ರಮರಾಯ ಇವನ ಮಗ ಪ್ರಪ್ರಥಮವಾಗಿ ಈ ಬೆಟ್ಟದ ಮಹತ್ವನ್ನರಿತು ಇದನ್ನು ಧರ್ಮಕ್ಕಾಗಿ ಬಳಸಿಕಂಡು ಅಭಿವೃದ್ಧಿಗೊಳಿಸಿದರೆಂದು ತಿಳಿದು ಬರುತ್ತದೆ. ಕ್ರಿ.ಶ. ೧೭೪೫ರ ವೇಳೆಗೆ ಮೈಸೂರಿನ ಒಡೆಯರು ಸಂಪೂರ್ಣವಾಗಿ ವಹಿಸಿಕೊಂಡ ಅನಂತರ ಮತ್ತು ಆಂಗ್ಲರ ಆಡಳಿತದ ತರುವಾಯ ಮೊದಲಿನ ಅಭಿವೃದ್ಧಿ ಆರಾಧನೆಗಳು, ಕಡಿಮೆಯಾಗಿ ಬರಬರುತ್ತಾ ತೀರಾ ನಿರ್ಲಕ್ಷ್ಯಕ್ಕೊಳಕ್ಕಾಗಿ ಈಗ ಕೇವಲ ಅವಶೇಷಗಳ ಆಗರವಾಗಿ ಮಾತ್ರ ಉಳಿದಿವೆ. ೧೯೫೧ರಲ್ಲಿ ಈ ಬೆಟ್ಟದ ಸ್ಮಾರಕಗಳನ್ನು ಕರ್ನಾಟಕ ಪ್ರಾಚ್ಯ ವಸ್ತು ಇಲಾಖೆ ತನ್ನ ವಶಕ್ಕೆ ತೆಗೆದುಕೊಂಡು ನಾಮಫಲಕವನ್ನು ಹಾಕಿಕೊಂಡಿದೆ. ಆದರೆ ನಾಮಫಲಕದಲ್ಲಿರುವ ಅಕ್ಷರಗಳು ಸ್ಪಷ್ಟವಾಗಿ ಕಾಣದೆ ನೋಡು ಗರಿಗೆ ಯಾವುದೇ ಐತಿಹಾಸಿಕ ಮಾಹಿತಿಯನ್ನು ಒದಗಿಸದಿರುವುದು ವಿಷಾದನೀಯ. ಹೀಗೆ ಚಾರಿತ್ರಿಕ ಹಿನ್ನಲೆಯುಳ್ಳ ಶ್ರೀಗಿರಿಗೆ ಮತ್ತು ಮಲ್ಲಿಕಾರ್ಜುನನಿಗೆ ಪೌರಾಣಿಕ ಹಿನ್ನಲೆಯೂ ಉಂಟು. ದ್ವಾಪರಯುಗ, ತ್ರೇತಾಯುಗದಿಂದಲೂ ಈ ಬೆಟ್ಟಕ್ಕೆ

ವಿಜಯಾಚಲ, ಶ್ರೀವಿಜಯಗಿರಿ ಎಂಬ ಹೆಸರಿನಿಂದ ಧಾರ್ಮಿಕವಾಗಿ ಖ್ಯಾತಿ ಹೊಂದಿತ್ತೆಂದು ತಿಳಿದುಬರುತ್ತದೆ. 'ಬ್ರಹ್ಮಾಂಡ ಪುರಾಣೇ ಶ್ರೀವಿಜಯಗಿರಿ ಮಹಾತ್ಮ್ಯೆ'ಯಲ್ಲಿ ವಿಜಯಗಿರಿ ಎಂಬ ಹೆಸರು ಹೇಗೆ ಬಂದಿತ್ತೆಂಬುದನ್ನು ಈ ರೀತಿ ಸೂಚಿಸಿದ್ದಾರೆ.

ಮೊದಲನೆಯದಾಗಿ ಈ ಗಿರಿಗೆ ಅಧಿರೂಪನೂ ಪರಮೇಶ್ವರನ ಮೈದುನನೂ ಆದ ವಿಜಯನ ಮಹಾತಪಸ್ಸಿಗೆ ಮೃಢನು ಮೆಚ್ಚಿದವನಾಗಿ ಗಿರಿಜೆಯೊಡನೆ ಇಲ್ಲಿ ನೆಲೆಸಿರುವ ಕಾರಣ 'ವಿಜಯಾಚಲ' ಎಂಬ ಹೆಸರು ಬಂದಿತು ಎಂದಿದೆ. ಎರಡನೆಯದಾಗಿ ಕೃತಯುಗದಲ್ಲಿ ನಾರದ ಮಹಾಮುನಿಯು ಪರ್ವತಋುಷಿಯೊಡಗೂಡಿ ದೈವಲೀಲಾ ವಿನೋದ ಚಿತ್ತನಾಗಿ ಶ್ರೀಶೈಲ ಪರ್ವತಕ್ಕೆಂದು ಬ್ರಹ್ಮಲೋಕದಿಂದ ಹೊರಟು ಮಹಾನುಭವನಾದ ಶಂಭುವಿನ ಗುಣಕಥನವನ್ನು ಹಾಡುತ್ತ, ವೀಣಾಲೋಲನಾಗಿ ಗಗನ ಮಾರ್ಗವಾಗಿ ಈ ಗಿರಿಯ ಮೇಲ್ಭಾಗದಲ್ಲಿ ಹಾದು ಹೋಗುತ್ತಿದ್ದನಂತೆ. ದೈವಲೀಲಾ ವಿನೋದಿಯಾದ ಇವನ ಮನಸ್ಸೆಲ್ಲಾ ಶ್ರೀಶೈಲದಲ್ಲೇ ಲೀನವಾಗಿದ್ದ ಕಾರಣ, ಆನಂದ ಪರವಶನಾದ ಮುನಿಯು ಈ ವಿಜಯಗಿರಿಯಲ್ಲಿ ಗಿರಿಜಾಮಾಧವನು ನೆಲೆಸಿರುವುದನ್ನು ನೋಡದ ಚಿತ್ತವುಳ್ಳವನಾಗಿ ಮುಂದಕ್ಕೆ ಹೋಗುತ್ತಿರಲು, ಸರ್ವವ್ಯಾಪಕನಾದ ಪರಮೇಶ್ವರನು ಇದನ್ನರಿತು ಮಂದಸ್ಮಿತನಾಗಿ, ಮುನಿಯ ವೀಣೆಯನ್ನು ಅದೃಶ ಗೊಳಿಸಿದನಂತೆ. ಶಿವನ ಈ ಲೀಲೆಯನ್ನರಿಯದೆ, ನಾರದನು ಖಿನ್ನಮನನಾಗಿ ವಿಜಯಾಚಲಕ್ಕೆ ಇಳಿದು ಬಂದು ಗಿರಿಯ ಎಲ್ಲೆಡೆಯಲ್ಲಿಯೂ ಹುಡುಕಿ ನಿರಾಶನಾಗಿ, ಮನನೊಂದು ಮುಂದಕ್ಕೆ ಹೊರಡಲು ಉದ್ಯುಕ್ತನಾಗುವಷ್ಟರಲ್ಲಿ ಹರನ ಪ್ರೇರಣೆಯಿಂದ ಮಹಾಶಿವಭಕ್ತನಾದ ನಟನು, ಎಲೌ, ದೇವ ಋುಷಿಪುಂಗವ ಬೆದರಬೇಡ, ಇದು ಪರಮ ಪವಿತ್ರ ವಿಜಯಗಿರಿಕ್ಷೇತ್ರವು ಇಲ್ಲಿ ಮಹದೇವನು ಪಾರ್ವತಿಯೊಡನೆ ನೆಲಸಿದ್ದಾನೆ, ಅವನನ್ನು ಪೂಜಿಸಿ ಕೃತಾರ್ಥನಾಗು ಎಂದು ಹೇಳಲಾಗಿ ನಾರದ ಗಿರಿಯನ್ನು, ಪರಮೇಶ್ವರನನ್ನು ಪೂಜಿಸಿ ತನ್ನ ತಂಬೂರಿಯನ್ನು ಪುನಃ ಪಡೆದುಕೊಂಡು ಈ ಪರ್ವತದಲ್ಲಿ ವಾಸಿಸುತ್ತ ಪರ್ವತದ ಮಹಿಮೆಯನ್ನು ಜಗತ್ತಿಗೆ ಸಾರಿದನೆಂಬ ವಿಷಯ ಬ್ರಹ್ಮಾಂಡ ಪುರಾಣದಲ್ಲಿದೆ.

ಮಲ್ಲಿಕಾರ್ಜುನನ ದೇವಾಲಯ ನಿರ್ಮಾಣವಾದ ಬಗ್ಗೆಯೂ ದಂತ ಕತೆಗಳಿರುವುದನ್ನು ಕಾಣಬಹುದು. ದ್ವಾಪರಯುಗದಲ್ಲಿ ಒಮ್ಮೆ ಭಾರದ್ವಜ ಋುಷಿಯ ತಪಸ್ಸನ್ನು ಕೇಶದ ಮದುರೆಯೆಂಬ ದಂಪತಿಗಳು ಕಿಡಿಸಿದ್ದರಿಂದ ಋುಷಿ ಅವರಿಗೆ ಭೂಲೋಕದಲ್ಲಿ ಪುರುಷಮೃಗ, ಕಪಿಲೆಯರಾಗಿ ಶ್ರೀಗಿರಿಯ ಮಲ್ಲಿಕಾರ್ಜುನನ ಪೂಜೆ ಮಾಡಿರಿ ಎಂದು ಶಾಪ ಕೊಟ್ಟನಂತೆ, ಆಗ ಮದುರೆಯ ಕುಟಿಲಾಪುರದ (ಈಗಿನ ಕುಡುಕೂರು) ರಾಜನ ಮನೆಯಲ್ಲಿ ಕಪಿಲೆಯಾಗಿ ಜನಿಸಿ, ದಿನನಿತ್ಯ ಶ್ರೀಗಿರಿಯ ತಪ್ಪಲಿಗೆ ಮೇಯಲು ಹೋಗಿ ಪೊದೆಯೊಳಗಿನ ಲಿಂಗಕ್ಕೆ ಹಾಲು ಕೊಟ್ಟು, ಬರುತ್ತಿತ್ತಂತೆ. ರಾಜ

ಮನೆಯಲ್ಲಿ ಹಾಲುಕೊಡದ ಹಸುವಿನ ಗುಟ್ಟೇನೆಂದು ತಿಳಿಯಲು ಒಬ್ಬ ಗೋಪಾಲಕನನ್ನು ಹಿಂದೆ ಕಳುಹಿಸಿ, ಅವನಿಂದ ನಿಜವಿಷಯ ತಿಳಿದ ರಾಜ ಕೋಪೋದ್ರಿಕ್ತನಾಗಿ ಲಿಂಗಕ್ಕೆ ಕೊಡಲಿಯಿಂದ ಹೊಡೆದನಂತೆ. ಲಿಂಗದಿಂದಾಗ ರಕ್ತ ಸುರಿದು, ನಾನೇ 'ಮಲ್ಲಿಕಾರ್ಜುನ' ದೇವರು, ನೀನು ಇಲ್ಲಿ ಗುಡಿಯನ್ನು ಕಟ್ಟಿ ಪೂಜಿಸು ಎಂದು ಹೇಳಿತಂತೆ. ಆಗ ನೊಂದ ರಾಜ, ಪಶ್ಚಾತ್ತಾಪ ಪಟ್ಟು ಗುಡಿ ಕಟ್ಟಿಸಿ ಕಪಿಲೆಯನ್ನು, ಮಲ್ಲಿಕಾರ್ಜುನನನ್ನು ಪೂಜಿಸಿದನಂತೆ. ಇವತ್ತೂ ಕೂಡ ಬೆಟ್ಟದ ಮೇಲಿನ ದೇವಸ್ಥಾನದ ಗೋಡೆಯಲ್ಲಿ ಈ ಕಥೆಯನ್ನು ಸಾರುವ ಅನೇಕ ಚಿತ್ರಗಳಿವೆ ಮತ್ತು ಕಪಿಲೆಯನ್ನು ಹೂಳಿರುವ ಸ್ಥಳ ಕುಡುಕೂರಿನಲ್ಲಿದ್ದು ಜನ ಈಗಲೂ ಈ ಸ್ಥಳವನ್ನು ಪೂಜಿಸುತ್ತಿದ್ದಾರೆ. ಇನ್ನು ಬೆಟ್ಟದ ಮಲ್ಲಿಕಾರ್ಜುನ, ಸಿಡ್ಲು ಮಲ್ಲಿಕಾರ್ಜುನ ಹೇಗಾದನೆಂಬುದಕ್ಕೂ ಬ್ರಹ್ಮಾಂಡ ಪುರಾಣದಲ್ಲಿ ಕತೆಯೊಂದು ಹೀಗಿದೆ : ಒಂದು ಸಲ ಗಂಗೆಯಿಂದ ಶಾಪಗೊಂಡ ಗಯನು ಶಾಪ ವಿಮೋಚನೆಗಾಗಿ ಮಲ್ಲಿಕಾರ್ಜುನನ ಪೂಜೆಯನ್ನು ಸಿಡಿಲಿನ ಮೂಲಕ ಪೂಜಿಸಿ ಶಾಪಮುಕ್ತನಾದನಂತೆ. ಅಂದಿನಿಂದಲೇ ಸಿಡ್ಲು ಮಲ್ಲಿಕಾರ್ಜುನ ಎಂಬ ಹೆಸರು ಬಂದಿತ್ತೆಂದು ಹೇಳಲಾಗಿದೆ.

ಶ್ರೀಗಿರಿಯ ಮೇಲೆ ದಕ್ಷಿಣಾಭಿಮುಖವಾಗಿ ಒಂದು ಗರ್ಭಗುಡಿಯಿದ್ದು, ಒಳಗೆ ಪೂರ್ವಾಭಿಮುಖವಾಗಿ ಈಶ್ವರಲಿಂಗವಿದೆ. ಚಂಗಾಳ್ವರ ಕುಲದೈವನಾದ ಈ ಮಲ್ಲಿಕಾರ್ಜುನನ ಎದುರು ಬದಿಯಲ್ಲಿ ಸಿಡಿಲು ಹೊಡೆದ ಕಿಂಡಿಯಿದ್ದು, ಈ ಕಿಂಡಿಯ ಮೂಲಕವೇ ಪ್ರತಿವರ್ಷ ಸಿಡ್ಲು ಬಂದು ಈಶ್ವರನಿಗೆ ಸಿಡ್ಲುಪೂಜೆ ಮಾಡಿ ಹೋಗುವುದು. ಅದಕ್ಕಾಗಿಯೇ ಸಿಡ್ಲುಮಲ್ಲಿಕಾರ್ಜುನನೆಂತಲೂ ಕರೆಯುತ್ತಾರೆ, ಹೀಗೆ ಸಿಡ್ಲಿನಿಂದ ಪೂಜೆ ಆದಾಗ ಲಿಂಗಕ್ಕೆ ತೊಡಿಸಿರುವ ವಸ್ತ್ರ ಮತ್ತು ಮುಡಿಸಿರುವ ಹೂವು ಎಲ್ಲವೂ ಸುಟ್ಟುಬೂದಿಯಾಗಿರುತ್ತದೆಂದೂ ಈ ತರದ ಪೂಜೆ ಸುಮಾರು ೧೩ ನೇ ಶತಮಾನಕ್ಕಿಂತ ಮುಂಚಿನಿಂದಲೂ ಆಗುತ್ತಿದೆಯೆಂದು ಅರ್ಚಕರು ಹೇಳುತ್ತಾರೆ. ಇದಕ್ಕೆ ಸಾಕ್ಷಿಯೆಂಬಂತೆ ೧೩ನೇ ಶತಮಾನದಿಂದೀಚಿನ ದತ್ತಿಶಾಸನಗಳಲೆಲ್ಲಾ ಸಿಡ್ಲು ಮಲ್ಲಿಕಾರ್ಜುನ ಎಂದೇ ಬಳಕೆಯಾಗಿರುವುದನ್ನು ಕಾಣಬಹುದು. (ಉದಾಹರಣೆಗೆ ಶಾಸನಗಳು, ಎಫಿಗ್ರಾಫಿಯಾ ಕರ್ನಾಟಕ ಮೈಸೂರು ४, ೭೭, ೭४, ೬೭, ೬४, ೬೩, ೮४).

ಶ್ರೀಗಿರಿಗೆ ಮಲ್ಲಿಕಾರ್ಜುನನ ಭಕ್ತನಾದ ಚಂಗಾಳ್ವ ದೊರೆ ರುದ್ರಗಣನು ೩೧೦೮ ಮೆಟ್ಟಿಲುಗಳನ್ನು ಕಟ್ಟಿಸಿರಬಹುದೆಂದು ಊಹೆ. ಈ ಮೆಟ್ಟಿಲುಗಳನ್ನೇರಿ ದ್ವಾರ ಬಾಗಿಲನ್ನು ದಾಟಿದರೆ ಸಾಕು ಒಂದು ಎಕರೆ ಪೂರ್ತಿ ಆವರಿಸಿರುವ ಅನ್ನದಾನಿ ಚನ್ನಮಲ್ಲಿಕಾರ್ಜುನ ವಿಗ್ರಹ ಮುನ್ನೂರು ಕಲ್ಲುಗಳ ಆಧಾರ ಮೇಲೆ ನಿಂತಿದೆ. ದೇವಾಲಯದ ಉತ್ತರ ದಿಕ್ಕಿಗೊಂದು, ಪೂರ್ವದಿಕ್ಕಿಗೊಂದು ಬಾಗಿಲುಗಳಿವೆ. ಉತ್ತರ ದಿಕ್ಕಿಗಿರುವ ಪ್ರವೇಶ ದೊಳಗೆ ಕೆಲವು ಉಗ್ರಾಣಗಳು, ಸಣ್ಣಪುಟ್ಟ ಕೋಣೆಗಳು ಮತ್ತು ಪಾಕಶಾಲೆಗಳಿವೆ. ಅಲ್ಲೇ ಇರುವ ಮತ್ತೊಂದು ಪಡಸಾಲೆಯಲ್ಲಿ ಸುಮಾರು ೧೫೦ ಬಿಂದಿಗೆ

ಹಿಡಿಯುವಂತಹ ಒಂದು ಕೊಡವಿದೆ. ಅದರ ಪಕ್ಕಕ್ಕೆ ೧೨ ಕ್ವಿಂಟಾಲ್ ಅಕ್ಕಿ ಬೇಯಿಸುವಂತಹ ಬೃಹದಾಕಾರದ ಪಾತ್ರೆಯೊಂದಿದೆ. ಇವುಗಳ ಜೊತೆಗೆ ದೊಡ್ಡದಾದ ಬಾಂಡಲೆಗಳು ತುಕ್ಕು ಹಿಡಿದು ಬಿದ್ದಿವೆ. ಇವನ್ನೆಲ್ಲಾ ನೋಡುತ್ತಿದ್ದರೆ ಅನ್ನದಾನ ನಡೆಯುತ್ತಿದ್ದ ಕಾಲದಲ್ಲಿ ಬಳಸುತ್ತಿದ್ದ ಪಾತ್ರೆಗಳಿರಬಹುದೆನಿಸುತ್ತದೆ.

ದೇವಾಲಯದ ಒಳಭಾಗದ ಒಂದು ಬದಿಯಲ್ಲಿ ವೀರಭದ್ರನ ವಿಗ್ರಹವಿದ್ದರೆ, ಇನ್ನೊಂದು ಬದಿಯಲ್ಲಿ ೫ ಅಡಿ ಎತ್ತರದ ನೀಳಕಾಯದ ಸುಂದರವಾದ ಪುರುಷ ವಿಗ್ರಹ ಜೋಡಿಸಿದ ಕೈಯಿಂದ ದೈನ್ಯತಾಭಾವದಿಂದ ಕೂಡಿದೆ. ಕಿರೀಟ, ಮಣಿಸರ, ಕತ್ತಿಗಳಿಂದ ಶೋಭಿಸುತ್ತಿರುವ ಈ ವಿಗ್ರಹವು ಅನ್ನದಾನಿ ಚನ್ನಮಲ್ಲಿಕಾರ್ಜುನನ ಆರಾಧ್ಯಭಕ್ತನಾದ ಹಾಗೂ ದೇವಾಲಯದ ನಿರ್ಮಾತೃ ಚಂಗಾಳ್ವ ರಾಜನದಾಗಿರಬಹುದೆಂದು ಹೇಳುತ್ತಾರೆ. ದೇವಾಲಯದ ಕೆಳಶ್ರೇಣಿಯಲ್ಲಿ ವೀರಭದ್ರ ದೇವಸ್ಥಾನವಿದೆ. ಅದರ ಕೆಳಗೆ ಸುಮಾರು ೩-೪ ಎಕರೆಯಷ್ಟು ವಿಶಾಲವಾದ ಭೂಪ್ರದೇಶವಿದ್ದು, ಇದು ಪ್ರವಾಸಿಗರ ಸ್ವರ್ಗದಂತಿದೆ. ಬೆಟ್ಟಕ್ಕೆ ಹೋಗುವ ದಾರಿಮಧ್ಯದಲ್ಲಿ ಈಶ್ವರಲಿಂಗಗಳು, ಬಸವ ಮತ್ತು ಎರಡಂಕಣದ ಪಾಳುಗುಡಿಗಳಿವೆ. ೧೭ನೇ ಶತಮಾನದಲ್ಲಿ ಕಟ್ಟಿರುವಂತಹ ೪ ಅಂತಸ್ತಿನ ಗೋಪುರ, ತೋರಣ. ಮಂಟಪಗಳು, ನಂದಿ ಈಶ್ವರಗುಡಿಗಳು ಇವೆ. ಬೆಟ್ಟದ ಶ್ರೇಣಿಯಿಂದ ರಸ್ತೆಗೆ ಬರುವ ದಾರಿಯಲ್ಲಿ ಇತ್ತೀಚೆಗೆ ಕಟ್ಟಿಸಿದ ಏಣಿಹನುಮಂತರಾಯನ ಗುಡಿಯಿದೆ. ಈ ಮಾರ್ಗದಲ್ಲಿ ಹಾದು ಬರುವಾಗಲೇ ಕಲ್ಲುಗವಿ, ಮೂಡ್ಲಗವಿ, ಈಶ್ವರಗವಿ, ರಹಸ್ಯಗವಿ, ಕನಕಗವಿ-ಇವೇ ಮೊದಲಾದ ಗವಿಗಳಿದ್ದು ಇವೆಲ್ಲಾ ರಹಸ್ಯ ಲೋಕದ ವಿಸ್ಮಯ ಚರಿತ್ರೆಯನ್ನು ಸಾರುವಂತಿದೆ.

ಈಶ್ವರಗವಿಯಲ್ಲಿ ಉನ್ನತ ವಾಸ್ತುಶಿಲ್ಪದ ಈಶ್ವರಲಿಂಗ, ಆಧುನಿಕ ಪ್ರಪಂಚದ ಸ್ತ್ರೀವಿಗ್ರಹವಿದೆ. ಈ ಮುಖವನ್ನು ಆವರಿಸಿಕೊಂಡು ಮೇಲೆ ಏಳು ಹೆಡೆ ಸರ್ಪವನ್ನು ಕೆತ್ತಲಾಗಿದೆ. ಇದರ ಮೇಲ್ಭಾಗದಲ್ಲಿ 'ಸುಬ್ರಹ್ಮಣ್ಯ' ದೇವರು ಎಂಬ ಶಾಸನವಿದೆ. ಇದಲ್ಲದೆ ಹೆಡೆಯ ಸಮೀಪದಲ್ಲಿ ಶಕ್ತಿ ಗಣಪತಿಯಿದ್ದು, ಇದರ ತೊಡೆಯ ಮೇಲೆ ಒಂದು ನಗ್ನಸ್ತ್ರೀ ಚಿತ್ರವಿದೆ. ಇದರ ಕೆಳಗೆ 'ಜಿನ' ಎಂಬ ಶಾಸನವಿದೆ. ಹೀಗೆ ಜೈನ ಶೈವ ಶಾಸನಗಳಷ್ಟೇ ಅಲ್ಲದೇ ವಿವಿಧ ಧರ್ಮವನ್ನು ಸಾರುವ ಸಾಂಕೇತಿಕ ಚಿತ್ರಗಳಿವೆ. ಅಲ್ಲೇ ಇರುವ ದೊಡ್ಡ ಲಿಂಗದ ಮೇಲೆ ಪಂಚಪಾಂಡವರು, ರಾಮಕೃಷ್ಣ, ಲವಕುಶ, ಗುರುಡ, ವೀರಭದ್ರ. ಪರಿಹರ, ಭೈರವ, ಬ್ರಹ್ಮ, ವಿಭೀಷಣ, ಬಲಿಚಕ್ರವರ್ತಿ, ಚನ್ನಕೇಶವ, ನೀಲಲೋಚನೆ, ಹರಿಶ್ಚಂದ್ರ ಮತ್ತು ಚಂದ್ರಮತಿ -ಇವೇ ಮೊದಲಾದ ಚಿತ್ರಗಳಿರುವುದರ ಜೊತೆಗೆ ಅನೇಕ ಜಲಚರ ಚಿತ್ರಗಳನ್ನು ಕೆತ್ತಲಾಗಿವೆ. ಕನಕಗವಿಯಲ್ಲಿ ಶಿಲಾಶಾಸನ ವೊಂದಿದೆ. ಇದು ಅನೇಕ ಋಷಿಗಳು ತಪಸ್ಸು ಮಾಡಿದ ಸ್ಥಳವೆಂಬ ನಂಬಿಕೆ ಜನರಲ್ಲಿದೆ. ಪೂರ್ವ ದಿಕ್ಕಿನ ತಪ್ಪಲಿಗೆ ಮೂಡ್ಲಗವಿಯಿದ್ದು, ಇದು ಚಪ್ಪಟೆಯಾಕಾರದ ಬಂಡೆಯ ಕೆಳಗಿದೆ. ಇಲ್ಲಿ ವೀರಚಕ್ರ, ಈಶ್ವರಲಿಂಗ, ದೀಪದಸ್ತಂಭವಿದ್ದು, ಇವೆಲ್ಲಾ ಹದಿನಾರನೆಯ

ಶತಮಾನದ ವಿಗ್ರಹಗಳಾಗಿವೆ. ಪಶ್ಚಿಮ ದಿಕ್ಕಿಗಿರುವ ಬೆಟ್ಟದ ಕೆಳಗೆ ಪ್ರತಿಧ್ವನಿಸುವ ದಿಮ್ಮಿಗಲ್ಲಿನ ಬೃಹತ್ ಬಂಡೆಯ ಕೆಳಗೊಂದು ಕಲ್ಲುಗವಿ ಇದೆ. ಈ ಗುಹೆಯಲ್ಲೂ ಚಾರಿತ್ರಿಕ ಅವಶೇಷಗಳಿವೆಯೆಂದು ಹೇಳುವರು. ಇವಷ್ಟೇ ಅಲ್ಲದೆ ಅನೇಕ ನಿಗೂಢವಾದ ಗುಹೆಗಳ ಆವಾಸಸ್ಥಾನ ಶ್ರೀಗಿರಿ ಎಂದರೆ ತಪ್ಪಾಗಲಾರದು.

ಇಷ್ಟೆಲ್ಲಾ ಪೌರಾಣಿಕ ಚಾರಿತ್ರಿಕ ಹಿನ್ನೆಲೆಯಿರುವ ಶ್ರೀಗಿರಿಯ ಸಿದ್ಧುಮಲ್ಲಿಕಾರ್ಜುನನ ದೇವಾಲಯ ಇಂದು ಅವಸಾನದ ಅಂಚಿನಲ್ಲಿದೆ. ಬೆಟ್ಟವನ್ನೇರಲು ಮೆಟ್ಟಿಲುಗಳಿದ್ದರೂ ಸೂಕ್ತ ರಕ್ಷಣೆ ಇಲ್ಲದೇ ಅವು ಮುರಿದು ಮುಕ್ಕಾಗುತ್ತಿವೆ. ಇಲ್ಲಿರುವ ಅನೇಕ ಸುಂದರ ಕೆತ್ತನೆಗಳು ಗಾಳಿ, ಮಳೆಯಿಂದ ತತ್ತರಿಸಿ ವಿಕೃತಗೊಳ್ಳುತ್ತಿವೆ. ಬಹುಶಃ ಕರ್ನಾಟಕ ಪ್ರಾಚ್ಯ ಇಲಾಖೆಯವರು ವಿಶೇಷ ಕಾಳಜಿ ವಹಿಸಿದರೆ ಆಗುತ್ತಿರುವ ಈ ದುರಂತವನ್ನು ತಪ್ಪಿಸಲು ಸಾಧ್ಯವಾದೀತು, ಪ್ರವಾಸಿಗರ ಈ ತಾಣವೂ ಉಳಿದೀತು !

ಪರಾಮರ್ಶನ ಗ್ರಂಥಗಳು

೧ ಕೊಡಗಿನ ಇತಿಹಾಸ

೨ ಎಫಿಗ್ರಾಫಿಯ ಕರ್ನಾಟಿಕ

೩ ಹಯವದನರಾವ್ ಗೆಝೆಟೀಯರ್

೪ ವಿಶ್ವಕೋಶ

೫ ಬ್ರಹ್ಮಾಂಡಪುರಾಣೇ ಶ್ರೀವಿಜಯಗಿರಿಯ ಮಹಾತ್ಮೆ

ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಕೋಟೆಗಳು

– ಜಿ.ಶಿವಪ್ಪ

ಆದಿಕಾಲದ ಮಾನವ ಕಾಡುಪ್ರಾಣಿಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ತನ್ನ ವಾಸಸ್ಥಾನದ ಸುತ್ತಲೂ ಮುಳ್ಳುಗಿಡಗಳ ಬೇಲಿಯನ್ನು ನಿರ್ಮಿಸಿಕೊಂಡನು. ಯಾವಾಗ ಮಾನವ ಕ್ರೂರ ಪ್ರಾಣಿಗಳಿಗಿಂತ ಅಪಾಯಕಾರಿಯಾಗಿ ಪರಿಣಮಿಸಿದನೋ ಯಾವಾಗ ಒಂದು ಗುಂಪು ಇನ್ನೊಂದು ಗುಂಪಿನ ಮೇಲೆ ಎರಗಲು ಸಿದ್ಧವಾಯಿತೋ ಆಗ ಸೈನ್ಯ ಉದಯವಾಯಿತು. ಕೋಟೆಗಳು ರಚನೆಯಾದವು. ಕೋಟೆಗಳನ್ನು ನಾಗರಿಕತೆಯ ಮೊದಲ ಅನ್ವೇಷಣೆ ಎಂದರೆ ತಪ್ಪಾಗಲಾರದು.

ಕೋಟೆಯು ಕೇವಲ ಸೈನಿಕ ಕೇಂದ್ರವಾಗಿರದೆ ರಾಜಕೀಯ ಚಟುವಟಿಕೆಗಳ ಕೇಂದ್ರ ಸ್ಥಳವೂ ಆಯಿತು. ಅಗ್ನಿಪುರಾಣವೂ ಕೋಟೆಯನ್ನು ರಾಜ್ಯದ ಏಳು ಅಂಗಗಳಲ್ಲಿ ಒಂದು ಎಂದು ಹೇಳಿದೆ. ನಮ್ಮ ದೇಶದಲ್ಲಿನ ಅನೇಕ ಊರುಗಳ ಹೆಸರು 'ಪುರ' ಎಂಬುದ ರೊಂದಿಗೆ ಮುಗಿಯುವುದನ್ನು ನೋಡಿದರೆ ಕೋಟೆಗಳು ಎಷ್ಟು ಪ್ರಮುಖ ವಾಗಿದ್ದವೆಂದು ತಿಳಿಯುತ್ತದೆ. 'ಪುರ' ಎಂದರೆ ಕೋಟೆ ಎಂದರ್ಥ.

ರಾಜ್ಯದ ಸುರಕ್ಷತೆಗೆ ಆಪತ್ತು ಹೆಚ್ಚಿದಂತೆಲ್ಲ ಹಳೆಯ ಕೋಟೆಗಳನ್ನು ದುರಸ್ತಿ, ಆಯಕಟ್ಟಿನ ಸ್ಥಳಗಳಲ್ಲಿ ಹೊಸಕೋಟೆಗಳ ನಿರ್ಮಾಣ ಮಾಡುವುದು ಸಹಜ. ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಇಡೀ ಭಾರತವನ್ನು ನುಂಗಿ ಹಾಕಲು ವಸಾಹತುಗಾರರು ಹವಣಿಸುತ್ತಿದ್ದರು. ಈ ಸಮಯದಲ್ಲಿ ಅಧಿಕಾರ ಗದ್ದುಗೆ ಹಿಡಿದ ಹೈದರಾಲಿ ಕೇವಲ ಬ್ರಿಟಿಷರ ವಿರುದ್ಧ ಮಾತ್ರವಲ್ಲದೆ ಬಲಿಷ್ಠ ಮರಾಠ ಹಾಗೂ ಹೈದರಾಬಾದಿನ ನಿಜಾಮರೊಂದಿಗೂ ಹೋರಾಡಿ ತನ್ನ ರಾಜ್ಯವನ್ನು ವಿಸ್ತರಿಸಿ ಸಂರಕ್ಷಿಸಿ ಕೊಳ್ಳಬೇಕಾಯಿತು. ಆತನ ಮರಣದ (೧೭೮೨) ಅನಂತರ ಅಧಿಕಾರಕ್ಕೆ ಬಂದ ಟಿಪ್ಪುಸುಲ್ತಾನನ ಆಡಳಿತ ಕಾಲದಲ್ಲಿ ಶತ್ರುಗಳ ಬೆದರಿಕೆ ಮತ್ತಷ್ಟು ಹೆಚ್ಚಿತು. ಶತ್ರುಗಳನ್ನು ನಿಯಂತ್ರಣದಲ್ಲಿಡಲು ಹಾಗೂ ರಾಜ್ಯವನ್ನು ವಿಸ್ತರಿಸಿ ರಕ್ಷಿಸಿಕೊಳ್ಳಲು ಬಲಿಷ್ಠ ಕೋಟೆಗಳ ಅವಶ್ಯಕತೆ ಹೆಚ್ಚಾಯಿತು. ಹೈದರಾಲಿಯಂತೆ ಟಿಪ್ಪು ಸಹಾ ರಾಜ್ಯಾದ್ಯಂತ ಅನೇಕ ಕೋಟೆಗಳನ್ನು ನಿರ್ಮಿಸಿದನು. ಅವುಗಳಲ್ಲಿ ಹಲವು ಅವರು

ಅಧಿಕಾರಕ್ಕೆ ಬರುವುದಕ್ಕೆ ಮೊದಲಿನಿಂದಲೂ ಇದ್ದವು. ಅವುಗಳು ಬಹುತೇಕ ಮಣ್ಣಿನ ಕೋಟೆಗಳಾಗಿದ್ದರಿಂದ, ದುರಸ್ತಿಪಡಿಸಿ ಬಲಗೊಳಿಸಲಾಯಿತು. ಎತ್ತರವಾದ ಗೋಡೆಗಳು, ಬುರಜು ಬತ್ತೇರಿಗಳು, ಅಗಳು, ಒಳಚರಂಡಿಗಳು, ಕೋಟೆತೆನೆಗಳು, ರಹಸ್ಯ ದಾರಿಗಳು ಮತ್ತು ನೀರುಗಂಡಿಗಳು ನಿರ್ಮಾಣವಾದವು. ಟಿಪ್ಪುಸುಲ್ತಾನ ಸತ್ತು ಇನ್ನೂರು ವರ್ಷಗಳು ಕಳೆದಿವೆಯಾದರೂ ಇಂದಿಗೂ ಪ್ರಭಾವಶಾಲಿಯಾಗಿ ನಿಂತಿರುವ ಕೋಟೆಗಳು ರಾಜಧಾನಿ ನಗರ ಶ್ರೀರಂಗಪಟ್ಟಣ, ಚಿತ್ರದುರ್ಗ, ದೇವನಹಳ್ಳಿ, ನಂದಿಬೆಟ್ಟ, ದಿಂಡಿಗಲ್, ಬಿದನೂರು, ಆಂಬೂರು, ಕುಂದಾಪುರ, ಮಂಗಳೂರು, ಮಡಿಕೇರಿ, ಮಧುಗಿರಿ, ಚಿಂತಾಮಣಿ, ಬೆಂಗಳೂರು ಮತ್ತು ಮಂಜರಾಬಾದುಗಳಲ್ಲಿವೆ.

ದಕ್ಷಿಣ ಭಾರತದಲ್ಲಿ ವಿಶಾಲ ರಾಜ್ಯವನ್ನು ವಿಸ್ತರಿಸಿಕೊಂಡಿದ್ದ ಈ ಇಬ್ಬರು ಅರಸರು ಕಟ್ಟಿಸಿದ ಕೋಟೆಗಳು ಉತ್ತರದಲ್ಲಿ ಕೊಪ್ಪಳದಿಂದ ದಕ್ಷಿಣದಲ್ಲಿ ದಿಂಡಿಗಲ್‌ವರೆಗೆ ವ್ಯಾಪಿಸಿದ್ದವು; ಪೂರ್ವದ ಅಂಬೂರಿನಿಂದ, ಪಶ್ಚಿಮದ ಮಂಗಳೂರು ತನಕ ಅವರು ಕೋಟೆಗಳು ಹರಡಿಕೊಂಡಿದ್ದವು. ಯುದ್ಧ ಆಯಕಟ್ಟಿನ ಸ್ಥಳಗಳನ್ನು ಆರಿಸಿ ಅವರು ಕೋಟೆಗಳನ್ನು ನಿರ್ಮಿಸಿದರು. ಅವರು ಬಹುತೇಕ ಕೋಟೆಗಳನ್ನು ಬೆಟ್ಟದ ನೆತ್ತಿಯ ಮೇಲೆ ನಿರ್ಮಿಸಿದ್ದರು. ಕಾರಣ ರಕ್ಷಣೆಯ ದೃಷ್ಟಿಯಿಂದ ಸುರಕ್ಷಿತವೂ, ನಿರ್ಮಾಣ ದೃಷ್ಟಿಯಿಂದ ಸುಲಭವೂ ಕಡಿಮೆ ವೆಚ್ಚದವೂ ಆಗಿದ್ದವು. ನಂದಿದುರ್ಗ (ನಂದಿಬೆಟ್ಟ), ಮಧುಗಿರಿ, ಚಿತ್ರದುರ್ಗ, ರಾಯಕೊಟ್ಟಾಯ್, ಜಗದೇವಿಪಲಾಯಮ್, ವೀರಭದ್ರ ದುರ್ಗ, ಶಂಕರಿದುರ್ಗ, ಹುತ್ರಿದುರ್ಗಾ, ಹುಲಿಯೂರ್‌ದುರ್ಗ, ಮುಳಬಾಗಿಲು, ಸಾವನದುರ್ಗ, ಹೀಗೆ ಅನೇಕ ಕಡೆ ಬೆಟ್ಟದ ಮೇಲೆ ಕೋಟೆ(ದುರ್ಗ)ಗಳನ್ನು ಹೈದರ್-ಟಿಪ್ಪು ಹೊಂದಿದ್ದರು.

ಮೈಸೂರು ರಾಜ್ಯದ ಅತ್ಯಂತ ಪ್ರಮುಖವಾದ ಕೋಟೆ ಶ್ರೀರಂಗಪಟ್ಟಣದ್ದು. ಕಾವೇರಿನದಿಯು ಸುತ್ತಲೂ ಹರಿಯುತ್ತಾ ಒಂದು ಸುರಕ್ಷಿತ ದ್ವೀಪವನ್ನಾಗಿ ಮೂಡಿದೆ. ಈ ಕೋಟೆಯ ಇತಿಹಾಸ ಕ್ರಿ.ಶ. ೧೪೧೪ರಷ್ಟು ಹಿಂದಕ್ಕೆ ಹೋಗುತ್ತದೆಯಾದರೂ, ಇದು ವಿಶ್ವದ ಗಮನ ಸೆಳೆದದ್ದು ಹೈದರ್-ಟಿಪ್ಪು ಕಾಲದಲ್ಲಿ. ಇದು ಅವರ ಕಾಲದಲ್ಲಿ ರಾಜ್ಯದ ಕೇಂದ್ರ ಬಿಂದುವಾಗಿತ್ತು. ಟಿಪ್ಪುಸುಲ್ತಾನ ಈ ಕೋಟೆಗೆ ಬಲವಾದ, ಉದ್ದವಾದ, ಅಗಾಧವಾದ ಬೃಹತ್ ಗೋಡೆಗಳನ್ನು, ಚೌಕಾಕಾರದ ಕೊತ್ತಳಗಳು, ಆಳವಾದ ಕಂದಕ, ಎತ್ತರವಾದ ಬುರುಜುಗಳನ್ನು ನಿರ್ಮಿಸಿ ಶ್ರೀರಂಗಪಟ್ಟಣ ಕೋಟೆಯನ್ನು ಬಲಪಡಿಸಿದನು. ದೆಹಲಿ ಬಾಗಿಲು, ಗಂಜಾಂ ಬಾಗಿಲು ಹಾಗೂ ಆನೆ ಬಾಗಿಲು ಎಂದು ಕರೆಯುವ ಮೂರು ಮಹಾದ್ವಾರಗಳು ಈ ಕೋಟೆಗೆ ಇವೆ. ಪೂರ್ವಕ್ಕಿರುವ ಆನೆ ಬಾಗಿಲನ್ನು ೧೭೯೧ರಲ್ಲಿ ಟಿಪ್ಪು ಕಟ್ಟಿಸಿದನು. ಕೋಟೆಯ ಸುತ್ತಲೂ ಎತ್ತರವಾದ ಮೂರು ಗೋಡೆಗಳಿದ್ದವು. ನಗರದ ಪ್ರತಿಯೊಂದು ಭಾಗಕ್ಕೂ ಕಾವೇರಿ ನದಿಯಿಂದ ಕಾಲುವೆಗಳ ಮೂಲಕ ನೀರನ್ನು ಪೂರೈಸುವ ವ್ಯವಸ್ಥೆ ಇತ್ತು. ೧೭೯೯ರಲ್ಲಿ ನಡೆದ ನಾಲ್ಕನೆಯ

ಮೈಸೂರು ಯುದ್ಧದಲ್ಲಿ ಟಿಪ್ಪು ಶತ್ರುಗಳ ವಿರುದ್ಧ ಹೋರಾಡುತ್ತಲೇ ವೀರ ಮರಣ ಹೊಂದಿದ.

ಐತಿಹಾಸಿಕ ಮಹತ್ವ ಹೊಂದಿರುವ ಈ ಬೃಹತ್ ಕೋಟೆಯನ್ನು ಇಂದು ಕಡೆಗಣಿಸಲಾಗಿದೆ. ಕೋಟೆಯ ಗೋಡೆಗಳನ್ನು ಇತಿಹಾಸ ಪ್ರಜ್ಞೆ ಇಲ್ಲದವರು ಹಾಳು ಮಾಡುತ್ತಿದ್ದಾರೆ. ರಾಜ್ಯ ಪುರಾತತ್ವ ಇಲಾಖೆ ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಂಡು ಈ ಸ್ಮಾರಕವನ್ನು ಸಂರಕ್ಷಿಸಬೇಕಾಗಿದೆ.

ಟಿಪ್ಪುಸುಲ್ತಾನ ಹುಟ್ಟಿದ ದೇವನಹಳ್ಳಿಯಲ್ಲಿ ಹೈದರಾಲಿ ಬಲವಾದ ಕಲ್ಲಿನ ಕೋಟೆಯನ್ನು ಕಟ್ಟಿಸಿದ್ದಾನೆ. ಇಂದಿಗೂ ಅದು ಭದ್ರವಾಗಿ ನಿಂತಿದೆ. ಕೋಲಾರ ಜಿಲ್ಲೆಯಲ್ಲಿನ ನಂದಿದುರ್ಗ (ನಂದಿಬೆಟ್ಟ) ಹೈದರ್-ಟಿಪ್ಪು ಕಾಲದಲ್ಲಿ ಬಹು ಪ್ರಾಮುಖ್ಯ ಪಡೆದುಕೊಂಡಿತ್ತು. ಹೈದರಾಲಿ ಈ ದುರ್ಗವನ್ನು ೧೭೭೦ರಲ್ಲಿ ಮರಾಠರಿಂದ ವಶಪಡಿಸಿಕೊಂಡಿದ್ದನು. ಇದು ಬಲವಾದ, ಭೇದಿಸಲಸಾಧ್ಯವಾದ ಕೋಟೆ. ಬೆಟ್ಟದ ಮೇಲೆ ಟಿಪ್ಪುವು ನಿರ್ಮಿಸಿದ ಸುಂದರ ಅರಮನೆಯೊಂದಿದೆ. ಬೆಟ್ಟದ ದಕ್ಷಿಣದಲ್ಲಿರುವ ಒಂದು ಕಡಿದಾದ ಸ್ಥಳವಿದ್ದು, ಅದನ್ನು 'ಟಿಪ್ಪು ಡ್ರಾಪ್ಸ್' ಎಂದು ಕರೆಯುತ್ತಾರೆ. ತಪ್ಪಿತಸ್ಥರನ್ನು ಈ ಪ್ರಪಾತಕ್ಕೆ ನೂಕಿ ಶಿಕ್ಷೆಯನ್ನು ನೀಡಲಾಗುತ್ತಿತ್ತು. ಈ ಅಭೇದ್ಯ ನಂದಿದುರ್ಗ ಕೋಟೆಯನ್ನು ಲಾರ್ಡ್‌ಕಾರ್ನ್‌ವಾಲಿಸ್ ನೇತೃತ್ವದ ಸೈನ್ಯ೧೭೯೧ ರಲ್ಲಿ ವಶಪಡಿಸಿಕೊಂಡಿತು.

ತುಮಕೂರು ಜಿಲ್ಲೆಯ ಮಧುಗಿರಿ ಮೊದಲು ಪಾಳೆಯಗಾರನೊಬ್ಬನು ನಿರ್ಮಿಸಿದ್ದ ಮಣ್ಣಿನ ಕೋಟೆಯನ್ನು ಹೊಂದಿತ್ತು. ಅದರ ಸ್ಥಾನದಲ್ಲಿ ಹೈದರಾಲಿ ಸುಂದರ ಕಲ್ಲಿನ ಕೋಟೆಯನ್ನು ನಿರ್ಮಿಸಿದನು. ಇದು ಸಹಾ ಬೆಟ್ಟದ ಮೇಲಿದೆ. ಈ ಕೋಟೆಯನ್ನು ೧೭೬೭ರಲ್ಲಿ ಮರಾಠ ಪೇಶ್ವೆ ಮಾಧವರಾವ್ ವಶಪಡಿಸಿಕೊಂಡು ಏಳು ವರ್ಷಗಳ ಕಾಲ ಆತನೊಂದಿಗೆ ಇಟ್ಟುಕೊಂಡಿದ್ದನು. ಮೈಸೂರು ರಾಜ್ಯಕ್ಕೆ ಮತ್ತೊಮ್ಮೆ ಸೇರಿಸಿಕೊಂಡಾಗ, ಟಿಪ್ಪು ಈ ಊರಿಗೆ 'ಫತೇಹಬಾದ್' ಎಂಬ ಹೆಸರಿಟ್ಟನು. ಆಗ ಮಧುಗಿರಿಗೆ ಮದ್ದಗಿರಿ ಹೆಸರಿತ್ತು.

ಟಿಪ್ಪುಸುಲ್ತಾನ ನಿರ್ಮಿಸಿದ ಹೊಸ ಕೋಟೆಗಳಲ್ಲಿ ಪ್ರಮುಖವಾದದ್ದು ಹಾಸನ ಜಿಲ್ಲೆಯಲ್ಲಿನ ಮಂಜರಾಬಾದ್ ಕೋಟೆ. ೧೭೯೨ರ ನಂತರ ಉತ್ತರವಾದ ಬಲಮ್ (ಬೇಲೂರು ಸುತ್ತಮುತ್ತಲಿನ ಪ್ರದೇಶ) ಪ್ರದೇಶದಲ್ಲಿ ಒಂದು ಕೋಟೆಯನ್ನು ನಿರ್ಮಿಸಲು ಟಿಪ್ಪು ಆಜ್ಞೆ ಮಾಡಿದನು. ಕೋಟೆಯು ಸಿದ್ಧವಾದ ತರುವಾಯ ಭೇಟಿ ನೀಡಿದಾಗ ಆ ಸ್ಥಳ ಮಂಜಿನಿಂದ ಆವೃತವಾಗಿದ್ದನ್ನು ಕಂಡು ಅದಕ್ಕೆ ಟಿಪ್ಪುಸುಲ್ತಾನನು ಮಂಜರಾಬಾದ್ ಎಂದು ಹೆಸರಿಟ್ಟನೆಂದು ಕೆಲ ಇತಿಹಾಸಕಾರರು ತಿಳಿಸುತ್ತಾರೆ.

ಥಾಮಸ್ ಡೇನಿಯಲ್ (೧೭೪೯-೧೮೪೦) ಮತ್ತು ವಿಲಿಯಮ್ ಡೇನಿಯಲ್ (೧೭೬೯-೧೮೩೭) ಎಂಬ ಇಬ್ಬರು ಬ್ರಿಟಿಷ್ ಚಿತ್ರ ಕಲಾವಿದರು ೧೭೯೨-೯೩ರ ಸಮಯದಲ್ಲಿ ದಕ್ಷಿಣಭಾರತಕ್ಕೆ ಭೇಟಿ ನೀಡಿದ್ದರು. ಅವರು ಬೆಂಗಳೂರಿನಿಂದ ಶ್ರೀರಂಗಮ್‌ಗೆ

ಹೋಗುವಾಗ ದಾರಿ ಮಧ್ಯದಲ್ಲಿನ ಹೊಸೂರು, ರಾಯ್‌ಕೊಟಾಯ್, ಜಗದೇವಿಪ ಲಾಯಂ, ವೀರಭದ್ರದುರ್ಗ ಮತ್ತು ಶಂಕರಿದುರ್ಗಗಳಿಗೆ ಭೇಟಿ ನೀಡಿದ್ದರು. ಈ ಎಲ್ಲ ಕೋಟೆಗಳನ್ನು ಬ್ರಿಟಿಷರ್ ೧೭೯೨ರ ಸಮಯದಲ್ಲಿ ಟಿಪ್ಪುಸುಲ್ತಾನನಿಂದ ವಶಪಡಿಸಿ ಕೊಂಡರು. ಥಾಮಸ್ ಮತ್ತು ವಿಲಿಯಂ ಡೇನಿಯಲ್ ಅವರು ಟಿಪ್ಪುಸುಲ್ತಾನನ ಈ ಕೋಟೆಗಳ ವರ್ಣಚಿತ್ರಗಳನ್ನು ರಚಿಸಿದ್ದಾರೆ. ಈಗ ಈ ವರ್ಣ ಚಿತ್ರಗಳು ಲಂಡನ್ನಿನ ಇಂಡಿಯನ್ ಆಫೀಸ್ ಲೈಬ್ರರಿಯಲ್ಲಿವೆ. ಇಂದು ಈ ಕೋಟೆಗಳ ಬಹುಭಾಗಗಳು ನಾಶವಾಗಿರುವುದರಿಂದ, ಥಾಮಸ್ ಮತ್ತು ವಿಲಿಯಂರ ವರ್ಣಚಿತ್ರಗಳು ಅಂದು ಟಿಪ್ಪುವಿನ ಕೋಟೆಗಳು ಹೇಗಿದ್ದವೆಂಬುದನ್ನು ತೋರಿಸಬಲ್ಲವು.

ಇಂದು ತಮಿಳುನಾಡಿನಲ್ಲಿರು ದಿಂಡಿಗಲ್ ಹೈದರಾಲಿಯ ಕಾಲದಲ್ಲಿ ಒಂದು ಪ್ರಭಾವಿಕೋಟೆಯಾಗಿತ್ತು. ಹೈದರನು ರಾಜಕೀಯವಾಗಿ ಬೆಳಕಿಗೆ ಬಂದದ್ದು ದಿಂಡಿಗಲ್ಲಿನ ಫೌಜುದಾರನಾಗಿದ್ದಾಗಲೇ. ಅಲ್ಲಿದ್ದ ಹಳೆಯ ಕೋಟೆಗೆ ಅವನು ಹೊಸರೂಪವನ್ನು ಕೊಟ್ಟನು. ಇಂದಿಗೂ ಈ ಕೋಟೆಯನ್ನು ಕಾಣಬಹುದು. ೧೭೫೭ರಲ್ಲಿ ವಶಪಡಿಸಿ ಕೊಂಡ. ಪಾಲಘಾಟ್ ಕೋಟೆಯನ್ನು ಹೈದರಾಲಿ, ೧೭೮೦ರಲ್ಲಿ ವಶಪಡಿಸಿಕೊಂಡ ಆಂಬೂರ್ ಕೋಟೆಯನ್ನು ಟಿಪ್ಪು ಭದ್ರಪಡಿಸಿದ.

ಬಿದನೂರನ್ನು ವಶಪಡಿಸಿಕೊಂಡ ಹೈದರಾಲಿ ಅದಕ್ಕೆ ಹೈದರನಗರ ಎಂದು ಹೆಸರಿಟ್ಟನು. ಅಲ್ಲಿನ ಕೋಟೆಯನ್ನು ಬಲಪಡಿಸಿ, ಅರಮನೆಯೊಂದನ್ನು ಕಟ್ಟಿಸಿದನು. ಟಂಕಸಾಲೆ, ಶಸ್ತ್ರಾಸ್ತ್ರಗಳು ಹಾಗೂ ಮದ್ದುಗುಂಡುಗಳ ತಯಾರಿಕೆಯ ಮುಖ್ಯ ಕೇಂದ್ರವಾಗಿಯೂ ಅದು ಪ್ರಾಮುಖ್ಯ ಗಳಿಸಿತ್ತು.

ಬೆಂಗಳೂರಿನ ಪ್ರಾಮುಖ್ಯ ಅರಿತ ತಂದೆ-ಮಗ ಇಬ್ಬರೂ ಅಲ್ಲಿನ ಕೋಟೆಗೆ ವಿಶೇಷ ಗಮನ ನೀಡಿದರು. ೧೫೩೭ರಲ್ಲಿ ಕೆಂಪೇಗೌಡನು ಅಲ್ಲೊಂದು ಮಣ್ಣಿನ ಕೋಟೆಯನ್ನು ನಿರ್ಮಿಸಿದ್ದನು. ಅದರ ಸ್ಥಾನದಲ್ಲಿ ಹೈದರನು ಬಲಿಷ್ಟವಾದ ಕಲ್ಲಿನ ಕೋಟೆಯನ್ನು ಕಟ್ಟಿಸಿದನು. ದೆಹಲಿ ಬಾಗಿಲು ಮತ್ತು ಮೈಸೂರು ಬಾಗಿಲು ಎಂಬ ಎರಡು ಬಾಗಿಲುಗಳಿದ್ದವು. ಮೂರನೇ ಮೈಸೂರು ಯುದ್ಧದಲ್ಲಿ ಬೆಂಗಳೂರು ಕೋಟೆ ಬ್ರಿಟಿಷರ ವಶವಾಯಿತು. ಆದರೆ ಶ್ರೀರಂಗಪಟ್ಟಣದ ಒಪ್ಪಂದದ ಪ್ರಕಾರ ಬೆಂಗಳೂರು ಮತ್ತೆ ಟಿಪ್ಪುಸುಲ್ತಾನನ ಕೈಗೆ ಬಂತು. ಅನಂತರ ಕೋಟೆಯನ್ನ ದುರಸ್ತಿಗೊಳಿಸಿ ಇನ್ನಷ್ಟು ಬಲಪಡಿಸಿದನು.

ಬೆಂಗಳೂರಿನ ಸಮೀಪದ ಸಾವನದುರ್ಗ ಹೈದರ್-ಟಿಪ್ಪು ಕಾಲದಲ್ಲಿ ಜಯಿಸಲಾಗದ ಗಿರಿದುರ್ಗ ಎಂದೇ ಪ್ರಸಿದ್ಧಿ ಪಡೆದಿತ್ತು. ಮಾರ್ಕ್‌ವಿಲ್ಕ್ಸ್ ಈ ಕೋಟೆಯನ್ನು ಮೈಸೂರಿನ ಅತಿ ಬಲಿಷ್ಟ ಕೋಟೆ ಎಂದು ಅಭಿಪ್ರಾಯ ಪಟ್ಟಿದ್ದಾನೆ. ಅಷ್ಟೇ ಅಲ್ಲ; ಈ ಕೋಟೆಯನ್ನು ವಶಪಡಿಸಿಕೊಳ್ಳುವುದು ಕಷ್ಟವೆಂದು ತಿಳಿದ ಕಾರ್ನ್‌ವಾಲಿಸ್ ಅದನ್ನು ಮುತ್ತಿಗೆ ಹಾಕುವುದು ಬೇಡವೆಂದು ನಿರ್ಧರಿಸಿದ್ದನು.

ಬೆಂಗಳೂರಿನ ಪಶ್ಚಿಮ ದಿಕ್ಕಿನಲ್ಲಿರುವ ಹುತ್ರಿದುರ್ಗ ಹೈದರ್-ಟಿಪ್ಪು ಕಾಲದ ಇನ್ನೊಂದು ಭದ್ರಕೋಟೆ. ಇದು ಕೂಡ ಬೆಟ್ಟದ ಮೇಲಿನ ಕೋಟೆ. ಮೂರನೇ ಮೈಸೂರು ಯುದ್ಧದಲ್ಲಿ ಬ್ರಿಟಿಷ್ ಸೇನೆ ಈ ಗಿರಿದುರ್ಗವನ್ನು ಮುತ್ತಿ ಅದರ ಕಿಲ್ಲೆದಾರನನ್ನು ಶರಣಾಗುವಂತೆ ಕೇಳಿದಾಗ ಆತ ಹೀಗೆ ಹೇಳಿದ್ದ "ನಾನು ೨೦ ವರ್ಷಗಳಿಂದ ಟಿಪ್ಪುವಿನ ಉಪ್ಪು ತಿಂದಿದ್ದೇನೆ. ನೀವು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಳ್ಳುವ ತನಕ ನಾನು ನಿಮಗೆ ಶರಣಾಗತನಾಗಲಾರೆ" ಆದರೆ ಆ ಕೋಟೆಯನ್ನು ತಮ್ಮದಾಗಿಸಿಕೊಳ್ಳಲು ನಿರ್ಧರಿಸಿದ್ದ ಬ್ರಿಟಿಷರು ಕಿಲ್ಲೆದಾರನ ಸಮೇತ ಹುತ್ರಿದುರ್ಗವನ್ನು ವಶಪಡಿಸಿಕೊಂಡರು.

ಕರ್ನಾಟಕದ ಕೊನೆಯ ಸ್ವತಂತ್ರ ರಾಜ ಟಿಪ್ಪುಸುಲ್ತಾನ. ಅವನ ಮರಣಾನಂತರ ಕೋಟೆಗಳ ನಿರ್ಮಾಣ ಸ್ಥಗಿತಗೊಂಡಿತು.

ಧರ್ಮ : ತತ್ವಶಾಸ್ತ್ರದ ನೆಲೆಯಲ್ಲಿ

— ಎಂ. ಅನುಸೂಯ

ಧರ್ಮ ಎನ್ನುವುದು ಪ್ರತಿಯೊಬ್ಬರಿಗೂ ಬಹಳ ಪರಿಚಿತವಾದುದು. ಪ್ರತಿನಿತ್ಯದ ಬದುಕಿನಲ್ಲಿ ನಾವು ಒಂದಲ್ಲ ಒಂದು ರೀತಿಯಲ್ಲಿ ಅದನ್ನು ಅನುಷ್ಠಾನ ಮಾಡುತ್ತಿರುತ್ತೇವೆ. ಅದರಲ್ಲೂ ಧರ್ಮವನ್ನು ಮತೀಯ ಭಾವನೆಯಲ್ಲೇ ಇಂದು ಹೆಚ್ಚು ಹೆಚ್ಚಾಗಿ ಬಳಸುತ್ತಿದ್ದೇವೆ. ಆದರೆ ಧರ್ಮವೆಂದರೆ ನ್ಯಾಯ, ನಿಷ್ಠೆ, ನಿಯಮವೆಂದು ಧರ್ಮಶಾಸ್ತ್ರ, ಧರ್ಮಸೂತ್ರ ಮುಂತಾದ ಗ್ರಂಥಗಳಲ್ಲಿ ತಿಳಿಸಲಾಗಿದೆ. ಹಾಗಾಗಿ ಧರ್ಮ ಎನ್ನುವಂತಹದ್ದು ಋಜು. ನ್ಯಾಯವಾದ ದಿಕ್ಕಿನಲ್ಲಿ ಸಂಚರಿಸುವಂಥದ್ದಾಗಿದ್ದು, ಕರ್ತವ್ಯ ಶ್ರದ್ಧೆ ಮುಂತಾದ ನಾನಾ ಅರ್ಥಗಳನ್ನು ಒಳಗೊಂಡಿದೆ. ಧರ್ಮವು ಆಧ್ಯಾತ್ಮಿಕ, ಸಾಂಸ್ಕೃತಿಕ ಸಾಮಾಜಿಕ, ನೈತಿಕ ಅರ್ಥಗಳಿಂದಲೂ ಒಡಗೂಡಿರುವಂಥದ್ದು. ಅಂದರೆ ಒಂದು ವಸ್ತುವಿನ ಮೂಲಸ್ವಭಾವ, ಸ್ವರೂಪವನ್ನು ಧರ್ಮವೆಂದು ಕರೆಯಬಹುದು. ಉದಾಹರಣೆಗೆ ಗಾಳಿಯ ಧರ್ಮ ಬೀಸುವಿಕೆ, ಬೆಂಕಿಯ ಧರ್ಮ ಸುಡುವಿಕೆ.

ಧರ್ಮ ಮತ್ತು ತತ್ವಶಾಸ್ತ್ರಗಳ ಆತ್ಮೀಯ ಸಂಬಂಧವು ಜೊತೆ ಜೊತೆಯಾಗಿಯೇ ತನ್ನ ಬೆಳವಣಿಗೆಯ ಪಥವನ್ನು ಹೊಂದಿದ್ದು, ಮಾನವ ತನ್ನ ಬದುಕಿನ ರಹಸ್ಯವನ್ನು ಅರಿಯುವುದೇ ಅದರ ಮುಖ್ಯ ಉದ್ದೇಶವಾಗಿದೆ. ಆದರೆ ಪ್ರಸ್ತುತ ಧರ್ಮವೆಂಬ ಕವಚವನ್ನುಧರಿಸಿದ ಮಾನವ ಅಂಧಶ್ರದ್ಧೆಗಳನ್ನು ಮೈಗೂಡಿಸಿಕೊಂಡು ನಾಮ, ವಿಭೂತಿಗಳನ್ನು ಧರಿಸುತ್ತಾ ಕಪಟ ಧಾರಿಯಾಗಿ ಪರಸ್ಪರ ಹೋರಾಡುತ್ತಿದ್ದು, ಪ್ರತಿಯೊಂದು ಧಾರ್ಮಿಕ ಪಂಗಡದವರೂ ತಾವು ಮಾತ್ರ ಇರಬೇಕೆಂದು ಅದು ಮಾತ್ರವೇ ಉನ್ನತವಾದುದದ್ದು, ಶ್ರೇಷ್ಠವಾದುದು, ತಮ್ಮ ಧರ್ಮವನ್ನೇ ಎಲ್ಲೆಡೆಗೂ ವಿಸ್ತರಿಸಿ ಕೊಳ್ಳಬೇಕೆಂದು ಸಂಕುಚಿತ ಧ್ಯೇಯೋದ್ದೇಶಗಳಿಂದ ಬಹಳ ಬಿರುಸಾಗಿ ಇಂದು ಕಾರ್ಯನಿರತರಾಗಿದ್ದಾರೆ. ಇಂತಹವರು ಮಾನವರಿಗೇಕೆ ? ದೇಶಕ್ಕೆ ದುಷ್ಕೃತ್ಯವನ್ನು ಎಸಗುತ್ತ ಜನರಲ್ಲಿ ಶಾಂತಿಯನ್ನು ಬಿತ್ತುವುದರ ಬದಲಿಗೆ ಅಶಾಂತಿಯನ್ನ ಬಿತ್ತುತ್ತ ಕಲುಷಿತ ವಾತಾವರಣವನ್ನು ನಿರ್ಮಿಸಲು ಮುಂದಾಗುತ್ತಿದ್ದಾರೆ. ನಿಜವಾದ ಧರ್ಮವು ಮಾನವ ಸೇವೆಗೆ ಪ್ರಾಧಾನ್ಯವನ್ನು ನೀಡುವಂಥದಾಗಿದ್ದು "ಜನರ ಸೇವೆ ಜನಾರ್ಧನನ ಸೇವೆ." ಶರೀರವಿರುವುದು ಪರರ ಸೇವೆಗಾಗಿ, ಕಾಯಕವೇ ಕೈಲಾಸ ಮುಂತಾದ

ಮಾತುಗಳಿಂದ ಸ್ಪಷ್ಟವಾಗಿದ್ದರೂ ವಿಶಾಲತ್ವದೆಡೆಗೆ ಚಲಿಸುವುದರ ಬದಲಿಗೆ ಸಂಕುಚಿತತೆಯೆಡೆಗೆ ಹೆಚ್ಚು ಹೆಚ್ಚು ಸಾಗುತ್ತಿರುವುದು ವಿಷಾದನೀಯ.

ಧರ್ಮವು ಶುಷ್ಕವಾದ ಆಚರಣೆಯಲ್ಲ. ಅದು ನೈಜತೆಯನ್ನು ಒಳಗೊಂಡಿದ್ದು ನಮ್ಮೊಳಗಿನ ಅಂತಃಸತ್ವವನ್ನ ತಿಳಿಯುವಂತಾಗಿದೆ. ಧರ್ಮವು ಬೆಳಕಿನಂತೆ ಮಾನವನ ಬದುಕಿನಲ್ಲಿ ಪ್ರಜ್ವಲಿಸುತ್ತಿರಬೇಕೇ ವಿನಃ ಅದು ಕ್ಷುಲ್ಲಕ ಆಚರಣೆಗಳಿಂದ ಅನುಷ್ಠಾನಗೊಳ್ಳದೆ ಅದರ ನೈಜ ಅರಿವಿನಿಂದ ಅದು ತನ್ನ ಉನ್ನತಿಯನ್ನು ಸಾಧಿಸುವಂತಾಗಬೇಕು. ಅದರ ನೈಜ ಸ್ವರೂಪದ ಸ್ವಅನುಭವ ಮಾನವನ ಅಂತರಂಗದಲ್ಲಿ ಸೃಜಿಸಲ್ಪಡುವಂತಾಗಿರಬೇಕು. "ಧರ್ಮದ ಪಥವು ಹಲವಾರು" ಎನ್ನುವ ಶ್ರೀ ರಾಮಕೃಷ್ಣರು "ಮಾರ್ಗಗಳು ಅನೇಕ ಹಾಗೆಯೇ ಮತಗಳು ಅನೇಕ" ಎಂದಿದ್ದಾರೆ. ಅಂದರೆ ಆ ಮಾರ್ಗಗಳೆಲ್ಲವೂ ಒಂದೇ ದಿಕ್ಕಿನತ್ತ ಹೊರಟಿವೆ ಎಂಬ ಅಂಶವೇ ಮುಖ್ಯವೆನ್ನುವ ಅವರು ಧರ್ಮದ ಪ್ರತಿಯೊಂದು ಮಾರ್ಗವು ಸ್ಪಷ್ಟವಾಗಿದ್ದು, ಅದರ ಅನುಭವ ಸಾಧ್ಯವಾದಾಗಲೇ ಎಲ್ಲ ರೀತಿಯ ಅಸ್ಪಷ್ಟತೆಯಿಂದಲೂ ದೂರವಾಗಿ, ನಮ್ಮ ಜ್ಞಾನವು ತೆರೆದಿಟ್ಟ ಪುಸ್ತಕಕ್ಕಿಂತಲೂ ಹೆಚ್ಚು ಹತ್ತಿರವಾಗುತ್ತದೆ. ಆಗಲೇ ಅಲ್ಲಿ ಜಗತ್ತಿನ ಹಿತ, ಮಾನವ ಕುಲದ ಔನ್ನತ್ಯದ ದೃಷ್ಟಿಯು ಗೋಚರಿಸುತ್ತದೆ. ಎಲ್ಲ ನದಿಗಳ ನೀರು ಹರಿಯುತ್ತಾ ಹರಿಯುತ್ತಾ ಸಾಗರವನ್ನು ಸೇರುವಂತೆ, ಮಾನವನು ಮಾನವನನ್ನು ಕುರಿತ ಚಿಂತನೆಗಳೇ 'ಧರ್ಮ' ಎನ್ನುವ ವಿಶಾಲ ತತ್ವದೊಳಗೆ ಒಂದಾಗಬೇಕಾದ ಅಗತ್ಯವನ್ನು ಶ್ರೀರಾಮಕೃಷ್ಣರು ಒತ್ತಿ ಹೇಳಿದ್ದಾರೆ. ಅವರ ಪ್ರಕಾರ ಅದೇ ಮಾನವ ಧರ್ಮ ಕೂಡ. ಅದು ಸದಾ ಒಂದೇಯಾಗಿದ್ದು ಅಲ್ಲಿ ಭಿನ್ನಾಭಿಪ್ರಾಯಗಳಿಗೆ ಎಡೆಯಿಲ್ಲದಂತಾಗಬೇಕು. ಏಕೆಂದರೆ ನೈಜವಾದ ಧಾರ್ಮಿಕ ಪ್ರವೃತ್ತಿಯು ನಮ್ಮಗಳ ಅಂತಃ ಸತ್ವದಲ್ಲಿಯೇ ಇರುವಂಥದಾಗಿದ್ದು ಮಾನವನ ಎಲ್ಲ ಭಾವನೆಗಳಲ್ಲಿ ಪರಮ ಶ್ರೇಷ್ಠವಾದುದು ಧರ್ಮ. ಇಂತಹ ಉನ್ನತವಾದ ತತ್ವವು ಅದರಲ್ಲಿ ಐಕ್ಯಗೊಂಡಿದ್ದರೂ ಇದನ್ನರಿಯದ ಮಾನವ ಅದಕ್ಕೆ ಅನರ್ಥವನ್ನು ಹಾಗೂ ವಿಭಿನ್ನವಾದ ರೀತಿಯಲ್ಲಿ ಅದನ್ನು ತನ್ನ ಸ್ವಾರ್ಥದ ದೃಷ್ಟಿಯಿಂದ ಎಳೆದಾಡಲು ಹೊರಟಿದ್ದಾನೆ. ಈ ಹಿನ್ನೆಲೆಯಲ್ಲಿಯೇ ಧರ್ಮದಲ್ಲಿ ಹರಿದಷ್ಟು ರಕ್ತದ ಹೊಳೆಯು ಬೇರಾವ ಕ್ಷೇತ್ರದಲ್ಲಿಯೂ ಹರಿದಿಲ್ಲ. ಧರ್ಮದ ಏಕತೆಯ ಸತ್ಯವನ್ನು ಮನಗಾಣದೆ ಹೋದರೆ, ಧರ್ಮವು ಮನುಷ್ಯನನ್ನು ಕ್ರೂರಿಯನ್ನಾಗಿ ಮಾಡುವಷ್ಟು ಹರಿತವಾದುದು. ಈ ರೀತಿಯ ಕ್ರೂರತ್ವವು ಧರ್ಮವನ್ನು ಆಚರಿಸುವ ಮೌಢ್ಯದ ಆಡಂಬರಗಳಿಂದ ಉದ್ಭವಿಸುತ್ತದೆ. ಮನುಷ್ಯನ ಆಂತರಿಕ ನೈಜ ಸ್ವಭಾವದಲ್ಲಿ ಮಾನಸಿಕ ಶಾಂತಿ ಅಗತ್ಯವಾದುದು. ಇದು ಧಾರ್ಮಿಕ ನೆಲೆಯಲ್ಲಿ ಆವಶ್ಯಕ ಅಂಶಕೂಡ. ಆದ್ದರಿಂದ ಧರ್ಮ ಎಂಬುದು ವಿಶ್ವದೊಡನೆ ವಿಶ್ವಬಾಂಧವ್ಯವನ್ನು ಬೆಳೆಸುವಂಥದಾಗಿರಬೇಕು. ಆದ್ದರಿಂದ ಅದರ ಅರ್ಥವೇ ವಾಸ್ತವವನ್ನು, ಸತ್ಯವನ್ನು, ಎತ್ತಿ ಹಿಡಿಯುವುದು, ಸಂರಕ್ಷಿಸುವುದು ಎಂದು ಧರ್ಮದ ಸಮಾನಶಬ್ದವಾದ ಇಂಗ್ಲಿಷ್‌ನ 'Religion' ಎಂಬ ಶಬ್ದ ಸಹ

'ಒಟ್ಟು ಗೂಡಿಸು' ಎಂಬರ್ಥವನ್ನೇ ಪಡೆದಿದೆ. ಧರ್ಮದಲ್ಲಿನ ಸತ್ಯವು ಸಾರ್ವತ್ರಿಕ ಸತ್ಯತೆಯನ್ನು ಒಳಗೊಂಡಿರಬೇಕು ಎನ್ನುವ ಶ್ರೀ ರಾಮಕೃಷ್ಣರು, ಸಾರ್ವತ್ರಿಕ ಸತ್ಯಗಳು ಅತಿ ಶೀಘ್ರದಲ್ಲಿಯೇ ದೊರೆಯುವಂಥದ್ದಲ್ಲ. ಅದು ದೊರೆಯಲು ಸಾಧನೆಯ ಅವಶ್ಯಕತೆಯಿದೆ. ಇಂತಹ ಸಾಧನಸಮಯಗಳಲ್ಲಿ ಎಲ್ಲ ರೀತಿಯ ಮನೋಭಾವಗಳು ಅಭಿಪ್ರಾಯಗಳನ್ನು ಪರಿಗಣಿಸ ಬೇಕಾಗುತ್ತದೆ. "ಮೊತ್ತ ಮೊದಲು ಕೇಳಬೇಕು, ಮೊತ್ತ ಮೊದಲು ವಿಚಾರ ಮಾಡಿ ತಿಳಿಯಬೇಕು. ಬಳಿಕ ಸತ್ಯದ ಅನುಭವ ಹೊಂದಬೇಕು." ಎನ್ನುವ ಶ್ರೀರಾಮಕೃಷ್ಣರು ಧಾರ್ಮಿಕ ಸತ್ಯದ ಬಗೆಗಿನ ಅರಿವಿನ ಅನುಭವವು ಬಹಳ ಗಾಢವಾಗುತ್ತಾ ಬಂದ ಹಾಗೆಲ್ಲಾ ಭಿನ್ನತೆ, ಭಿನ್ನಾಭಿಪ್ರಾಯ, ಮತಾಂಧತೆಗಳು ಶಾಂತವಾಗಿ ಬಿಡುತ್ತವೆ ಎನ್ನುತ್ತಾರೆ. ಅಂದರೆ ನಮ್ಮನ್ನು ಧರ್ಮದ ಆಳಕ್ಕೆ ಒಯ್ದಂತೆಲ್ಲಾ ಬಾಹ್ಯ ಆಚರಣೆಗಳೆಲ್ಲ ಹೇಳ ಹೆಸರಿಲ್ಲದಂತಾಗುತ್ತವೆ. ಧರ್ಮದ ಅನುಭವದ ಅಗತ್ಯತೆಯ ಬಗ್ಗೆ ಒತ್ತಿ ಹೇಳುತ್ತಾ ಧರ್ಮದ ಅನುಭವಕ್ಕೆ ಚಿತ್ತಶುದ್ಧಿ ಹೇಗೆ ಮುಖ್ಯವಾದುದೊ ಅಂತೆಯೇ ನಮ್ರತೆಯೂ ಬಹಳ ಮುಖ್ಯವಾದುದು.

ಶ್ರೀರಾಮಕೃಷ್ಣರು ಅಭಿಪ್ರಾಯಪಡುವಂತೆ ಧರ್ಮಗಳು ವಿಶ್ವಧರ್ಮವಾಗಬೇಕು. ಅಂದರೆ ವಿಶ್ವಧರ್ಮವೆಂದ ಮಾತ್ರಕ್ಕೆ ಒಂದೇ ಧರ್ಮವೆಂದಾಗಲಿ, ಅಭಿಪ್ರಾಯ ವೆಂದಾಗಲೇ ಅದರ ಅರ್ಥವಲ್ಲ. ಎಲ್ಲ ರೀತಿಯಾದ ಚಿಂತನೆಗಳು ಏಕ ಪ್ರಕಾರವಾಗಿರಲು ಸಾಧ್ಯವಿಲ್ಲ. ಹಾಗೆಯೇ ಅದು ಸಹಜವೂ ಆಗಿರಲು ಸಾಧ್ಯವಿಲ್ಲ. ಒಂದೇ ರೀತಿಯಾದಂತಹ ಸಿದ್ಧಾಂತಗಳು, ಆಚರಣೆಗಳು, ಅಭಿಪ್ರಾಯಗಳು ಧರ್ಮದ ವಿಶಾಲ ವಾದ ಅರ್ಥವ್ಯಾಪ್ತಿಗೆ ಅಡ್ಡಿಯನ್ನುಂಟು ಮಾಡುತ್ತವೆ. ಯಾವುದೋ ಒಂದು ದಿಕ್ಕಿನಲ್ಲಿ ಇವು ಬಹಳ ಸಂಕುಚಿತವಾಗಿ 'ಇದು ಮಾತ್ರವೇ ಸರಿ' ಎಂಬ ಒಂದೇ ಅಭಿಪ್ರಾಯಕ್ಕೆ ಜೋತು ಬೀಳುತ್ತಿದ್ದೇವೆ. 'ಲೋಕೋಭಿನ್ನರುಚಿ' ಎಂಬಂತೆ ವೈವಿಧ್ಯತೆಯಿರುವಡೆಯಲ್ಲಿ ಆಕರ್ಷಣೆ ಸೊಗಸು. ಉಲ್ಲಾಸ, ಸಹಜತೆ ನಮ್ಮ ಮನಸ್ಸಿನಲ್ಲಿ ಮನೆಮಾಡಿಕೊಳ್ಳುತ್ತದೆ. ಇಲ್ಲಿ ಮುಖ್ಯವಾಗುವ ಅಂಶವೆಂದರೆ, ವೈವಿಧ್ಯತೆಯು ಧರ್ಮದ ಅಭಿವೃದ್ಧಿಯ ಜೀವಾಳ ವಾಗಿ ವ್ಯಕ್ತಿ ತನ್ನ ಭಾವನೆಗಳನ್ನು ಉತ್ತುಂಗ ಮಟ್ಟಕ್ಕೇರಿಸುವ ನಿಟ್ಟಿನಲ್ಲಿರಬೇಕು. ಈ ದಾರಿಯಲ್ಲೇ ಅನುಷ್ಠಾನಗೊಳ್ಳ ಬೇಕಾದುದು ಕೂಡ ಅವಶ್ಯಕವಾದುದು. ಮೂಲತಃ ನಾವೆಲ್ಲ ಒಂದೇ ಸ್ವರೂಪವನ್ನು ಹೊಂದಿರುವೆವು ಎನ್ನುವುದನ್ನು ಸದಾ ಮನಗಾಣು ವಂತದ್ದಾಗಿರಬೇಕು ಎಂದಿದ್ದಾರೆ ಶ್ರೀ ರಾಮಕೃಷ್ಣರು. ಅಂದರೆ ಮಾನವ ಮಾನವನಾಗಿದ್ದು ಕೊಂಡು ಮನುಷ್ಯತ್ವನ್ನು ಬಿತ್ತಿ ಬೆಳೆಸಲು ಪ್ರಯತ್ನಿಸಬೇಕೇ ವಿನಃ ಕ್ರೂರಿಯಾಗಿ ವರ್ತಿಸಲು ತೊಡಗಬಾರದು. ಆದ್ದರಿಂದಲೇ ವಿವೇಕಾನಂದರು ನಮ್ಮ ಸ್ವರೂಪದಿಂದಲೇ ಏಕತೆಯನ್ನು ಹೇಗೆ ಒಪ್ಪಿಕೊಂಡಿರುವವೋ ಹಾಗೆಯೇ ವೈವಿಧ್ಯತೆಯನ್ನೂ ಒಪ್ಪಿಕೊಳ್ಳ ಬೇಕಾಗುತ್ತದೆ ಎಂದಿದ್ದಾರೆ. ಅವರ ಪ್ರಕಾರ ಧರ್ಮ ಎಂದರೆ ಸಾಕ್ಷಾತ್ಕಾರ. ನಮ್ಮ ಹೃದಯಾಂತರಾಳದಲ್ಲಿ ಆತ್ಮ ಸಾಕ್ಷಾತ್ಕಾರದ ಅರುಣೋದಯವಾದಾಗಲೇ 'ಧರ್ಮ'

ನಿಜವಾದ ಅರ್ಥದಲ್ಲಿ ಪ್ರಾರಂಭವಾಗುವುದು. ಆಗಲೇ ಮಾನವ ನೈತಿಕತೆಯ ಉನ್ನತ ಶಿಬಿರವನ್ನು ಮುಟ್ಟಲು ಸಾಧ್ಯವಾಗುವುದು. ಮಾನವರಲ್ಲಿ ಪರಸ್ಪರ ಪ್ರೀತಿ, ದಯೆ, ಭಕ್ತಿ ಗೌರವಗಳ ಉನ್ನತ ಅಭಿವ್ಯಕ್ತಿಯೇ ಧರ್ಮವಾಗುವುದು, ಅದೊಂದು ಜ್ಞಾನದ ದೀವಿಗೆ ಎಂಬುದು ಸ್ವಾಮಿ ವಿವೇಕಾನಂದರ ಅಭಿಮತ.

ಧರ್ಮವನ್ನು ಕುರಿತು ಸ್ವಾಮಿ ವಿವೇಕಾನಂದರ ದೃಷ್ಟಿಕೋನವು ವೈಜ್ಞಾನಿಕವಾದುದು, ವೈಚಾರಿಕವಾದುದು ಹಾಗೂ ಕ್ರಾಂತಿಕಾರಿಯಾದುದು. ಧರ್ಮ ಮಾನವನನ್ನು ನಿಜವಾದ ಅರ್ಥದಲ್ಲಿ 'ಮಾನವ'ನನ್ನಾಗಿ ರೂಪಿಸುವಂತಾಗಬೇಕು ಎಂದು ಸಾರಿದ್ದಾರೆ. ಸತ್ಯ ಎಂಬುದು ಸಾರ್ವಜನಿಕವಾಗಿದ್ದು ದೇವರು ಹಾಗೂ ಧರ್ಮದ ಹೆಸರಿನಲ್ಲಿ ಇಂದು ಕೋಮುಗಲಭೆಗಳನ್ನು, ಜಾತಿ ಮತಗಳನ್ನು ಹುಟ್ಟುಹಾಕುತ್ತಾ ಜನ ಸಾಮಾನ್ಯರ ಮುಗ್ಧತೆಯನ್ನೇ ಮುಖ್ಯ ಬಂಡವಾಳವನ್ನಾಗಿ ಮಾಡಿಕೊಳ್ಳುತ್ತಾ ಮಾನವನ ಬದುಕಿಗೆ ಪೂರಕವಾಗುವುದರ ಬದಲಿಗೆ ಘೋರ ವೈಮನಸ್ಸನ್ನು ಬಿತ್ತುವುದರಲ್ಲಿ ದಾಪುಗಾಲಿಡುತ್ತಿದ್ದಾರೆ. ಪಟ್ಟಭದ್ರ ಹಿತಾಸಕ್ತಿಗಳ, ಜಾತಿ ಕಟ್ಟುಪಾಡುಗಳ ಬಿಗಿ ವ್ಯವಸ್ಥೆಯಾಗಿ ಧರ್ಮ ಪರಿಣಮಿಸುತ್ತಿದೆ. ಮಾನವ ಮಾನವರ ನಡುವೆಯೇ ಅಡ್ಡಗೋಡೆಗಳನ್ನು ಭದ್ರವಾಗಿ ಕಟ್ಟುವುದರಲ್ಲಿ ಹಾಗೂ ಧರ್ಮದ ಬಾಹ್ಯ ಆಚರಣೆಗಳಲ್ಲೇ ವ್ಯಕ್ತಿ ಹೆಚ್ಚು ಒಲವು ಆಸಕ್ತಿಯನ್ನು ಬೆಳೆಸಿ ಕೊಳ್ಳುವುದರಲ್ಲಿ ಉತ್ಸುಕನಾಗುತ್ತಿದ್ದಾನೆ. ಧರ್ಮದ ಸತ್ವಕ್ಕೆ ನಾವು ಮುಖ್ಯವಾಗಿ ಗಮನ ಹರಿಸಬೇಕೇ ವಿನಃ ಅದರ ಕಟ್ಟುಪಾಡು ಆಚರಣೆಗಳಿಗಲ್ಲ. ಸಜ್ಜನಿಕೆ, ಸೌಜನ್ಯ, ಸೌಮನಸ್ಯ, ಸಹೃದಯತೆಗೆ ಮತ್ತೊಂದು ಹೆಸರೇ ಧರ್ಮವೆಂದಿದ್ದಾರೆ ಸ್ವಾಮಿ ವಿವೇಕಾನಂದರು.

ಶ್ರೀರಾಮಕೃಷ್ಣರ ಮನೋಭಾವ ಸದಾ ಉದಾರವಾದ ಸಮನ್ವಯ ಧರ್ಮದೆಡೆಗೆ. ಎಲ್ಲ ಧರ್ಮಗಳೂ ನಮ್ಮನ್ನು ದೇವರೆಡೆಗೆ ಕೊಂಡೊಯ್ಯುತ್ತವೆ ಎಂಬುದನ್ನು ಅವರು ಆಚರಿಸಿ ತೋರಿಸಿದವರು. ಅಂದರೆ ಸಾರದಲ್ಲಿ ಎಲ್ಲ ಧರ್ಮಗಳೂ ಒಂದನ್ನೇ ಬೋಧಿಸುತ್ತವೆ. ಅದೇ 'ದೇವರ ಸಾಕ್ಷಾತ್ಕಾರ' ಅವು ಒಂದೇ ವೃಕ್ಷದ ವಿವಿಧ ಕೊಂಬೆಗಳು. ವಿವಿಧ ಧರ್ಮಗಳು ಕೇವಲ ನಾಮಗಳು. ಎಲ್ಲವೂ ಪ್ರತಿಯೊಂದರಷ್ಟೇ ಮಹತ್ವವಾದುದು, ಸತ್ಯವಾದವುಗಳು ಹಾಗೂ ಪರಿಣಾಮಕಾರಿಯಾದುವು. ಎಲ್ಲವೂ ರಾಜಮಾರ್ಗಗಳು. ಅವನ್ನು ಅಚಲ ಶ್ರದ್ಧೆಯಿಂದ ಅನುಸರಿಸಬೇಕು ಎಂದು ಶ್ರೀರಾಮಕೃಷ್ಣರು ಸಾರಿದ್ದಾರೆ. ಅಂದರೆ ಧರ್ಮ ನಮ್ಮ ಪಾಲಿನ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡಲು ಇರುವಂತಹ ರಾಜಮಾರ್ಗವೇ ವಿನಃ ಅದು ಅಧಃಪತನಕ್ಕೆ ಎಳೆದೊಯ್ಯುವ ಹಾದಿಯಾಗಬಾರದು ಎಂದು ಎಚ್ಚರಿಸಿದ್ದಾರೆ. "ಎಲ್ಲಾ ಮಾರ್ಗಗಳಿಂದಲೂ ಆತನ (ದೇವರ) ಸಾಕ್ಷಾತ್ಕಾರವನ್ನು ಪಡೆಯಬಹುದು. ನಮ್ಮ ಧರ್ಮವೇ ಸರಿ, ಉಳಿದವರದೆಲ್ಲ ಸರಿಯಿಲ್ಲ ಎಂಬ ಭಾವನೆ ಕೂಡದು. ಭಗವಂತ ಒಬ್ಬನೇ ವಿನಃ ಇಬ್ಬರಲ್ಲ. ಆತನನ್ನು 'ಗಾಡ್' ಅಂತ ಕರೆಯುತ್ತಾರೆ. ಇನ್ನು ಕೆಲವರು 'ಅಲ್ಲಾ' ಎಂದು ಕರೆಯುತ್ತಾರೆ. ಮತ್ತೆ ಕೆಲವರು

ಕೃಷ್ಣ, ಶಿವ, ಬ್ರಹ್ಮ, ಹೀಗೆಲ್ಲಾ ಕರೆಯುತ್ತಾರೆ. ಅಂದರೆ ಅವರವರ ಮನೋಭಾವನೆಗೆ ಅನುಗುಣವಾಗಿರುತ್ತದೆ ಅಷ್ಟೇ.

ಧಾರ್ಮಿಕ ವ್ಯಕ್ತಿಗಳ ಮನೋಭಾವವು ಮಾನವರ ಬಗ್ಗೆ ಕರುಣೆ ಹಾಗೂ ಅನುಕಂಪವನ್ನು ಹೊಂದಿರಬೇಕು. ಮಾನವನು ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಪ್ರೀತಿಗೌರವಗಳಿಂದ ಕಾಣುವ ಮನೋಭಾವನೆಯಸ್ನು ಬೆಳೆಸಿಕೊಳ್ಳುವಂತವನಾಗಿರಬೇಕು. ಧರ್ಮಗಳೆಲ್ಲವು ಮಾನವರ ಕಲ್ಯಾಣಕ್ಕಾಗಿ ಕೆಲಸ ಮಾಡುವ ನಿಟ್ಟಿನಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಈ ಕಾರಣದಿಂದಲೇ ಬಸವಣ್ಣನವರು 'ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು' ಎಂದು ಮೊದಲು ಲೌಕಿಕ ಬದುಕಿಗೆ ಬಹಳ ಪ್ರಾಮುಖ್ಯವನ್ನು ನೀಡಿರುವರು. ಪ್ರಾಪಂಚಿಕ ಜೀವನದಲ್ಲಿ ಜೀವಿಸುತ್ತಿರುವ ನಾವು ಮೊದಲು ಇಲ್ಲಿನ ಒಳಿತಿಗಾಗಿ ತಮ್ಮ ಸದ್ವರ್ತನೆ ಏನೆಂಬುದನ್ನು ಅರಿತುಕೊಳ್ಳಬೇಕಾದುದು ಬಹಳ ಮುಖ್ಯವಾದುದು. ಏಕೆಂದರೆ ದುಃಖಿಗಳ ದರಿದ್ರರ ಸೇವೆಯೇ ಅತ್ಯುತ್ತಮವಾದ ದೇವರ ಸೇವೆಯೆಂದು ವಿವೇಕಾನಂದರು ಪ್ರತಿಪಾದಿಸಿದ್ದಾರೆ. ಮೂಢರು ದೀನ-ದಲಿತರು ಮೊದಲು ಉನ್ನತಿಯೆಡೆಗೆ ಸಾಗಲು ಪ್ರೇರಕ ಶಕ್ತಿಯಾಗಿ ನಿಂತು ಅವರಿಗೆ ಅವಕಾಶವನ್ನು ನೀಡುವಂತಾಗಬೇಕು.

ಆದರೆ ಆಧುನಿಕ ಮಾನವನದು ಭೋಗತತ್ವ ಮನೋಧರ್ಮವಾಗಿದೆ. ಮಾನವನ ಬದುಕಿಗೆ ಆಧ್ಯಾತ್ಮಿಕ ಗುರಿಯೊಂದಿದೆ ಎಂಬ ವಿಚಾರವನ್ನು ಆತನು ಮರೆಯುತ್ತಿದ್ದಾನೆ. ಧರ್ಮ ಬರಿಯ ಮಾತಿನ ಆಚಾರವಲ್ಲ. ಧರ್ಮವೆಂದರೆ ನುಡಿದಂತೆ ನಡೆದುಕೊಳ್ಳುವುದು ಕೂಡ. ಅದು ಕೇವಲ ನಂಬಿಕೆಯಂತೆ ನಟಿಸಿ ಮೋಸಗೊಳಿಸುವಂಥದ್ದಲ್ಲ. ನಂಬಿಕೆಯಂತೆ ಬಾಳುವುದು. ಧರ್ಮ ನಿಷ್ಠೆಯು ತತ್ವದಲ್ಲಿಯೂ ಅನುಷ್ಠಾನದಲ್ಲಿಯೂ ವ್ಯಕ್ತಗೊಳ್ಳುವಂತಾಗಬೇಕು. ಆಗ ಅದರ ಬೆಳಕು ಮಾರ್ಗದರ್ಶನ ಅತ್ಯವಶ್ಯಕ. ಮಾನವರಲ್ಲಿ ಸಾಮರಸ್ಯ, ಸಹನೆ, ಸಹಕಾರ ಧಾರ್ಮಿಕರಲ್ಲಿ ರಕ್ತಗತವಾಗಬೇಕು. ಆದರೆ ಇದಕ್ಕೆ ವಿರುದ್ಧವಾಗಿ ಧರ್ಮದ ಹೆಸರಿನಲ್ಲಿಯೇ ಹೆಚ್ಚು ಹೆಚ್ಚು ನಡೆಯುವ ಹಿಂಸೆ, ಕ್ರೌರ್ಯ ಮತ್ತು ಹೀನಕೃತ್ಯಗಳು ದಿನೇ ದಿನೇ ಹೆಚ್ಚಾಗುತ್ತಲೇ ಇದೆ. ಇದೇ ದಿಕ್ಕಿನಲ್ಲಿಯೇ ನೋಡುವ ಮನೋಭಾವ ಕೂಡ ಇಂದಿನ ಧಾರ್ಮಿಕ ವ್ಯಕ್ತಿಗಳದಾಗಿದೆ. ಮತವೆಂದರೆ ಶ್ರೇಷ್ಠಮೌಲ್ಯಗಳಲ್ಲಿ ಶ್ರದ್ಧೆ ಮತ್ತು ಅವನ್ನು ಸಾಧಿಸುವ ಜೀವನ. ಮತಶ್ರದ್ಧೆಯು ಮಾನವನ ಬದುಕನ್ನು ಜೀವಂತಗೊಳಿಸಲು ಬೇಕಾದ ಸತ್ವವನ್ನು ಒಳಗೊಂಡ ಆಹಾರವನ್ನು ಒದಗಿಸುವಂಥದ್ದಾಗಿರಬೇಕು. ಜೊತೆಗೆ ಮಾನವ ಸಮಾಜದಲ್ಲಿ ಏಕತೆಯನ್ನು ದೃಢ ಪಡಿಸುವ ಸಾಧನ ಮಾರ್ಗವಾಗಬೇಕು ಆಗ ಧರ್ಮವು ಮಾನವನ ಅಂತಃಸಾಕ್ಷಿಯನ್ನು ತಲುಪಿ ಕೆಡುಕು ಮತ್ತು ಅನಿಷ್ಟದ ವಿರುದ್ಧ ಹೋರಾಡಲು ಶಕ್ತಿಯನ್ನು ನೀಡಿ ದುರಾಸೆ, ಕಾಮ ಮತ್ತುಕ್ರೋಧ ಸ್ವಾರ್ಥತೆಯಿಂದ ಮುಕ್ತಗೊಳಿಸಿ ನಮ್ಮಲ್ಲಿ ನೈತಿಕತೆಯ ಬಲವನ್ನು ವೃದ್ಧಿಸುತ್ತಾ ಸಮಾಜದ ಹಿತಕ್ಕಾಗಿ ಶ್ರಮಿಸುವ ಆಸಕ್ತಿ, ಧೈರ್ಯ, ಉತ್ಸಾಹಕ್ಕೆ ಪ್ರೇರಕವಾಗಿ ನಿಲ್ಲುತ್ತದೆ ಧರ್ಮ.

ಎಲ್ಲ ಧರ್ಮದ ಅನುಯಾಯಿಗಳು ತಮ್ಮ ತಮ್ಮ ಧರ್ಮವನ್ನು ನಿಷ್ಠೆ ಮತ್ತು ಸತ್ಯದಿಂದ ಪಾಲಿಸಿದಲ್ಲಿ ಎಲ್ಲ ಮತಧರ್ಮಗಳು ಕೂಡ ಶ್ರೇಷ್ಠವೇ ಮಹತ್ವವುಳ್ಳವುಗಳೇ. ಹಾಗೆ ಸಾಗಿದಲ್ಲಿ ತಮ್ಮ ಮತದ ತತ್ವಗಳನ್ನೂ ಮೀರಿದ ಅನುಭವವನ್ನು ಗಳಿಸಲು ಸಾಧ್ಯ. ಇಬ್ನಲ್ ಅರಬಿ ಎಂಬಾತ ಹೇಳಿರುವ ನುಡಿಗಳಿವು : "ಎಲ್ಲ ರೂಪಗಳನ್ನೂ ಪಡೆಯುವ ಶಕ್ತಿ ನನ್ನ ಹೃದಯಕ್ಕೆ ಬಂದಿದೆ. ಜಿಂಕೆಗೆ ಅದು ಹುಲ್ಲಾಗಾವಲಾಗಬಲ್ಲದು, ಕ್ರೈಸ್ತಪಾದ್ರಿಗಳಿಗೆ ಅದು ಧಾರ್ಮಿಕ ಸಮಾಜ ವೆನಿಸಬಹುದು, ವಿಗ್ರಹಗಳಿಗೆ ಅದು ದೇವಸ್ಥಾನವಾಗಬಲ್ಲದು. ಹಜ್ ಯಾತ್ರಿಕರಿಗೆ ಮೆಕ್ಕಾ ಆಗಬಲ್ಲದು. ಯಹೂದಿಗಳ ಧರ್ಮಶಾಸನ ಹಾಗೂ ಇಸ್ಲಾಮಿನ ಕುರಾನ್ ಕೂಡ ಆಗಬಲ್ಲದು. ನಾನು ಪ್ರೇಮದ ಪಥವನ್ನು ಅನುಸರಿಸುತ್ತೇನೆ. ಅವನ ಒಂಟೆಗಳು ಎಲ್ಲಿಗಾದರೂ ನನ್ನನ್ನು ಕೊಂಡೊಯ್ಯಲಿ ನನ್ನ ಧರ್ಮ ಮತ್ತು ಶ್ರದ್ಧೆಯೇ ನಿಜವಾದ ಧರ್ಮ" ಎಂದಿದ್ದಾರೆ. ಪ್ರಾರ್ಥನೆ ಮತ್ತು ಧ್ಯಾನಾಚರಣೆ ಧರ್ಮಕ್ಕೆ ಬಂದಾಗ ನಾವೆಲ್ಲಾ ಒಂದೇ ಆಗಿರುತ್ತೇವೆ. ಪ್ರಾರ್ಥನೆಯ ತುತ್ತತುದಿಯನ್ನು ಮುಟ್ಟಿದಂತೆಲ್ಲಾ ದಿವ್ಯತತ್ವದ ಅನುಭಾವದಲ್ಲಿ ಆ ವ್ಯಕ್ತಿಯು ಮುಳುಗುತ್ತಾನೆ. ಹಾಗಾಗಿ ಸೂರ್ಯನು ತನ್ನ ಕಿರಣಗಳಿಂದ ಇಬ್ಬನಿಯನ್ನು ಚದುರಿಸುವಂತೆ ಸ್ವಾರ್ಥವನ್ನು ಕರಗಿಸಿ ಧರ್ಮವು ದಿವ್ಯತೆಯನ್ನುಂಟು ಮಾಡುತ್ತದೆ. ಅದನ್ನು ಸರಿಯಾಗಿ ಗ್ರಹಿಸಿ ಆಚರಿಸಿದಲ್ಲಿ ಮಾನವ ಮತ್ತು ಸಮಾಜದಲ್ಲಿ ಪರಿವರ್ತನೆ ಉಂಟಾಗಿ ಉನ್ನತಿ ಹಾಗೂ ಶಾಂತಿಯುತವಾದ ವಾತಾವರಣ ನಿರ್ಮಾಣವಾಗುತ್ತದೆ. ಪ್ರತಿಯೊಂದು ಧರ್ಮವು ಸಹ ಸಾಮಾಜಿಕ ಮತ್ತು ನೈತಿಕ ನಿಯಮಗಳನ್ನು ಒಳಗೊಂಡಿರುತ್ತದೆ ಮತ್ತು ಪಾವಿತ್ರ್ಯ ಮತ್ತುಪ್ರೇಮ ಜೊತೆಗೂಡಿಯೇ ಸಾಗುತ್ತದೆ.

ಧರ್ಮವನ್ನು 'ಸಮಗ್ರ ಸತ್ಯದ ಬಗ್ಗೆ ಮಾನವನ ಸಮಗ್ರ ಪ್ರತಿಕ್ರಿಯೆಯೇ ಧರ್ಮ ಎಂದಿದ್ದಾರೆ ಡಾ. ರಾಧಾಕೃಷ್ಣನ್. ಪ್ರತಿಯೊಂದು ಧರ್ಮವೂ ಒಂದು ಮಹಾಭಾವವನ್ನು ಒಳಗೊಂಡಿದ್ದು ತನ್ನದೇ ಆದ ಮಹತ್ವದ ಧ್ಯೇಯೋದ್ದೇಶಗಳನ್ನು ಆಧರಿಸಿರುವಂಥದ್ದು. ಆದರೆ ನಮ್ಮನಲ್ಲಿ ಧಾರ್ಮಿಕರು, ಧಾಮಿಕ ಗುರುಗಳು, ಭಕ್ತರು ಮುಂತಾದವರು ಒಂದೊಂದು ಸಂಸ್ಥೆಗಳನ್ನು, ಸಂಘಗಳನ್ನು, ಮಠಗಳನ್ನು, ಪಾಠಗಳನ್ನು, ನಿರ್ಮಿಸಿ ಕೊಂಡು ಕಣ್ಣಿದ್ದು ಕುರುಡರಂತೆ ತಮ್ಮ ಕಣ್ಣಿಗೆ ತಾವೇ ಅಂಧಕಾರದ ಪಟ್ಟಿಯನ್ನು ಕಟ್ಟಿಕೊಂಡು ನಮ್ಮ ದೇವರೇ ನಮ್ಮ ಧರ್ಮವೇ ಶ್ರೇಷ್ಠ ಉಳಿದವರದ್ದು ನಿಕೃಷ್ಟವೆಂದು ತಿರಸ್ಕರಿಸುತ್ತಾ ಅವರ ಮೇಲೆ ಕಿಡಿ ಕಾರುತ್ತಾ ದ್ವೇಷಾಸೂಯೆಗಳನ್ನು ಹಬ್ಬಿಸುತ್ತಾ ಸಂಕುಚಿತತೆಯ ಮಡುವಿನೊಳಗೆ ಮುಳುಗಿ ಹೋಗಿದ್ದಾರೆ. ಭಕ್ತಿ ಮಾರ್ಗದಲ್ಲಿ ಸಾಗುವ ಆಧ್ಯಾತ್ಮಿಕ ಸಾಧಕನ ಪಾಲಿಗೆ ಓರ್ವ ದೇವರು ದೇವತೆ ಅವರ ಹೆಸರು, ರೂಪವು ಅನಿವಾರ್ಯ ವಾದುದರಿಂದ ತನ್ನ ಇಷ್ಟದೈವದ ಬಗ್ಗೆ ಅಚಲವೂ, ಅನನ್ಯವು ಆದ ಭಕ್ತಿಶ್ರದ್ಧೆಗಳನ್ನು ಬೆಳೆಸಿಕೊಳ್ಳುವುದು ಅಗತ್ಯವಾದುದಾದರೂ ಬೇರೆ ಧರ್ಮ, ದೇವರುಗಳ ಬಗ್ಗೆ ತಾತ್ಸಾರ, ತಿರಸ್ಕಾರ ಮನೋಭಾವದ ದ್ವೇಷವನ್ನು ಬೆಳೆಸಿಕೊಂಡು ನಮ್ಮ

ನಮ್ಮಲ್ಲೇ ಪಂಗಡಗಳನ್ನು ವರ್ಗಗಳನ್ನು ನಿರ್ಮಿಸಿಕೊಂಡು ಅಲ್ಲೋಲ ಕಲ್ಲೋಲಗಳನ್ನುಂಟು ಮಾಡುತ್ತಾ ರಕ್ತಪಾತವನ್ನು ಹರಿಸುತ್ತಾ ಧರ್ಮವೆಂಬುದನ್ನೇ ಬುಡಮೇಲು ಮಾಡಲು ಕೆಲವರು ಹೊರಟಿರುವವರೂ ಉಂಟು. ಧರ್ಮದ ನಿಜವಾದ ಅರ್ಥವನ್ನು ತಿಳಿದಿದ್ದರೂ ತಮ್ಮ ಅಧಿಕಾರ ದಾಹದಿಂದಲೇ ಧಾರ್ಮಿಕರು ಇಂದು ಧರ್ಮಾಂಧತೆಯನ್ನೇ ಮತ್ತಷ್ಟು ಹುಲುಸಾಗಿ ಬೆಳೆಸುತ್ತಾ ತನ್ಮೂಲಕ ಭೇದಭಾವವನ್ನೂ ಹಿಗ್ಗಿಸುತ್ತಾ ಅಪಾರವಾದ ಸಾವುನೋವು ಹಿಂಸೆ ನಷ್ಟಗಳಿಗೆ ತುತ್ತಾಗುತ್ತಿರುವುದನ್ನು ಇತಿಹಾಸದ ಪುಟಪುಟಗಳಲ್ಲೂ ಕಾಣಬಹುದಾಗಿದೆ. ಇದರ ಪರಿಣಾಮವಾಗಿ ಅನೇಕರು ಧರ್ಮದ ಅಸ್ತಿಕವನ್ನೇ ತಪ್ಪಾಗಿ ಗ್ರಹಿಸುತ್ತಿರುವುದನ್ನು ಕಾಣಬಹುದು.

"ಏಕಂ ಸತ್, ವಿಪ್ರಾಃ ಬಹುಧಾ ವದಂತಿ" ಅಂದರೆ ದೇವನೊಬ್ಬ ನಾಮ ಹಲವು ಎಂಬ ಮಹಾವಾಕ್ಯವನ್ನು ಮಹಾತ್ಮರು ಪದೇ ಪದೇ ಪುನರುಚ್ಚರಿಸುತ್ತಾ ಬಂದಿದ್ದಾರೆ. ಶ್ರೀರಾಮಕೃಷ್ಣರು "ಮತಗಳೆಲ್ಲಾ ಮನುಜರನ್ನು ದೇವರೆದೆಗೊಯ್ಯುವ ಪಥಗಳು" ಎಂಬುದನ್ನು ಅನುಷ್ಠಾನಗೊಳಿಸಿದವರು. ಹಾಗೆಯೇ ಅವರ ಶಿಷ್ಯರಾದ ಸ್ವಾಮಿ ವಿವೇಕಾನಂದರು ೧೮೯೩ರ ಅಮೆರಿಕಾದ ಶಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ. "ಈ ಸಮ್ಮೇಳನದಲ್ಲಿ ಮೊಳಗಿದ ಗಂಟೆ ಮತಾಂಧತೆಯ ಪಾಲಿಗೆ ಮರಣ ಗಂಟೆಯಾಗಲಿ" ಎಂದು ಘೋಷಿಸಿ ಧರ್ಮದ ವ್ಯಾಪಕತ್ವವನ್ನ ಅದರ ಮೌಲ್ಯವನ್ನು ಜನರಿಗೆ ಮನಗಾಣಿಸಲು ಉದ್ಯುಕ್ತರಾದರು. ಅಷ್ಟೇ ಅಲ್ಲದೆ ತಮ್ಮ ಬದುಕಿನ ಕೊನೆಯುಸಿರುವವರೆಗೂ ಮತಾಂಧತೆ ಎಂಬ ಈ ಅಂಟು ಜಾಡ್ಯದ ಪಿಡುಗಿನ ವಿರುದ್ಧ ಹೋರಾಡಿದ ಮಹಾನುಭವರು. ಇಷ್ಟಾದರೂ ಸಂಕುಚಿತ ಬೇಲಿಯಂತೆ ಮತಾಂಧತೆ ಇನ್ನೂ ನಾಶವಾಗದೆ ಜೀವಂತವಾಗಿಯೇ ಉಳಿದುಕೊಂಡು ಬಂದಿದೆ. ಇಂದು ಬಹಳ ಬಿರುಸಾಗಿ ಧರ್ಮದ ಸಾಮರಸ್ಯ ಕುಸಿಯಲ್ಪಡುತ್ತಿದ್ದು ಅದು ರಾಜಕೀಯದಲ್ಲಿನ ಅಧಿಕಾರ ಅಂತಸ್ತಿಗಾಗಿ ಬಳಸಲ್ಪಡುತ್ತಿರುವ ಮಾರ್ಗೋಪಾಯವಾಗಿದೆ. ಹಾಗಾಗಿ ಪ್ರಪಂಚದ ಜನರಿಗೆ ಇಂದು ಬೇಕಾಗಿರುವುದು ಧರ್ಮಾಂಧತೆಯಾಗಲಿ, ಅನ್ಯಮತದ ಬಗ್ಗೆ ದ್ವೇಷಾಸೂಯೆಯಾಗಲಿ, ಅನ್ಯಮತಕ್ಕಿಂತ ತಮ್ಮದೇ ಶ್ರೇಷ್ಠವೆಂಬ ಅಂಧಾನುಭಾವವನ್ನು ಹೊಂದದೆ ಧರ್ಮದಲ್ಲಿ ಶ್ರದ್ಧೆಯಷ್ಟೇ ಬಹಳ ಮುಖ್ಯವಾದುದೇ ವಿನಃ ಧರ್ಮಾಂಧತೆ ಯಲ್ಲ ಎಂಬುದನ್ನು ಅರಿತುಕೊಳ್ಳಬೇಖಾಗಿದೆ. ಧರ್ಮ, ದೇವರ ಹೆಸರಿನಲ್ಲಿ ಪ್ರಾಣಿಗಳ ಬಲಿಯನ್ನು ಕೊಡಲಾಗುತ್ತಿದೆ. ಆದ್ದರಿಂದ ಧರ್ಮದ ಬಾಹ್ಯ ಆಚರಣೆಯ ವಿಧಿ-ವಿಧಾನವನ್ನು ಅನುಸರಿಸುವುದೇ ಮುಖ್ಯ ಗುರಿಯಲ್ಲವೆಂಬುದನ್ನು ಅರಿತು, ಧರ್ಮವು ಕ್ಷಮೆ, ಕರುಣೆ, ಪ್ರೀತಿ, ದಯೆಯನ್ನು ಒಳಗೊಂಡಿರುವುದನ್ನು ಮನಗಾಣಬೇಕು. ಮಾಡುವ ವೃತ್ತಿಯನ್ನು ನಿಷ್ಠೆಯಿಂದ ಪೂರ್ಣವಾಗಿ ನಿರ್ವಹಿಸುವುದರಲ್ಲಿಯೇ ದೇವರ ದರ್ಶನವು ಅಡಗಿದೆಯೆಂಬ ತತ್ವವನ್ನು ತಿಳಿಯಬೇಕು, ವಿಶ್ವಶಾಂತಿಯೇ ಪ್ರತಿಯೊಂದು ಮತದ ಮುಖ್ಯ ಉದ್ದೇಶವಾದರೆ, ವಿಶ್ವ ಬಂಧುತ್ವವೇ ಪ್ರತಿಯೊಂದು ಧರ್ಮ ಗ್ರಂಥಗಳಲ್ಲೂ ಅಡಗಿರುವ ಸಾರಾಂಶವಾಗಿದೆ.

ನದಿಗಳ ಜೋಡಣೆಯಿಂದ ದೇಶದ ಅಭಿವೃದ್ಧಿ

– ಡಾ. ಎಚ್.ಎಸ್. ನಾಗಭೂಷಣಯ್ಯ

ಭಾರತವು ಇಂದು ಸು. ೧೦೪ ಕೋಟಿ ಜನಸಂಖ್ಯೆಯನ್ನು ಪಡೆದಿದ್ದು ಅದಕ್ಕೆ ಅವಶ್ಯಕವೆನಿಸಿದ ೪೦ ಕೋಟಿ ಟನ್ ಆಹಾರದ ಉತ್ಪಾದನೆ ಇರಬೇಕಾದಲ್ಲಿ ಪ್ರಸ್ತುತ ಕೇವಲ ೨೦ ಕೋಟಿ ಉತ್ಪನ್ನವನ್ನು ಹೊಂದಿದೆಯೆಂದು ತಜ್ಞರು ಅಂದಾಜು ಮಾಡಿರುವರು. ಇದರಿಂದ ನೀರಾವರಿಯನ್ನು ಎಷ್ಟು ತ್ವರಿತವಾಗಿ ವೃದ್ಧಿ ಪಡಿಸ ಬೇಕೆಂಬುದನ್ನು ಅರಿಯಬಹುದು. ದೇಶದಲ್ಲಿ ಜಲ ವಿದ್ಯುತ್ ತಯಾರಿಕೆಯ ಪ್ರಯಾಣ ಜಲಾಶಯಗಳಲ್ಲಿನ ನೀರಿನ ಶೇಖರಣೆಯನ್ನು ಅವಲಂಬಿಸಿದ್ದು ಇದರ ಏರಿಳಿತಗಳು ವಿದ್ಯುತ್ ಕಡಿತಕ್ಕೆ ಕಾರಣವಾಗಿ ಕುಂಠಿತವಾಗಿರುವ ಕೈಗಾರಿಕೋದ್ಯಮಗಳು ಅನೇಕ. ಒಂದೆಡೆ ಪ್ರವಾಹ ಪೀಡಿತದಿಂದ ಅಪಾರ ನಷ್ಟ ಸಂಭವಿಸಿದ್ದರೆ, ಇನ್ನೊಂದೆಡೆ ಅನಾವೃಷ್ಟಿಯಿಂದ ಬತ್ತಿದ ನದಿಗಳು. ರೈಲು ರಸ್ತೆಗಳ ಸಂಚಾರಕ್ಕೆ ನಿಬಿಡ ಪ್ರದೇಶಗಳಲ್ಲಿ ಸರಕು ಸಾಗಾಣಿಕೆಗೆ ಅನುಕೂಲವಾಗಿರುವ ನದಿಗಳ ಉಪಯುಕ್ತತೆ ಪಡೆಯದಿರುವ ಕೊರತೆ. ಒಟ್ಟಿನಲ್ಲಿ ಹೇಳುವುದಾದರೆ ಎಲ್ಲಕ್ಕೂ ಅವಶ್ಯಕತೆಯೆನಿಸಿರುವುದು ನೀರು. ನೀರಿಗೆ ಆಧಾರವಾದುದು ಮಳೆ. ನಮ್ಮ ದೇಶದಲ್ಲಿ ವರ್ಷ ಪೂರ್ತ ಸರಿಸಮಾನವಾಗಿ ಹಂಚಿಕೆಯಿಲ್ಲದೆ ಕೇವಲ ೪ ತಿಂಗಳ ಮೂನ್ ಸೂನ್ ಕಾಲಾವಧಿಯಲ್ಲಿ ಧಾರಾಕಾರವಾಗಿ ಮಳೆ ಸುರಿಯುವುದಲ್ಲದೆ ದೇಶದ ಎಲ್ಲೆಡೆ ಸರಿಸಮನಾಗಿ ಮಳೆಹಂಚಿಕೆಯೂ ಇರುವುದಿಲ್ಲ. ಒಂದೆಡೆ ಅತಿವೃಷ್ಟಿ, ಇನ್ನೊಂದೆಡೆ ಅನಾವೃಷ್ಟಿ.

ಇನ್ನೊಂದು ಅತಿಶಯವೆಂದರೆ ಜಲಚಕ್ರದ ಭಂಗಿ. ನಭೋಮಂಡಲದಿಂದ ಭೂಮಿಗೆ ತಲುಪುವ ಮಳೆಯ ಪ್ರಮಾಣದಲ್ಲಿ ಶೇಕಡ ೬೦ ರಷ್ಟು ಆವಿಯಾಗಿ ಪುನಃ ನಭೋಮಂಡಲಕ್ಕೆ ಹಿಂತಿರುಗುವುದು. ಉಳಿದ ಶೇಕಡ ೪೦ ರಲ್ಲಿ ಸರಾಸರಿ ೧೫ ರಷ್ಟು ಭೂಮಿಯಲ್ಲಿತಂಗಿ ಅಂತರ್ಜಲವನ್ನು ಸೇರುವುದು. ಉಳಿದ ೨೫ರಲ್ಲಿ ಕೇವಲ ೫ ರಷ್ಟನ್ನು ಮಾತ್ರ ಕೆರೆ, ಕಟ್ಟೆ, ಸರೋವರ, ಜಲಾಶಯಗಳಲ್ಲಿ ತಡೆದಿಡಲು ಸಾಧ್ಯ. ಸಂಗ್ರಹಿಸಲು ಸೂಕ್ತ ಕಣಿವೆಗಳ ಅಭಾವದಿಂದಲೋ ಇಲ್ಲವೇ ತ್ವರಿತ ಪ್ರವಾಹದಿಂದಲೋ ನೀರು ಹರಿದು ಶೇಕಡ ೨೦ ರಷ್ಟು ಮಳೆ ನೀರು ಸಮುದ್ರವನ್ನು ಸೇರುವುದು. ಈ ಭಾಗದ ನೀರನ್ನು ಉಪಯೋಗಿಸುವುದೇ ನಮ್ಮ ಮುಂದಿರುವ ಸವಾಲು.

ಹಿಂದೆ ತಿಳಿಸಿದಂತೆ ವರ್ಷದ ಮಳೆ ವಿವಿಧ ಜಲಾನಯನ ಪ್ರದೇಶಗಳಲ್ಲಿ ವಿವಿಧ ರೀತಿಯಲ್ಲಿ ರೂಪುಗೊಂಡು ಒಂದೆಡೆ ಅತಿವೃಷ್ಟಿ ಇನ್ನೊಂದೆಡೆ ಅನಾವೃಷ್ಟಿಯಾಗಿ ಕಾಣಿಸಿದ್ದರೂ ಆ ಪ್ರದೇಶದ ನದಿಗಳನ್ನು ತಕ್ಕಂತೆ ಪ್ರಭಾವಿತಗೊಳಿಸಬಹುದು. ಇದಕ್ಕೆ ಪರಿಹಾರವೆಂದರೆ ವಿವಿಧ ಜಲಾನಯನ ಪ್ರದೇಶಗಳ ನದಿಗಳ ಜೋಡಣೆ. ಒಂದು ನದಿಯನ್ನು ನೆರೆಯ ನದಿಗೆ ಸಂಪರ್ಕ ಕೊಂಡಿ ಕೂಡಿಸುವುದು. ಸಮಯ ಬಂದಾಗ ಹೆಚ್ಚುವರಿ ನೀರನ್ನು ಒಂದರಿಂದ ಇನ್ನೊಂದಕ್ಕೆ ಉಪಯೋಗಿಸಿಕೊಳ್ಳಬಹುದು. ಇಂತಹ ನದಿಗಳ ಚೌಕಟ್ಟು ಅಥವಾ ಹೆಣಿಕೆಯಿಂದ ದೇಶದ ಜಲಸಂಪನ್ಮೂಲಗಳನ್ನು ಉತ್ತಮ ಸ್ಥಿತಿಯಲ್ಲಿ ಉಪಯೋಗಿಸಿಕೊಳ್ಳಬಹುದು. ಅತಿವೃಷ್ಟಿ ಪ್ರದೇಶದ ನದಿಗಳ ಪ್ರವಾಹ ಪೀಡಿತ ನೀರನ್ನು ಅನಾವೃಷ್ಟಿ ನದಿಗಳಿಗೆ ತಿರುಗಿಸಿ ಎರಡೂ ಜಲಾನಯನ ಪ್ರದೇಶಗಳಿಗೆ ಪರಿಹಾರ ಒದಗಿಸಬಹುದು.

ನದಿಗಳ ಜೋಡಣೆಯಿಂದ ಸಾಧಿಸಬಲ್ಲ ಕಾರ್ಯಗಳು :

೧ ಮಳೆಯ ಸಕಾಲಿಕ ಅಭಾವದಿಂದ ಕುಂಠಿತವಾದ ಜಲಾನಯನ ಪ್ರದೇಶಗಳನ್ನೊಳಗೊಂಡ ನದಿಗಳಿಗೆ ನೆರೆ ನದಿಯಿಂದ ನೀರೊದಗಿಸಿ ದೇಶದಲ್ಲಿ ನೀರಾವರಿಯನ್ನು ಅಭಿವೃದ್ಧಿಗೊಳಿಸಬಹುದು.

೨ ಪ್ರವಾಹ ಪೀಡಿತ ನದಿಗಳ ನೀರನ್ನು ನದಿಗಳ ಜೋಡಣೆಯಿಂದ ನೆರೆಯ ನದಿಗಳಿಗೆ ಹೊಂದಿಸಿ ಪ್ರವಾಹದ ಹಾವಳಿಯನ್ನು ನಿಯಂತ್ರಿಸಬಹುದು.

೩ ಜಲ ವಿದ್ಯುತ್ ಶಕ್ತಿ (Hydro power) ಉತ್ಪಾದನೆ ವ್ಯವಸ್ಥಾಪಿಸಿದ ಜಲಾಶಯದಲ್ಲಿ ನೀರಿನ ಶೇಖರಣೆ ಮತ್ತು ಪ್ರಚ್ಛನ್ನ ಮಟ್ಟವನ್ನು ಅವಲಂಬಿಸಿರುತ್ತದೆ. ಸುಸಂಘಟಿತ ನದಿಗಳ ಹೊಂದಾಣಿಕೆಯಿಂದ ಜಲಶಕ್ತಿ ಸಂಪನ್ಮೂಲಗಳನ್ನು ನಿಯಂತ್ರಿಸಬಹುದು.

೪ ನಗರ ಪ್ರದೇಶ ಹಾಗೂ ಕೈಗಾರಿಕೋದ್ಯಮಿಗಳಿಗೆ ಅತ್ಯವಶ್ಯಕವಾದ ನೀರನ್ನು ನಿರಂತರವಾಗಿ ಒದಗಿಸಲು ಚೌಕಟ್ಟಿನ ನದಿಗಳ ಹೆಣಿಕೆ ಸಹಾಯಕಾರಿ.

೫ ರೈಲು ರಸ್ತೆಗಳ ಸಂಪರ್ಕವಿಲ್ಲದ ಕಾಡು ಬೀಡು ಪ್ರದೇಶಗಳಲ್ಲಿ ಸಾಮಾನು ಸಾಗಾಣಿಕೆಗೆ ಸುಲಭ ಹಾಗೂ ಕಡಿಮೆ ವೆಚ್ಚದ ವಿಧಾನ.

೬ ಒಳನಾಡಿನ ಜಲಸಂಚಾರ : ನದಿಗಳ ಚೌಕಟ್ಟನ್ನು ದೇಶಾದ್ಯಂತ ಅಭಿವೃದ್ಧಿಪಡಿಸಿದಲ್ಲಿ ಒಳನಾಡಿನ ಜಲಸಂಚಾರಕ್ಕೆ ಅನುವುಮಾಡಿಕೊಟ್ಟಂತಾಗಿ ಜನಸಂಚಾರ ಮತ್ತು ಸಾಮಾನು ಸಾಗಾಣಿಕೆ, ವ್ಯಾಪಾರ ಮತ್ತು ಕೈಗಾರಿಕೋದ್ಯಮಗಳ ಅಭಿವೃದ್ಧಿಗೆ ಅನುಕೂಲವಾಗುವುದು. ಸಮುದ್ರಕ್ಕೆ

ಒಳನಾಡಿನ ಸಂಪರ್ಕ ಕಲ್ಪಿಸಲು ನದಿಗಳ ಜೋಡಣೆ ಅಗತ್ಯ.

ರಾಷ್ಟ್ರದಲ್ಲಿ ನದಿಗಳ ಜೋಡಣೆಯಿಂದ ಜಲಸಂಪನ್ಮೂಲಗಳನ್ನು ಅಭಿವೃದ್ಧಿಗೊಳಿಸಲು ಏರ್ಪಟ್ಟಿರುವ ಸಂಸ್ಥೆಯು (National water Development Authority) ಈಗಾಗಲೇ ತಯಾರಿಸಿರುವ ಯೋಜನೆಗಳಲ್ಲಿ ಮುಖ್ಯವಾದುವೆಂದರೆ -

೧ ಮಹಾನದಿ - ಗೋದಾವರಿ : ಮಹಾನದಿಯಿಂದ ಪ್ರವಾಹದ ವೇಳೆಯಲ್ಲಿ ಗೋದಾವರಿಗೆ ತಲುಪಿಸಬಹುದಾದ ೮೦೦೦ M3 ನೀರು ಶ್ರೀ ಕಾಕುಲಂ ಮತ್ತು ವಿಶಾಖಪಟ್ಟಣ ಜಿಲ್ಲೆಗಳ ಜಲಾನಯನ ನೀರಾವರಿಗೆ ಅನುಕೂಲವಾಗುವುದು.

೨ ಗೋದಾವರಿ - ಕೃಷ್ಣ : ಇಲ್ಲಿ ನಾಗಾರ್ಜುನ ಸಾಗರ ಜಲಾಶಯ ಮಧ್ಯಕೊಂಡಿಯಾಗಿರುವುದು. ಇಲ್ಲಿ ೨೧,೫೦೦ M3 ಹೆಚ್ಚುವರಿ ನೀರು ಲಭಿಸಬಲ್ಲದು.

೩ ಕೃಷ್ಣಾಪೆನ್ನಾರ್ : ಇಲ್ಲಿ ಈ ಸೋಮಶೀಲಾ ಜಲಾಶಯ ಕೊಂಡಿಯಾಗಿದ್ದು ೮೬೦೦M3 ಹೆಚ್ಚುವರಿ ನೀರು ಲಭಿಸುವುದು.

೪ ಪೆನ್ನಾರ್ ಕಾವೇರಿ : ಸೋಮಶೀಲಾ ಗ್ರಾಂಡ್ ಅಣೆಕಟ್ಟು ಜೋಡಣೆ 5000 M3 ಅಧಿಕ ನೀರು ಸಲ್ಲುವುದು.

೫. ಕಾವೇರಿ ಗುಂಡೂರು : ಇಲ್ಲಿ 2000M3 ಹೆಚ್ಚು ನೀರು ಕಾವೇರಿ ನೀರಾವರಿಗೆ ಸಲ್ಲುವುದು.

ಉತ್ತರಪಶ್ಚಿಮ ನದಿಗಳ ಜೋಡಣೆ :

ಗಂಗಾ–ಬ್ರಹ್ಮಪುತ್ರಾ, ಗಂಗಾ-ಮಹಾನದಿ, ಕಪಿಲ-ಗೋದಾವರಿ, ನರ್ಮದಾ-ಗೋದಾವರಿ, ನರ್ಮದಾ-ಯಮುನಾ-ಚಂಬಲ್. ಎಲ್ಲಕ್ಕಿಂತ ಮಿಗಿಲಾದ ಡಾ. ಕೆ. ಎಲ್. ರಾವ್ ರಚಿಸಿದ ರಾಷ್ಟ್ರದ ಜಲ ಸಂಯೋಜನಾ ಸಂಸ್ಥೆ ಮಹತ್ತಾದ್ದು. ಅದು ಗಂಗಾ-ಕಾವೇರಿ ಜೋಡಣೆ. ಇದು ಮಧ್ಯಪ್ರದೇಶ, ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಸಮೃದ್ಧಿಗೆ ತಯಾರಿಸಿದ್ದು.

ಸಂಕ್ಷಿಪ್ತ ವಿವರಣೆ :

ಉತ್ತರ ಭಾರತದ ಹಲವು ನದಿಗಳು ವರ್ಷವಿಡೀ ತುಂಬಿ ಹರಿಯುತ್ತವೆ ಮಳೆಗಾಲದಲ್ಲಿ ಮಳೆ ನೀರು ಆದರೆ, ಬೇಸಿಗೆಯಲ್ಲಿ ಹಿಮಾಲಯದ ಕರಗಿದ ಮಂಜು ನೀರಾಗಿ ಹರಿಯುತ್ತದೆ. ಈ ನೀರಿನ ಬಹುಪಾಲು ವ್ಯರ್ಥವಾಗಿ ಸಮುದ್ರವನ್ನು ಸೇರುತ್ತದೆ.

ಇಷ್ಟು ಮಾತ್ರವಲ್ಲದೆ, ವರ್ಷ ವರ್ಷವೂ ನೆರೆ ಹಾವಳಿಗೆ ಸಿಕ್ಕಿ ಅಲ್ಲಿನ ಜನ, ಪ್ರಾಣಿ ಮತ್ತು ಬೆಳೆಗಳು ಮತ್ತು ಆಸ್ತಿಪಾಸ್ತಿಗಳ ನಷ್ಟಕ್ಕಂತೂ ಲೆಕ್ಕವೇ ಇಲ್ಲ.

೧೯೭೨ರಲ್ಲಿ ನೀರಾವರಿ ತಜ್ಞರು, ಹಾಗೂ ಕೇಂದ್ರದ ನೀರಾವರಿ ಸಚಿವರೂ ಆಗಿದ್ದ ಡಾ. ಕೆ. ಎಲ್. ರಾವ್ ಅವರ ಯೋಜನೆ ಪ್ರಕಾರ ಪಾಟ್ನ ಬಳಿ ಒಂದು ಜಲಾಶಯವನ್ನು ನಿರ್ಮಿಸುವುದು. ಇದರಿಂದ ೬೦,೦೦೦ ಕ್ಯೂಸೆಕ್ಸ್ ನೀರನ್ನು ಹೊರಬಿಟ್ಟು, ಅದರಲ್ಲಿ ೧೦,೦೦೦ ಕ್ಯೂಸೆಕ್ಸ್ ನೀರನ್ನು ಸಮೀಪದ ಉತ್ತರ ಪ್ರದೇಶ ಮತ್ತು ಬಿಹಾರ್ ರಾಜ್ಯಗಳಿಗೆ ಉಪಯೋಗಿಸಿಕೊಂಡು ಹೆಚ್ಚಿನ ಅಂದರೆ ೫೦,೦೦೦ ಕ್ಯೂಸೆಕ್ಸ್ ನೀರನ್ನು ದಕ್ಷಿಣದ ಕಾವೇರಿಗೆ ಸೇರಿಸುವುದು, ವಿಶ್ವಸಂಸ್ಥೆಯ ಉನ್ನತ ಮಟ್ಟದ ತಂಡ, ಭಾರತೀಯ ತಜ್ಞರ ಜೊತೆ ಸೇರಿ, ಪರಿಶೀಲನೆ ನಡೆಸಿ ತಾಂತ್ರಿಕ ಅಡಚಣೆಯಿಲ್ಲವೆಂದು ತೀರ್ಮಾನಿಸಿದ್ದರು. ಈ ಯೋಜನೆಯಿಂದ ೧೦೦ ಲಕ್ಷ ಎಕರೆಗೆ ನೀರು ದೊರೆಯುತ್ತೆಂಬ ಅಂದಾಜಿನಿಂದ ಈ ಯೋಜನೆಯನ್ನು ಒತ್ತಾಯಿಸಿದ್ದರು. ರಾಜಕೀಯ ಇಚ್ಛಾ ಶಕ್ತಿಯ ಅಭಾವದಿಂದಾಗಿ ಇದು ಕಾರ್ಯಾಚರಣೆಗೆ ಬರಲಿಲ್ಲ. ಅಂದಾಜಿನ ವೆಚ್ಚ ಮತ್ತು ನೀರನ್ನು ಮೇಲೆತ್ತಲು (Pumping) ಬೇಕಾದ ವಿದ್ಯುಚ್ಛಕ್ತಿಯ ಕೊರತೆಯೂ ಕಾರಣವಿರಬಹುದು.

ವರ್ಷದಲ್ಲಿ ೧೫೦ ದಿನಗಳು ನೀರು ಬಿಡುವುದಾಗಿ ಅಂದಾಜಾಗಿತ್ತು ಈ ಯೋಜನೆಗೆ ಬಿಹಾರ ಮತ್ತು ಪಶ್ಚಿಮ ಬಂಗಾಳಗಳ ಸವಾಲೂ ಇದೆ. ಗಂಗಾನದಿಯ ಪ್ರವಾಹದ ನೀರು ಹೂಗ್ಲಿನದಿಯಲ್ಲಿ ಸದಾ ಜಮಾ ಆಗುತ್ತಿರುವ ಮೆಕ್ಕಲನ್ನು ಹೊತ್ತು ಸಮುದ್ರಕ್ಕೆ ಸೇರಿಸುವುದು. ಇಲ್ಲದಿದ್ದಲ್ಲಿ ಹೂಗ್ಲಿನದಿಯು ಕೊಲ್ಕತ್ತಾ ನಗರದ ಸುತ್ತಾ ಆವೃತವಾಗಿರುವುದರಿಂದ ಗೋಡಿನಿಂದ ಎತ್ತರಿಸಿದ ನದಿಯು ಉಕ್ಕಿ ಹಿನ್ನೀರಿನಿಂದ ತೀರ ಪ್ರದೇಶಕ್ಕೆ ಹಾನಿಯಾಗುವುದೆಂದು ಅಡಚಣೆ ಒಡ್ಡಿರುವುದು.

ಗಂಗಾ - ಕಾವೇರಿ ಜೋಡಣೆ ಯೋಜನೆಯ ಮುಖ್ಯಾಂಶಗಳು

ಕಾಲುವೆ ಉದ್ದ	– ೨೬೨೫ ಕಿ. ಮೀ (೧೬೪೦ ಮೈಲಿಗಳು)
ಕಾಲುವೆ ಪರಿಧಿ	– ಅಗಲ ೨೫೦ ಅಡಿ, ಆಳ ೧೭ ಅಡಿ
ವರ್ಷದಲ್ಲಿ ನೀರು ಬಿಡುವ ದಿನ	– ೧೪೦ ದಿನಗಳು
ಹೊರ ಬರುವ ನೀರಿನ ಪ್ರಮಾಣ	– ೨೫,೦೦೦M^3 (ಸುಮಾರು ೧೦೦೦ ಟಿಎಂಸಿ)
ಜಲಾಶಯದ ಶೇಖರಣೆ	– ೧೨, ೫೦೦M^3 (೪೫೦ ಟಿಎಂಸಿಸೆಕೆಂಡಿಗೆ)

ಕಾಲುವೆಯಲ್ಲಿ ಹರಿಯುವ ನೀರಿನ ಪ್ರಮಾಣ – ೫೦,೦೦೦ ಕ್ಯೂಸೆಕ್ಸ್

(೧೪೦೦ ಘನಮೀಟರ್ ಸೆಕೆಂಡಿಗೆ)

ನೀರನ್ನು ಮೂರು ಹಂತಗಳಲ್ಲಿ

ಪಂಪ್ ಮಾಡಬೇಕಾಗಿರುವ ಎತ್ತರ – ೧೯೦೦ ಅಡಿಗಳು

೧೯೭೨ರಲ್ಲಿ ತಯಾರಾದ ಯೋಜನೆ ವೆಚ್ಚ ೨೫,೦೦೦ ಕೋಟಿ ರೂಪಾಯಿಗಳು

(ಪಾಟ್ನಾದಲ್ಲಿ ಗಂಗಾನದಿ ಮಟ್ಟ - ಎಂ.ಎಸ್.ಎಲ್. ೪೦೦
ತಮಿಳು ನಾಡಿನ ಸಮೀಪ ಕಾವೇರಿ, ನದಿ ಮಟ್ಟ - ಎಂ.ಎಸ್.ಎಲ್. ೨೩೦೦)

ಒಟ್ಟಿನಲ್ಲಿ ನೆರೆಯ ನದಿಗಳನ್ನು ಜೋಡಿಸಿ ದೇಶದ ನದಿಗಳ ಚೌಕಟ್ಟಿನಲ್ಲಿ ಜಲಸಂಪನ್ಮೂಲಗಳ ಅಭಿವೃದ್ಧಿಗೊಳಿಸಲು ರಾಷ್ಟ್ರ ಮುಂದಾಗಬೇಕು. ಇದಕ್ಕೆ ಸಂಬಂಧಿಸಿದ ಎಲ್ಲಾ ರಾಜ್ಯ ಸರ್ಕಾರಗಳೂ ಒಂದಾಗಿ ಕೂಡಿ ಕಾರ್ಯಾಚರಣೆ ಮಾಡುವುದು ಅವಶ್ಯಕ.

ಗೊರೂರಿನ ನೆನಪು

— ವಿಜಯಸಾರಥಿ ಗೊರೂರು

ಒಂದು ನದಿಗೆ ಅಡ್ಡಲಾಗಿ ಅಣೆಕಟ್ಟೆನ್ನು ಕಟ್ಟಿದಾಗ ಆ ನದಿಯ ಹಿಂಭಾಗದ ಗ್ರಾಮಗಳು ಹೊಲಗದ್ದೆ, ತೋಟಗಳು, ಕಾಡುಮೇಡುಗಳು, ಗುಡ್ಡಬೆಟ್ಟಗಳು ಪ್ರಕೃತಿ ಸೌಂದರ್ಯ ಇವೆಲ್ಲ ನೀರಿನಲ್ಲಿ ಮುಳುಗಿ ಆ ಸ್ಥಳದಲ್ಲಿ ಏನೂ ಇರಲಿಲ್ಲವೇನೋ ಎಂಬಂತೆ ಮುಚ್ಚಿ ಹೋಗುತ್ತದೆ. ಇದೇ ರೀತಿ ಗೊರೂರು ಗ್ರಾಮದ ಹತ್ತಿರ ಹೇಮಾವತಿ ನದಿಗೆ ಈಗ್ಗೆ ೪೦ ವರ್ಷಗಳ ಹಿಂದೆ ಅಣೆಕಟ್ಟನ್ನು ಕಟ್ಟಿದ್ದಾರೆ. ಈ ಅಣೆಕಟ್ಟು ಕಟ್ಟುವುದಕ್ಕೂ ಮೊದಲು ಗೊರೂರು ಗ್ರಾಮ ಹೇಗಿತ್ತು? ಹೇಮಾವತಿ ನದಿಯ ಹಿಂಭಾಗದ ಗ್ರಾಮಗಳು ಹೇಗಿದ್ದವು ಆಮೇಲೆ ಹೇಗಾದವು ಎಂಬುವ ಈ ಲೇಖನದ ಮೂಲ ಉದ್ದೇಶ. ಹಾಸನದಿಂದ ದಕ್ಷಿಣಕ್ಕೆ ೨೪ ಕಿ.ಮೀ ದೂರವಿರುವ ಗೊರೂರು ಒಂದು ಸಣ್ಣ ಗ್ರಾಮ. ಗೊರೂರಿಗೆ ಬರುತ್ತಿದ್ದಂತೆ ಒಂದು ದೊಡ್ಡ ಅರಳೀಮರ ಮುಂಭಾಗದಲ್ಲಿ ಒಂದು ದೊಡ್ಡ ಕೋಟೆ ಬಾಗಿಲು ಇನ್ನು ಮುಂದೆ ಬಂದರೆ ಊರ ಮುಂದಿನ ಆಂಜನೇಯ ದೇವಸ್ಥಾನ. ಈ ಭಾಗದಲ್ಲಿ ಎಲ್ಲಾ ಜಾತಿಜನ ವಾಸವಾಗಿದ್ದರು. ಅವರವರ ಶಕ್ತಿಗೆ ತಕ್ಕಂತೆ ಜೀವನ ಮಾಡುತ್ತಿದ್ದರು. ವಿಶೇಷವೆಂದರೆ ಒಗ್ಗಟ್ಟಿನಿಂದ ಎಲ್ಲರೂ ಪ್ರೀತಿ ವಿಶ್ವಾಸದಿಂದ ಯಾವಾಗಲೂ ಹರ್ಷದಿಂದ ಇರುತ್ತಿದ್ದರು. ಊರೊಳಗೆ ಶ್ರೀ ಪರವಾಸುದೇವರ ದೇವಸ್ಥಾನ ಸುಂದರ ರಮಣೀಯವಾದ ದೇವಸ್ಥಾನ, ಹಾಗೆಯೇ ತ್ರಿಕೂಟೇಶ್ವರ ದೇವಸ್ಥಾನ ಹೊಯ್ಸಳ ಕಾಲದ ಒಳ್ಳೆಯ ಶಿಲ್ಪಕಲೆಯ ದೇವಸ್ಥಾನ. ಈ ಗ್ರಾಮದ ದಕ್ಷಿಣಕ್ಕೆ ಸ್ವಲ್ಪ ದೂರದಲ್ಲೇ ಶ್ರೀ ಯೋಗಾನರಸಿಂಹಸ್ವಾಮಿಯ ದೇವಸ್ಥಾನದ ವಿಶೇಷವೇನೆಂದರೆ, ಸ್ವಾಮಿಯು ಪಶ್ಚಿಮಾಭಿಮುಖವಾಗಿ ಇರುವುದು ವಿಶೇಷ ಈ ರೀತಿ ಇರುವುದು ವಿರಳ. ಈ ದೇವಸ್ಥಾನದ ಇತಿಹಾಸ, ಗೋಕರ್ಣ ಋಷಿಗಳು ಪೂರ್ವಾಭಿಮುಖವಾಗಿ ತಪಸ್ಸು ಮಾಡುತ್ತಿದ್ದರು. ಸ್ವಾಮಿಯು ಗೋಕರ್ಣ ಋಷಿಗಳಿಗೆ ಪ್ರತ್ಯಕ್ಷವಾದರು ಎಂಬ ಉಲ್ಲೇಖವಿದೆ.

ದೇವಸ್ಥಾನದ ಪಕ್ಕದಲ್ಲಿ ನಿರ್ಮಲವಾಗಿ ಹರಿಯುತ್ತಿರುವ ಹೇಮಾವತಿ ನದಿ ದೇವಸ್ಥಾನದ ಎದುರಿಗೆ ಪವಿತ್ರವಾದ ದಟ್ಟವಾದ ತೋಪು ಪಕ್ಕದಲ್ಲಿ ಮರಳು ಕಡಪು (ರಾಶಿ), ಅದರ ಮಧ್ಯೆ ಮಧ್ಯೆ ಒಂದೊಂದು ಮರ. ಸಾಯಂಕಾಲದ ಹೊತ್ತು ಹುಡುಗರು

ಅಲ್ಲಿ ಮರಕೋತಿ ಆಟವನ್ನು ಆಡುತ್ತಿದ್ದರು. ಈ ಪ್ರಕೃತಿ ಸೌಂದರ್ಯವನ್ನು ಸ್ವಲ್ಪ ಹೊತ್ತು ಹಾಗೆ ನೋಡುತ್ತಾ ಕುಳಿತುಕೊಂಡರೆ ಮನಸ್ಸಿಗೆ ಆಹ್ಲಾದವಾಗುತ್ತಿತ್ತು. ಈ ಊರಿನ ಪಶ್ಚಿಮಕ್ಕೆ ಹೇಮಾವತಿ ನದಿ ಮತ್ತು ಯಗಚಿ ನದಿ ಒಟ್ಟಿಗೆ ಎರಡು ನದಿಗಳು ಸೇರುವ ಸಂಗಮವಿತ್ತು. ಈ ಸಂಗಮವಾದ ಸ್ಥಳ ಹೇಗಿತ್ತು ಎಂದರೆ ಬೃಹತ್ ಮರಳಿನ ರಾಶಿ. ಅದರ ಮಧ್ಯೆ ದೈತ್ಯಾಕಾರದ ಕರೀಬಂಡೆಗಳು. ಒಂದು ಕಡೆ ಹೇಮಾವತಿ ನದಿ ಹರಿಯುತ್ತಿದ್ದಾಳೆ ಮತ್ತೊಂದು ಕಡೆ ಯಗಚಿ ನದಿ ಹರಿಯುತ್ತಿದ್ದಾಳೆ. ಇಂತಹ ರಮಣೀಯ ದೃಶ್ಯವನ್ನು ನಾವು ಎಲ್ಲೂ ನೋಡಿಲ್ಲವೇನೋ ಎಂದು ಭಾಸವಾಗುತ್ತಿತ್ತು.

ಶಾಲೆಗೆ ರಜಾ ಬಂದಾಗ ಎಲ್ಲಾ ಹುಡುಗರು ಒಟ್ಟುಗೂಡಿ ಸಂಗಮಕ್ಕೆ ಪ್ರವಾಸ ಹೋಗುತ್ತಿದ್ದರು. ಈ ಹುಡುಗರ ಜೊತೆಯಲ್ಲಿ ಅನೇಕರು ದೊಡ್ಡವರೂ ಸೇರಿ ಕೊಳ್ಳುತ್ತಿದ್ದರು. ಅಲ್ಲಿನ ಕಾರ್ಯಕ್ರಮ ಹೇಗೆಂದರೆ, ಬೆಳಿಗ್ಗೆ ಎಲ್ಲರೂ ಒಟ್ಟಿಗೆ ಸಂಗಮಕ್ಕೆ ಹೋಗಬೇಕು. ಮತ್ತು ಅಲ್ಲೇ ಬೆಳಿಗ್ಗೆ ತಿಂಡಿಯನ್ನು ಮಾಡಿಕೊಳ್ಳಬೇಕು. ಒಟ್ಟನಲ್ಲಿ ಆ ದಿನದ ಹಗಲನ್ನು ಸಂಗಮದ ಹತ್ತಿರ ಕಳೆಯಬೇಕು ಎಂದು ಹಿಂದಿನ ದಿನವೇ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದರು. ಅದರಂತೆ ಸ್ವೇಚ್ಛೆಯಾಗಿ ಕಾಡುಹರಟೆ ಹಾಡು ಹೇಳುವುದು, ಕಥೆಹೇಳುವುದು. ಸಂಗಮದಲ್ಲಿ ಸ್ನಾನಮಾಡಿ ಮರಳ ಮೇಲೆ ಮೈಯನ್ನು ಕಾಯಿಸಿಕೊಳ್ಳುತ್ತಿದ್ದರು. ಹೀಗೆ ಒಬ್ಬೊಬ್ಬರಿಗೆ ತೋಚಿದಂತೆ ಮನೆಯನ್ನು ಸೇರುತ್ತಿದ್ದರು. ಈ ಸಂಗಮದಿಂದ ಯಗಚಿ ನದಿಯನ್ನು ದಾಟಿಕೊಂಡು ಮುಂದೆ ಹೋದರೆ ಪೊನ್ನಾಥಪುರ ಎಂಬ ಪುಟ್ಟಗ್ರಾಮ ಹಾಗೂ ಮಾದರಿ ಗ್ರಾಮ. ಈ ಗ್ರಾಮದಲ್ಲಿ ಕೂಡ ಎಲ್ಲಾ ವರ್ಗದವರೂ ಒಗ್ಗಟ್ಟಿನಿಂದ ಸಂತೋಷವಾಗಿ ಜೀವನ ಮಾಡುತ್ತಿದ್ದರು. ಪೊನ್ನಾಥಪುರಕ್ಕೆ ಒಂದು ಹೆಣ್ಣನ್ನು ಕೊಟ್ಟು ಗೊರೂರಿಗೆ ಒಂದು ಹೆಣ್ಣನ್ನು ಕೊಡುತ್ತಿದ್ದರು. ಪೊನ್ನಾಥಪುರ ಗ್ರಾಮಕ್ಕೂ ಗೊರೂರಿಗೂ ಅಕ್ಕತಂಗಿಯರ ನಂಟು ಇದ್ದ ಹಾಗೆ. ಪೊನ್ನಾಥಪುರದ ನಂಟಸ್ತಿಕೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದರು. ಪೊನ್ನಾಥಪುರದವರು ಎಲ್ಲಾ ದಿನನಿತ್ಯದ ಸಾಮಾನುಗಳನ್ನು ಗೊರೂರಿಗೆ ಬಂದು ತೆಗೆದುಕೊಂಡು ಹೋಗುತ್ತಿದ್ದರು. ಗೊರೂರಿನ ಸಂತೆಗೆ ಪೊನ್ನಾಥಪುರದ ಜನಗಳು ಯಗಚಿ ಹೊಳೆಯನ್ನು ದಾಟಿಕೊಂಡು ಸಂಗಮದ ಹತ್ತಿರ ಆ ಮರಳಿನ ರಾಶಿಯ ಮೇಲೆ ಬಂದು ಅಡಿಕೆ ತೋಟ, ತೆಂಗಿನತೋಟ, ಗದ್ದೆಗಳು, ಹೊಲಗಳು ಇವುಗಳ ಮಧ್ಯೆ ಪೊನ್ನಾಥಪುರದ ಜನರು ತಂಡೋಪತಂಡವಾಗಿ, ಎಲ್ಲಾ ವರ್ಗದ ಜನರೂ ಅವರವರ ಕಷ್ಟಸುಖಗಳನ್ನು ದಾರಿಯಲ್ಲಿ ಮಾತನಾಡಿಕೊಳ್ಳುತ್ತಾ ಗೊರೂರಿನ ಸಂತೆಗೆ ಬಂದು ಒಂದು ವಾರಕ್ಕೆ ಆಗುವಷ್ಟು ದಿನಬಳಕೆ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಈಗಿನ ಕಾಲದ ಹಾಗೆ ಹಳ್ಳಿಯಲ್ಲಿ ಅಂಗಡಿಗಳಿರಲಿಲ್ಲ. ಮನೆ ಹತ್ತಿರಕ್ಕೆ ಯಾವುದೂ ಬರುತ್ತಿರಲಿಲ್ಲ. ಆದ್ದರಿಂದ ವಾರದ ಸಂತೆಗೆ ಬರಲೇ ಬೇಕಾಗಿತ್ತು. ಈ ರೀತಿಯ ಸಂಗಮವನ್ನು ಈಗ ಜ್ಞಾಪಿಸಿಕೊಂಡರೆ ಕರುಳು ಕಿತ್ತುಬರುತ್ತದೆ. ಎಂತಹ ಸಂತೋಷದ ದಿನ ಎಂದು ಅನುಭವಿಸದವರು ಈಗಲೂ ಮೆಲಕು

ಹಾಕಿಕೊಳ್ಳುತ್ತಾರೆ. ಪೊನ್ನಾಥಪುರದ ಜನಗಳಲ್ಲಿ ಹೆಚ್ಚಿನವರು ಬ್ರಾಹ್ಮಣರೇ. ಇವರ ರಸಿಕತೆ, ಸಂತೋಷ ಮತ್ತು ಹೆಚ್ಚಿನ ವಿವಿಧ ಚಟುವಟಿಕೆಗಳು ಬಹಳ ಹೆಸರುವಾಸಿ ಯಾಗಿತ್ತು. ಗೊರೂರಿನ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ರಥೋತ್ಸವ ಪ್ರಾರಂಭವಾದಾಗ ಹತ್ತು ದಿವಸ ದೇವಸ್ಥಾನದ ಉತ್ಸವಾದಿಗಳು ಸಂತರ್ಪಣೆ ಊಟ ದೇವಸ್ಥಾನದಲ್ಲಿ ನಡೆಯುತ್ತಿತ್ತು. ಪೊನ್ನಾಥಪುರ ನಿವಾಸಿಗಳು ಪ್ರತಿದಿವಸ ಬಂದು ದೇವಸ್ಥಾನದ ಪೂಜೆಯಲ್ಲಿ ಉತ್ಸವಗಳಲ್ಲಿ ಭಾಗವಹಿಸಿ ಎಲ್ಲರೂ ಒಟ್ಟಿಗೆ ರಾತ್ರಿ ನಡೆದುಕೊಂಡು ನಿರ್ಗಮಿಸುತ್ತಿದ್ದರು. ಮಳೆಗಾಲದಲ್ಲಿ ಹೊಳೆ ತುಂಬಾ ಬಂದಾಗ ಹೊಳೆ ಯನ್ನು ದಾಟುವುದಕ್ಕೆ ಹರಿಗೋಲನ್ನು ಬಿಟ್ಟು ಜನಗಳಿಗೆ ಬರುವುದಕ್ಕೆ ಅನುಕೂಲ ಮಾಡಿಕೊಳ್ಳುತ್ತಿದ್ದರು.

ಯಗಚಿ ಹೊಳೆಯು ಕಳ್ಳ ಹೊಳೆ ಎಂದು ಹೆದರುತ್ತಿದ್ದರು. ಹೇಗೆಂದರೆ ಹೊಳೆ ದಾಟಿಕೊಂಡು ಹೋಗುತ್ತಿರುವಂತೆಯೇ ಇದ್ದಕ್ಕಿದಂತೆ ಮಂಡಿ ಉದ್ದ ನೀರು ಸೊಂಟದವರೆಗೆ ಬಂದಿರುವುದೂ ಉಂಟು ಇದಕ್ಕೆ ಕಳ್ಳಹೊಳೆ ಎಂದು ಹೇಳುತ್ತಿದ್ದರು.

ಆಷಾಡಮಾಸದಲ್ಲಿ ಗೊರೂರಿನ ಬ್ರಾಹ್ಮಣರು ಮತ್ತು ಪೊನ್ನಾಥಪುರದ ಬ್ರಾಹ್ಮಣರು ಪ್ರಾಟೀಹಬ್ಬ ಅಂದರೆ (ಲಕ್ಷ್ಮೀಪೂಜೆ) ಆಷಾಢ ಶುಕ್ರವಾರ ಈ ಹಬ್ಬವನ್ನು ಆಚರಿಸುತ್ತಿದ್ದರು. ಈ ಪ್ರಾಟಿಹಬ್ಬದ ವಿಶೇಷವೇನೆಂದರೆ ಶುಕ್ರವಾರ ಸಾಯಂಕಾಲ ನದಿಯ ದಡಕ್ಕೆ ಎಲ್ಲಾ ಮುತ್ತೈದೆಯರು ಬಹಳ ಶ್ರದ್ಧಾಭಕ್ತಿಯಿಂದ ಸ್ನಾನಮಾಡಿ ಆ ದಿನವೆಲ್ಲ ಉಪವಾಸವಿದ್ದು ನದಿಯ ದಡದಲ್ಲಿ ಮರಳು ಉಂಡೆಯನ್ನು ೪, ೫, ೫, ೬, ಹೀಗೆ ಅವರವರ ಸಂಪ್ರದಾಯಕ್ಕೆ ತಕ್ಕಂತೆ ಅದನ್ನು ಅರಿಶಿನ ಕುಂಕುಮ ವೀಳ್ಯೇದೆಲೆ ಅಡಿಕೆ ಹಣ್ಣುಕಾಯಿ ಇಟ್ಟಿದ್ದ ತಟ್ಟೆಯಲ್ಲಿ ಈ ಮರುಳು ಉಂಡೆಯನ್ನು ಇಟ್ಟುಕೊಂಡು ಮಂಗಳವಾದ್ಯ ಮಾಡಿಸಿ ಅವರವರ ಮನೆಯಲ್ಲಿ ಇದಕ್ಕಾಗಿಯೇ ನಿರ್ಮಿಸಿದಂತಹ ಚಪ್ಪರದ ಮುಂದೆ ರಂಗೋಲಿಯನ್ನು ಬಿಟ್ಟು, ಮನೆಯನ್ನು ತಳಿರು ತೋರಣಗಳಿಂದ ಅಲಂಕರಿಸಿದ ಚಪ್ಪರದಲ್ಲಿ ನದಿಯಿಂದ ತಂದ ಮರಳು ಉಂಡೆಯನ್ನು ಇಟ್ಟಿದ್ದ ತಟ್ಟೆಯನ್ನು ಸಿಂಗರಿಸಿ ಚಪ್ಪರದಲ್ಲಿ ಸ್ಥಾಪನೆ ಮಾಡುತ್ತಿದ್ದರು. ರಾತ್ರಿ ಲಕ್ಷ್ಮೀದೇವಿಯ ಕಥೆಯನ್ನು ಎಲ್ಲರ ಮನೆಯಲ್ಲೂ ಓದಿಸಿ ಪೂಜಾ ಕಾರ್ಯಗಳನ್ನು ಶ್ರದ್ಧಾಭಕ್ತಿಯಿಂದ ಆರತಿ ಹಾಡುಗಳನ್ನು ಹಾಡಿ ಎಲ್ಲಾ ಹೆಂಗಸರೂ ಗಂಡಸರು ಸಂತೋಷದಿಂದ ಈ ಹಬ್ಬವನ್ನು ಆಚರಿಸುತ್ತಿದ್ದರು. ಈ ಪ್ರಾಟೀಹಬ್ಬದ ಆಚರಣೆ ಗೊರೂರು ಪೊನ್ನಾಥಪುರ ಈ ಎರಡು ಗ್ರಾಮಗಳಲ್ಲಿ ಮಾತ್ರ ನಡೆಯುತ್ತಿದ್ದುದರಿಂದ ಅಕ್ಕಪಕ್ಕದ ಊರುಗಳಿಂದ ನೆಂಟರಿಷ್ಟರೆಲ್ಲ ಬಂದು ಸೇರುತ್ತಿದ್ದರು. ಮಾರನೆಯ ದಿವಸ ಪೂಜೆ ಮಾಡಿದ ಮರಳು ಉಂಡೆಯನ್ನು ಸಾಯಂಕಾಲ ಮಂಗಳವಾದ್ಯದೊಡನೆ ನದಿಯಲ್ಲಿ ವಿಸರ್ಜನೆ ಮಾಡಿ ಅನಂತರ ಶ್ರೀ ಯೋಗಾನರಸಿಂಹಸ್ವಾಮಿಯವರ ದೇವಸ್ಥಾನದಲ್ಲಿ ಹೆಂಗಳೆಯರು ಹಾಡುಗಳನ್ನು ಹಾಡಿ ಬಂದು ಎಲ್ಲರೂ ಅವರವರ ಮನೆಯನ್ನು ಸೇರುತ್ತಿದ್ದರು. ಈ

ಎರಡು ದಿನ ಊರಿನಲ್ಲಿ ಎಲ್ಲರ ಮನೆಯಲ್ಲಿ ಸಂಭ್ರಮವೋ ಸಂಭ್ರಮ. ಈಗ ಬರೀ ಒಂದು ನೆನಪಾಗಿದೆ. ಹೇಮಾವತಿ ನದಿಗೆ ೧೯೬೪ರಲ್ಲಿ ಅಣೆಕಟ್ಟನ್ನು ಕಟ್ಟುವುದಕ್ಕೆ ಸರ್ವೆಮಾಡಿ ಗೊರೂರಿನ ಸಮೀಪ ಸಂಗಮವಾಗುವ ಜಾಗದಿಂದ ಸ್ವಲ್ಪ ಮುಂದಕ್ಕೆ ಆ ಸ್ಥಳದಲ್ಲೇ ಹೇಮಾವತಿ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು ಕಟ್ಟಬೇಕೆಂದು ಸರ್ಕಾರದಿಂದ ಒಪ್ಪಿಗೆ ಬಂದು ಅಣೆಕಟ್ಟು ಕೆಲಸ ಪ್ರಾರಂಭವಾಯಿತು. ತಮಿಳುನಾಡು ಕಡೆಯಿಂದ ಆಂಧ್ರದ ಕಡೆಯಿಂದ, ಕೇರಳದ ಕಡೆಯಿಂದ ಮತ್ತು ಇನ್ನು ಅನೇಕ ಕಡೆಗಳಿಂದ ಕೆಲಸ ಮಾಡುವುದಕ್ಕೆ ವ್ಯಾಪಾರಮಾಡುವುದಕ್ಕೆ ಹೀಗೆ ನಾನಾರೀತಿಯ ಕೆಲಸಕ್ಕಾಗಿ ಅವರ ಜೀವನೋಪಾಯಕ್ಕೆ ತಂಡೋಪತಂಡವಾಗಿ ಹೊರಗಡೆ ಜನಗಳು ಗೊರೂರಿನಲ್ಲಿ ಬೀಡುಬಿಟ್ಟರು. ಇದ್ದಕ್ಕಿದ್ದಂತೆ ಗೊರೂರಿನ ಜನಸಮೂಹ ಏರುತ್ತಾ ಬಂತು. ಒಂದು ಕಡೆ ಅಣೆಕಟ್ಟಿನ ಕೆಲಸ, ಒಂದು ಕಡೆ ನಾಲೆ ಕೆಲಸ, ಒಂದು ಕಡೆ ಮನೆಕಟ್ಟುವ ಕೆಲಸ ಈರೀತಿಯಾಗಿ ಕೆಲಸ ಬಿರುಸಿನಿಂದ ಪ್ರಾರಂಭವಾಯಿತು. ಮುಳುಗಡೆಯಾಗುವ ಗ್ರಾಮಗಳಿಗೆ ಮತ್ತು ಹೊಲಗದ್ದೆ, ತೋಟಗಳಿಗೆ ಪರಿಹಾರವನ್ನು ಕೊಡುವುದಕ್ಕೆ ಅಧಿಕಾರಿಗಳು ಸರ್ಕಾರದಿಂದ ಪರಿಹಾರದ ಹಣವನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದರು. ಶತ ಶತಮಾನಗಳಿಂದ ಜೀವನ ಮಾಡುತ್ತಿದ್ದ ಊರು ಮನೆಯನ್ನು ಮತ್ತು ಹೊಲಗದ್ದೆತೋಟಗಳನ್ನು ಬಿಟ್ಟು ಹೋಗಬೇಕಲ್ಲ ಎಂದು ಬಳಬಳನೆ ಕಣ್ಣೀರು ಹಾಕುತ್ತಿರುವ ದೃಶ್ಯ ಹೃದಯವಿದ್ರಾವಕವಾಗಿತ್ತು ಪೊನ್ನಾಥಪುರ, ಹೊಳೇಬಸವನಹಳ್ಳಿ, ಕೋನಾಪುರ, ಕೋಟೀಕೂರ, ಮಲೆನಹಳ್ಳಿ, ಮಂಚನಹಳ್ಳಿ, ಚಂಗ್ರವಳ್ಳಿ, ಪದುಮನಹಳ್ಳಿ ಇದರ ಜೊತೆಗೆ ಇನ್ನೂ ಅನೇಕ ಹಳ್ಳಿಗಳು ನೀರಿನಲ್ಲಿ ಮುಳುಗಡೆ ಯಾಗಲಿವೆ. ಸಮೃದ್ಧಿಯಿಂದ ಒಳ್ಳೆಯ ಫಲವತ್ತಾದ ಭೂಮಿಯನ್ನು ನಾವು ಇನ್ನೇಲಿ ನೋಡುತ್ತೇವೆ ಎಂದು ಎಲ್ಲಾ ಗ್ರಾಮದ ಜನಗಳಿಗೆ ಜೀವನವೇ ಬೇಡವೆಂಬಂತೆ ಆಯಿತು. ಆದರೇನು ಮಾಡುವುದು ಸರ್ಕಾರದ ಅಜ್ಞೆಯಂತೆ ಊರನ್ನು ಬಿಟ್ಟು ಹೋಗಲೇ ಬೇಕಲ್ಲವೆ? ಸರ್ಕಾರದಿಂದ ಅನೇಕರಿಗೆ ಜಾಸ್ತಿ ದುಡ್ಡುಬಂತು ಕೆಲವರಿಗೆ ಕಡಿಮೆ ಬಂತು ಹರಿದು ಹಂಚಿದ ಹಾಗೆ ಛಿದ್ರ ಛಿದ್ರವಾಗಿ ಎಲ್ಲೆಲ್ಲೋ ಹೋಗಿ ಜೀವನ ಸಾಗಿಸು ವಂತಾಗಿದೆ. ಗೊರೂರಿನಲ್ಲಿ ನೀರಾವರಿ ಇಲಾಖೆಯ ಸಿಬ್ಬಂದಿಗೆ, ನೌಕರವರ್ಗದವರಿಗೆ ಹೇಮಾವತಿ ವಸತಿಗಳು, ಕಛೇರಿಗಳು ಅದಕ್ಕೆ ಹೊಂದಿಕೊಂಡಂತೆ ಸುತ್ತಾ ಕಾಂಪೌಂಡು, ಆಸ್ಪತ್ರೆ, ಶಾಲೆ, ಶುದ್ದ ಕುಡಿಯುವ ನೀರಿನ ವ್ಯವಸ್ಥೆ, ರಸ್ತೆಗಳಿಗೆ ಡಾಂಬರು, ಸುಸಜ್ಜಿತ ವಸತಿ ಪ್ರದೇಶ ನಿರ್ಮಾಣವಾಯಿತು.

ಸುಪ್ರಸಿದ್ಧ ಸಾಹಿತಿ ಶ್ರೀ ಗೊರೂರು ರಾಮಸ್ವಾಮಿಐಯ್ಯಂಗಾರ್ ಅವರು, ಅವರಂತೆ ಅನೇಕ ವಿದ್ಯಾವಂತರು, ವಿಜ್ಞಾನಿಗಳು ಜನ್ಮತಾಳಿದ ಗೂರೂರು ಪವಿತ್ರವಾದ ನೆಲ. ವಿದ್ಯಾರ್ಜನೆಗೂ ಅವರವರ ಜೀವನೋಪಾಯಕ್ಕೂ ಕೆಲಮಂದಿ ಹೊರಗಡೆ ಹೋದರು. ಅಪ್ಪ ಹಾಕಿದ ಆಲದಮರ ಎಂದು ಹೊರಗಡೆ ಹೋಗಿ ಜೀವನ ಮಾಡುವಷ್ಟು ಶಕ್ತಿ

ಇಲ್ಲದವರು ಮಾತ್ರ ಈಗ ಉಳಿದುಕೊಂಡಿದ್ದಾರೆ. ಅವರ ಸ್ಥಿತಿ ಡೋಲಾಯಮಾನವಾಗಿದೆ. ಹಿಂದಿನ ಗೊರೂರಿನ ಗತವೈಭವವನ್ನು ನೆನಪಿಸುತ್ತಾ ತಮ್ಮತಮ್ಮಲ್ಲೇ ಕೊರಗುತ್ತಿರುತ್ತಾರೆ.

ಮಾಘಮಾಸದಲ್ಲಿ ಗೊರೂರಿನ ಶ್ರೀಯೋಗಾನರಸಿಂಹಸ್ವಾಮಿಯ ರಥೋತ್ಸವವನ್ನು ಬಹಳ ವಿಜೃಂಭಣೆಯಿಂದ ಹತ್ತು ದಿವಸ ಪೂಜಾಕಾರ್ಯಗಳು ಉತ್ಸವಾದಿಗಳು ಸಂಭ್ರಮದಿಂದ ನಡೆದು, ರಥಸಪ್ತಮಿಯ ದಿವಸ ರಥವನ್ನು ಎಳೆಯುತ್ತಾ ೪೦೦ ವರ್ಷದಿಂದ ಎಳೆಯುತ್ತಿದ್ದು ರಥವು ಶಿಥಿಲವಾಗಿ ಭಕ್ತಾದಿಗಳಿಂದ ಹಣ ಸಂಗ್ರಹ ಮಾಡಿ ಈಗ್ಗೆ ೪ ವರ್ಷದಿಂದ ಹೊಸ ರಥವನ್ನು ಎಳೆಯುತ್ತಿದ್ದಾರೆ. ಈ ರಥೋತ್ಸವದ ಕಾಲದಲ್ಲಿ ಹೊರಗಡೆ ಹೋಗಿದ್ದ ಗೊರೂರಿನ ಹಾಗೂ ಪೊನ್ನಾಥಪುರದ ಜನರೆಲ್ಲ ಸೇರುವರು.

ಎಲ್ಲರೂ ಉತ್ಸಾಹದಿಂದ ಹರ್ಷದಿಂದ ಹತ್ತು ದಿವಸ ಸಂತೋಷದಿಂದ ಇದ್ದು ಅನಂತರ ಅವರವರ ಊರಿಗೆ ಮರಳುತ್ತಾರೆ. ಗೊರೂರಿನ ನೂರಾರು ವರ್ಷಗಳ ಮನೆಗಳು ಆ ಮನೆಯ ಯಜಮಾನರುಗಳು ಇಲ್ಲದೆ ಮಣಮಣ ಎನ್ನುತ್ತಿವೆ. ತುಂಬಾ ಹಳೆಯದಾಗಿರುವ ಮನೆಗಳು ಗಾಳಿಗೆ, ಮಳೆಗೆ, ಸಿಲುಕಿ ಅರ್ಧಂಬರ್ಧ ಬಿದ್ದು ಹೋಗಿವೆ. ಕೆಲವು ಗಟ್ಟಿಮುಟ್ಟಾದ ಮನೆಗಳು ಗಾಳಿ, ಮಳೆಗೆ ಜಗ್ಗದೆ ಹಾಗೆ ಅದರ ಹಿಂದಿನ ನೆನಪನ್ನು ನೆನಪಿಸುತ್ತಿದೆ. ವಾಸವಾಗಿರುವ ಮನೆಗಳನ್ನು ಜನರು ಆಗಾಗ ದುರಸ್ತಿ ಮಾಡಿಸಿಕೊಂಡು ಬದುಕು ಸಾಗಿಸುತ್ತಿದ್ದಾರೆ.

ಈ ಸಂಚಿಕೆಯ ಬರಹಗಾರರು

ಡಾ. ವೈ. ಸಿ. ಭಾನುಮತಿ

ಹಿರಿಯ ಸಂಶೋಧನಾ ಸಹಾಯಕರು,

ಹಸ್ತಪ್ರತಿ ವಿಭಾಗ

ಕು. ಕ. ಅ. ಸಂ. ಮಾನಸಗಂಗೋತ್ರಿ, ಮೈಸೂರು - ೬

ಡಾ. ಎಚ್. ಎಂ. ಹೇಮಲತ

ನಂ. ೪೪, ೭ ನೇ ಮುಖ್ಯರಸ್ತೆ

೫ ನೇ ತಿರುವು, ಸರಸ್ವತಿಪುರಂ

ಮೈಸೂರು -೫೭೦೦೦೯ ದೂರವಾಣಿ : ೨೫೪೧೮೬೫

ಡಾ. ಎಲ್. ಮಂಜುಳಾಕ್ಷಿ

ಸಂಶೋಧಕಿ, ಭಾಷಾವಿಜ್ಞಾನ ವಿಭಾಗ

ಕು. ಕ. ಅ. ಸಂ. ಮಾನಸಗಂಗೋತ್ರಿ, ಮೈಸೂರು - ೬

ಡಾ. ಆರ್. ರಾಮಕೃಷ್ಣ

ಹಿರಿಯ ಶ್ರೇಣಿ ಉಪನ್ಯಾಸಕರು, ಭಾಷಾವಿಜ್ಞಾನ

ಕು. ಕ. ಅ. ಸಂ. ಮಾನಸಗಂಗೋತ್ರಿ, ಮೈಸೂರು - ೬

ಡಾ. ಕೆ. ವಿಶ್ವನಾಥ್

ಕೆ / ಆ ಉಪನಿರ್ದೇಶಕರು

ಪ್ರಸಾರಾಂಗ, ಮಾನಸಗಂಗೋತ್ರಿ ಮೈಸೂರು - ೬

ಡಾ. ಸೀತಾ ಹನಸೋಗೆ

ಅತಿಥಿ ಉಪನ್ಯಾಸಕರು, ಕನ್ನಡ

ಮಹಾರಾಜಾ ಕಾಲೇಜು, ಮೈಸೂರು - ೫

ಜಿ. ಶಿವಪ್ಪ

ಸಂಶೋಧಕರು, ಇತಿಹಾಸ ವಿಭಾಗ

ಮಾನಸಗಂಗೋತ್ರಿ, ಮೈಸೂರು - ೬

ಎಂ. ಅನುಸೂಯ

ಸಂಶೋಧಕಿ, ತತ್ವಶಾಸ್ತ್ರ ವಿಭಾಗ

ಮಾನಸಗಂಗೋತ್ರಿ, ಮೈಸೂರು - ೬

ಡಾ. ಎಚ್. ಎಸ್. ನಾಗಭೂಷಣಯ್ಯ,

ಪ್ರಾಧ್ಯಾಪಕರು

೪, ನಾಲ್ಕನೆಯ ಮೇನ್, ಜಯಲಕ್ಷ್ಮೀಪುರಂ, ಮೈಸೂರು - ೨

ವಿಜಯಸಾರಥಿ ಗೊರೂರು

ಹಳೆ ಅಂಚೆ ಕಛೇರಿ ರಸ್ತೆ,

ಗೊರೂರು ಅಂಚೆ, ಹಾಸನ ಜಿಲ್ಲೆ.

ಕೆ.ಸಂ. ೭೭೯೦-ಎಂ.ಯು.ಪಿ.-೩೦೦ ಪ್ರತಿಗಳು-೨೧-೭-೨೦೦೩